ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 18 ಭಾನುವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 301 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

[redacted]

ಮೈಸೂರು ಫ್ಯಾಷನ್ ವೀಕ್ 7ನೇ ಆವೃತ್ತಿಗೆ ವರ್ಣರಂಜಿತ ತೆರೆ



ಮೈಸೂರು, ಫೆ.17(ಎಂಕೆ)– ಬ್ರಾಂಡ್ ಮೈಸೂರು ಪರಿಕಲ್ಪನೆಯೊಂದಿಗೆ 'ಮೈಸೂರು ಫ್ಯಾಷನ್ ವೀಕ್' 7ನೇ ಆವೃತ್ತಿಗೆ ವರ್ಣರಂಜಿತ ತೆರೆಬಿದ್ದಿತು.

ಮೈಸೂರಿನ ಕೈಗಾರಿಕಾ ಪ್ರದೇಶದಲ್ಲಿರುವ ಮೈಸೂರು ಯೂನಿಯನ್ ಆವರಣದಲ್ಲಿ ನಡೆದ ಎರಡು ದಿನಗಳ ದಕ್ಷಿಣ ಭಾರತ ಅತೀದೊಡ್ಡ ಫ್ಯಾಷನ್ ಶೋ ಸಾಂಸ್ಕೃತಿಕ ನಗರಿ ಮೈಸೂರಿನ ಸಾಂಪ್ರದಾಯಿಕ ಉಡುಗೆಯೊಂದಿಗೆ ಫ್ಯಾಷನ್ ಪ್ರೇಮಿಗಳ ಮನಗೆದ್ದಿತು.

ಬಾಲಿವುಡ್ ನಟಿ ನಿಮ್ರತ್ ಕೌರ್, ಬ್ರಾಂಡ್ ಮೈಸೂರು ಲೋಗೋದಲ್ಲಿರುವ ಅಂಶಗಳನ್ನೊಳಗೊಂಡ ವಿಶೇಷ ವಿನ್ಯಾಸವುಳ್ಳ ಸೀರೆಯುಟ್ಟು ಫ್ಯಾಷನ್ ಶೋಗೆ ಹೊಸ ಮೆರಗು ತಂದರು. ಅವರೊಂದಿಗೆ ಸಾಂಪ್ರದಾಯಿಕ ಹಾಗೂ ಮಾಡ್ರನ್ ಉಡುಗೆಯಲ್ಲಿ ಹೆಜ್ಜೆ ಹಾಕಿದ 54 ಸುಂದರಿಯರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದವರ ಹೃನ್ಮನ ಸೆಳೆದರು.

ಬಿಸಿಲಿನ ತಾಪದಿಂದ ತಡವಾಗಿ ಆರಂಭವಾದ ಫ್ಯಾಷನ್ ವೀಕ್ಷಣೆಗೆ ಎರಡನೇ ದಿನ ಜನಸ್ತೋಮವೇ ಹರಿದು ಬಂದಿತ್ತು. ಫ್ಯಾಷನ್ ಬೆಡಗಿಯರಿಗಿಂತ ನಾವೇನು ಕಮ್ಮಿಯಿಲ್ಲ ಎಂಬಂತೆ ಕಂಗೊಳಿಸುತ್ತಿದ್ದ ತರುಣ–ತರುಣಿಯರು ಮ್ಯೂಸಿಕ್ ಅಬ್ಬರದ ಗುಂಗಿನಲ್ಲಿ ಮೈಮರೆತು, ಸಂಭ್ರಮಿಸಿದರು. ಆಕರ್ಷಕ ವಸ್ತ್ರವಿನ್ಯಾಸದಲ್ಲಿ ಬೆಕ್ಕಿನಂತೆ ಬಳುಕುತ್ತಾ ಕಣ್ ಸನ್ನೆಯಲ್ಲೇ ಗಮನ ಸೆಳೆದ ಫ್ಯಾಷನ್ ತಾರೆಯರು ಮೈಸೂರು ಫ್ಯಾಷನ್ ವೀಕ್ ಯಶಸ್ಸಿಗೆ ಕಾರಣರಾದರು.

ಮೈಸೂರು ಪ್ರವಾಸೋದ್ಯಮ ಕೇಂದ್ರ: ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮೈಸೂರು ಫ್ಯಾಷನ್ ವೀಕ್ ಆಯೋಜಕರೂ ಆದ ಖ್ಯಾತ ವಸ್ತ್ರವಿನ್ಯಾಸಕಿ ಜಯಂತಿ ಬಲ್ಲಾಳ್, ಮೈಸೂರು ಪ್ರವಾಸಿಗರ ಕೇಂದ್ರಸ್ಥಾನವಾಗಿದ್ದು, ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಮೈಸೂರಿಗೆ ಭೇಟಿ ನೀಡುತ್ತಾರೆ. ಮೈಸೂರು ಸಿಲ್ಕ್ ಸೀರೆ ಸೇರಿದಂತೆ ಮೈಸೂರಿನ ವೈಶಿಷ್ಟ್ಯತೆಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ದೃಷ್ಟಿಯಿಂದ 'ಮೈಸೂರು ಫ್ಯಾಷನ್ ವೀಕ್' ಆಯೋಜನೆ ಮಾಡಲಾಗುತ್ತಿದೆ. 7ನೇ ಆವೃತ್ತಿ ಯಶಸ್ವಿಯಾಗಿದ್ದು, ಮುಂದಿನ ದಿನಗಳಲ್ಲಿ ಪ್ರವಾಸೋದ್ಯಮ ಇಲಾಖೆ ಸಹಕಾರ ನೀಡಿದರೆ ಇನ್ನಷ್ಟು ದೊಡ್ಡಮಟ್ಟದಲ್ಲಿ ಫ್ಯಾಷನ್ ಶೋ ಆಯೋಜಿಸಲಾಗುವುದು. ಇದರಿಂದ ಮೈಸೂರಿನ ಪ್ರವಾಸೋದ್ಯಮಕ್ಕೆ ಅನುಕೂಲವಾಗುತ್ತದೆ ಎಂದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡಿದರೆ ಸುಪ್ರೀಂಕೋರ್ಟ್ ಮೊರೆ

ಜಾತ್ಯಾತೀತ ಜನತಾದಳ ಮುಖಂಡ ಎಚ್ಚರಿಕೆ

ಮೈಸೂರು, ಫೆ.17(ಜಿಎ)– ರಾಜ್ಯದಲ್ಲಿ ಪಾಲಿಕೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಲೋಕಸಭಾ ಚುನಾವಣೆ ನಂತರ ನಡೆಸಲಾಗುವುದೆಂಬ ಮಾತು ಕೇಳಿಬಂದಿದೆ. ಇದು ಸರಿಯಲ್ಲ. ಒಂದು ವೇಳೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡಿದಲ್ಲಿ ಸುಪ್ರೀಂಕೋರ್ಟ್ ಮೊರೆ ಹೋಗಬೇಕಾಗುತ್ತದೆ ಎಂದು ಜೆಡಿಎಸ್ ಮುಖಂಡ ಅಯೂಬ್ ಖಾನ್ ಎಚ್ಚರಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಅಯೂಬ್ ಖಾನ್ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ರಾಜ್ಯ ಬಜೆಟ್ ಎಲ್ಲ ವರ್ಗದ ಅಭಿವೃದ್ಧಿಗೆ ಗಮನ ನೀಡಿದೆ ಎಂದು ಸ್ವಾಗತಿಸಿದರು. ಮೈಸೂರು ನಗರ ಪಾಲಿಕೆ ಸೇರಿದಂತೆ ರಾಜ್ಯದ 7 ನಗರ ಪಾಲಿಕೆಗಳ 4992 ವಾರ್ಡ್‌ಗಳು ಮತ್ತು ನಗರಸಭೆ, ಪುರಸಭೆಗಳ ಚುನಾವಣೆ ನಡೆಯಬೇಕಿದೆ. ಆದರೆ, ಲೋಕಸಭಾ ಚುನಾವಣೆಯ ನಂತರ ಈ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುತ್ತದೆ ಎಂದು ಹೇಳುತ್ತಿರುವುದು ಸಂವಿಧಾನ ವಿರುದ್ಧದ ನಡೆಯಾಗಿದೆ ಎಂದರು.

ಇದೇ ರೀತಿ 2013ರಲ್ಲಿ ವಿಳಂಬವಾಗಿದ್ದ ವೇಳೆ ಸುಪ್ರೀಂಕೋರ್ಟ್ ಮೊರೆ ಹೋಗಿದ್ದ ಕಾರಣ ಚುನಾವಣೆ ನಡೆಸಿದ್ದಾರೆ. ಈಗಲೂ ಅದೇ ರೀತಿ ಮಾಡಬಾರದು. ಚುನಾವಣಾ ಆಯೋಗದ ಅಧಿಕಾರಿಗಳು ಸರ್ಕಾರದ ಕೈಗೊಂಬೆಯಂತೆ ವರ್ತಿಸಬಾರದು. ಮೂರು ದಿನಗಳ ಒಳಗಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಬಗ್ಗೆ ಘೋಷಣೆ ಮಾಡದಿದ್ದರೆ ಮತ್ತೆ ನ್ಯಾಯಾಲಯದ ಬಾಗಿಲು ತಟ್ಟಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಮಠಾಧಿಪತಿ ವಿವಾದ; ರಂಭಾಪುರಿ ಶ್ರೀಗಳ ಕಾರಿಗೆ ಚಪ್ಪಲಿ ಎಸೆತ!


ಬಾಗಲಕೋಟೆ, ಫೆ.17– ಪಂಚಗೃಹ ಗುರುಲಿಂಗೇಶ್ವರ ಮಠದ ಪೀಠಾಧಿಪತಿ ಆಯ್ಕೆ ವಿವಾದಕ್ಕೆ ಸಂಬಂಧಿಸಿದಂತೆ ರಂಭಾಪುರಿ ಶ್ರೀಗಳ ವಿರುದ್ಧ ಮಠದ ಭಕ್ತರು ಪ್ರತಿಭಟನೆ ನಡೆಸಿದ್ದು, ಅವರ ಕಾರಿಗೆ ಚಪ್ಪಲಿ ಎಸೆದಿದ್ದಾರೆ. ಬಾಗಲ ಕೋಟೆ ತಾಲೂಕಿನ ಕಲಾದಗಿಯಲ್ಲಿ ಈ ಘಟನೆ ನಡೆದಿದೆ. ಉದಗಟ್ಟಿ ಗ್ರಾಮಕ್ಕೆ ಕಾರ್ಯಕ್ರಮವೊಂದಕ್ಕೆ ತೆರಳುತ್ತಿದ್ದ ಶ್ರೀಗಳ ಕಾರನ್ನು ಅಡ್ಡಗಟ್ಟಿದ್ದ ಭಕ್ತರು, ವಿವಾದ ಕೋರ್ಟ್‌ನಲ್ಲಿದ್ದಾಗಲೇ ಗಂಗಾಧರ ಸ್ವಾಮೀಜಿ ಅವರಿಂದ ಮಠದ ದುರಸ್ತಿ, ಹೊಲದ ಉಳುಮೆ ಮಾಡಿದ್ದಕ್ಕೆ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ಥಳದಲ್ಲಿ ತಳ್ಳಾಟ, ನೂಕಾಟ ನಡೆದು ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು ಕೂಡಲೇ ಪ್ರವೇಶಿಸಿದ ಪೊಲೀಸರು ಪ್ರತಿಭಟನಾಕಾರರನ್ನು ಚದುರಿಸಿದರು.



ಕಲಾದಗಿಯ ಗುರುಲಿಂಗೇಶ್ವರ ಪಂಚಗ್ರಹ ಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಲಿಂಗೈಕ್ಯರಾದ ಬಳಿಕ ಅವರ ಉತ್ತರಾಧಿಕಾರಿಯನ್ನಾಗಿ ರಂಭಾಪುರಿ ಶ್ರೀಗಳು ಮಧ್ಯಸ್ಥಿಕೆ ವಹಿಸಿ ತಮ್ಮದೇ ಪೀಠದ ಶಿಷ್ಯರಾಗಿರುವ ಕೆ.ಎಂ. ಗಂಗಾಧರ ಸ್ವಾಮೀಜಿಯನ್ನು ನೇಮಕ ಮಾಡಿದ್ದರು. ಗ್ರಾಮಸ್ಥರ ಸಮ್ಮುಖದಲ್ಲಿ ಉತ್ತರಾಧಿಕಾರಿ ನೇಮಕ ಮಾಡದೇ ಏಕಪಕ್ಷೀಯವಾಗಿ ರಂಭಾಪುರಿ ಶ್ರೀಗಳು ನಿರ್ಧಾರ ತೆಗೆದುಕೊಂಡಿದ್ದಾರೆಂದು ಕೆಲ ಗ್ರಾಮಸ್ಥರು ಆರೋಪಿಸಿದ್ದರು. ನಂತರ ರಂಭಾಪುರಿ ಶ್ರೀಗಳ ವಿರೋಧಿ ಬಣ ನೂತನ ಸ್ವಾಮೀಜಿಯನ್ನಾಗಿ ಮಹಾಂತ ದೇವರು ಸ್ವಾಮೀಜಿಯನ್ನ ಕರೆತಂದು ಅದ್ದೂರಿ ಮೆರವಣಿಗೆ ಮಾಡಿತ್ತು. ಪರ, ವಿರೋಧ ಬಣಗಳು ಹುಟ್ಟಿಕೊಂಡು ಪ್ರಕರಣ ಈಗ ಜಿಲ್ಲಾ ನ್ಯಾಯಾಲಯದ ಮೆಟ್ಟಿಲೇರಿದೆ. ಇಂದು ಗಂಗಾಧರ ಸ್ವಾಮೀಜಿ ಮಠದ ಹೊಲದ ಉಳುಮೆಗೆ ಮುಂದಾದಾಗ ಭಕ್ತರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಠದ ಒಟ್ಟು 72 ಎಕ್ರೆ ಭೂಮಿಯನ್ನು ರಂಭಾಪುರಿ ಶ್ರೀ ಮತ್ತು ಗಂಗಾಧರ ಸ್ವಾಮೀಜಿ ಲಪಟಾಯಿಸಲು ಮುಂದಾಗಿದ್ದಾರೆ ಎನ್ನುವುದು ಭಕ್ತರ ಆರೋಪವಾಗಿದೆ.

ನಿಧನ

ಜಾನ್ ಮಸ್ಕರೇನ್ಹಸ್



ಮೈಸೂರು,ಫೆ.17–ಮೈಸೂರಿನ ಬೋಗಾದಿ ಚಂದನ ಬಡಾವಣೆ 3ನೇ ಕ್ರಾಸ್ ನಿವಾಸಿ ಜಾನ್ ಮಸ್ಕರೇನ್ಹಸ್(74) ಶುಕ್ರವಾರ ನಿಧನರಾದರು. ಮೃತರು ಪತ್ನಿ ಜೂಲಿಯಾನ ಮಸ್ಕರೇನ್ಹಸ್, ಪುತ್ರರಾದ ಪ್ರದೀಪ್, ಪ್ರವೀಣ್, ಪುತ್ರಿ ಪ್ರಫುಲ್ಲ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ(ಫೆ17) ಮಧ್ಯಾಹ್ನ 3.30ಕ್ಕೆ ಬೆಳವಾಡಿ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೈವ್ ಮೈಸೂರು–2024 ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ

ಸೋಂಕಿನಿಂದ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ಅರಿವು ಅಗತ್ಯ

ಮೈಸೂರು,ಫೆ.17(ಜಿಎ)–ಮೈಸೂರಿನ ಆಶಾಕಿರಣ ಚಾರಿಟೆಬಲ್ ಟ್ರಸ್ಟ್ ಮತ್ತು ಏಡ್ಸ್ ಸೊಸೈಟಿ ಆಫ್ ಇಂಡಿಯಾ ಸಹಯೋಗದೊಂದಿಗೆ ನಗರದ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಶನಿವಾರ ಏರ್ಪಡಿಸಿದ್ದ ಎರಡು ದಿನಗಳ ಎಚ್‌ಐವಿಇ(ಹೈವ್) ಮೈಸೂರು–2024 ರಾಷ್ಟ್ರೀಯ ಸಮ್ಮೇಳನಕ್ಕೆ ಎನ್.ರಂಗರಾವ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಅರ್ಜುನರಂಗ ಚಾಲನೆ ನೀಡಿದರು.



ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಶನಿವಾರ ಏರ್ಪಡಿಸಿದ್ದ ಎಚ್‌ಐವಿಇ (ಹೈವ್) ಮೈಸೂರು–2024 ರಾಷ್ಟ್ರೀಯ ಸಮ್ಮೇಳನದಲ್ಲಿ ಏಡ್ಸ್ ಸೊಸೈಟಿ ಆಫ್ ಇಂಡಿಯಾ ಅಧ್ಯಕ್ಷ ಡಾ.ಐ.ಎಸ್.ಗಿಲಾಡಾ ಮಾತನಾಡಿದರು.

ನಂತರ ಮಾತನಾಡಿದ ಅವರು, ಸಮುದಾಯದಲ್ಲಿ ಸೋಂಕಿನಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳು ಹೆಚ್ಚಾಗಬೇಕು. ಈ ಬಗ್ಗೆ ಅವರಲ್ಲಿನ ಗೀಳು, ತಾರತಮ್ಯ ಹೋಗಲಾಡಿಸುವ ಕುರಿತು ಯೋಜನೆ ರೂಪಿಸಬೇಕಿದ್ದು, ಎಚ್‌ಐವಿ ರೋಗದ ಬಗ್ಗೆ ಜನರಲ್ಲಿ ಕೀಳರಿಮೆ ಇದೆ. ಅದನ್ನು ಹೋಗಲಾಡಿಸಿ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದರು.

ಮಾಹಿತಿ ಕೊರತೆಯಿಂದ ಅಮಾಯಕರು ಏಡ್ಸ್ ರೋಗಕ್ಕೆ ಬಲಿಯಾಗುತ್ತಿದ್ದಾರೆ. ಸರಿಯಾದ ಮಾಹಿತಿಯನ್ನು ಜನಸಾಮಾನ್ಯರಿಗೆ ತಲುಪಿಸುವ ಮೂಲಕ ಏಡ್ಸ್ ಸೋಂಕು ಹರಡುವುದನ್ನು ತಡೆಗಟ್ಟಬಹುದು. ಈ ಹಿನ್ನೆಲೆಯಲ್ಲಿ ವೈದ್ಯರ ಸಾಮಾಜಿಕ ಕಳಕಳಿ ಹಾಗೂ ಅವರು ನೀಡುತ್ತಿರುವ ಸೇವೆ ಪ್ರಶಂಸನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಏಡ್ಸ್ ಸೊಸೈಟಿ ಆಫ್ ಇಂಡಿಯಾ ಅಧ್ಯಕ್ಷ ಡಾ.ಐ.ಎಸ್.ಗಿಲಾಡ ಮಾತನಾಡಿ, ಚಿಕಿತ್ಸೆ ಬಗ್ಗೆ ಅರಿವಿಲ್ಲದೇ ಸೂಕ್ತ ಚಿಕಿತ್ಸೆ ಪಡೆಯುತ್ತಿಲ್ಲ. ಎಲ್ಲರಂತೆ ಬದುಕುವ ಅವಕಾಶವಿದ್ದರೂ, ಸೋಂಕಿನೊಂದಿಗೆ ಬದುಕುತ್ತಿರುವವರು ಚಿಕಿತ್ಸೆಯಿಂದ ದೂರ ಉಳಿಯುವಂತಾಗಿದೆ. ಈ ಅಂಶಗಳನ್ನು ಪರಿಗಣಿಸಿ ಕಾರ್ಯಕ್ರಮ ರೂಪಿಸಿ ಚಿಕಿತ್ಸೆ ದೊರೆಯುವಂತೆ ಮಾಡಬೇಕಿದೆ' ಎಂದರು.

ಎಚ್‌ಐವಿ ಮಹಾಮಾರಿಗೆ ತುತ್ತಾದವರಲ್ಲಿ ಕೀಳರಿಮೆ ಹೋಗಲಾಡಿಸಿ, ಜೀವದ ಉತ್ಸಾಹ ಮೂಡಿಸುವುದು ಸವಾಲಿನ ಕೆಲಸ. ಈ ಹಿನ್ನೆಲೆಯಲ್ಲಿ ನಿರಂತರ ಸಂಶೋಧನೆ, ಮಾಹಿತಿ ವಿನಿಮಯ ಹಾಗೂ ಮಾರ್ಗದರ್ಶನ ಕಾರ್ಯಕ್ರಮ ಆಯೋಜಿಸುವ ಮೂಲಕ ಸೋಂಕಿತರ ಹಿತರಕ್ಷಣೆಯಲ್ಲಿ ಆಶಾಕಿರಣ ಆಸ್ಪತ್ರೆಯ ಸೇವೆ ಶ್ಲಾಘನೀಯ ಎಂದರು. ಸಮ್ಮೇಳನದಲ್ಲಿ ಪ್ರಾತ್ಯಕ್ಷಿಕೆ ಮೂಲಕ ಉಪನ್ಯಾಸ ನೀಡಲಾಯಿತು. ದೇಶದ ವಿವಿಧೆಡೆಯಿಂದ 150ಕ್ಕೂ ಹೆಚ್ಚು ಎಚ್‌ಐವಿ ತಜ್ಞರು ಭಾಗವಹಿಸಿದ್ದರು. ಎಎಸ್ಐ ಅಧ್ಯಕ್ಷ ಡಾ.ದಿಲೀಪ್ ಮತಾಯಿ, ಡಾ.ಎಸ್.ಎನ್.ಮೋತಿ, ಕೆ.ಎಸ್.ಗುರುರಾಜ, ಡಾ.ಮಹೇಶ್‌ಕುಮಾರ್ ಉಪಸ್ಥಿತರಿದ್ದರು.

ಗಾಂಧಿನಗರದ ಅಭಿವೃದ್ಧಿಗೆ ಹಣ ನೀಡದೆ ಅನ್ಯಾಯ ಆರೋಪ

ಪಾಲಿಕೆ ಮುಂದೆ ಪಾಲಿಕೆ ಮಾಜಿ ಸದಸ್ಯೆ ಏಕಾಂಗಿ ಪ್ರತಿಭಟನೆ

ಮೈಸೂರು,ಫೆ17(ಜಿಎ)–ಎಸ್‌ಸಿ, ಎಸ್‌ಟಿಗೆ ಮೀಸಲಾದ ಹಣವನ್ನು ಗಾಂಧಿನಗರದ ಅಭಿವೃದ್ಧಿಗೆ ನೀಡದೆ ಪಾಲಿಕೆ ಅಧಿಕಾರಿಗಳು ಅನ್ಯಾಯವೆಸಗಿದ್ದಾರೆ ಎಂದು ಆರೋಪಿಸಿ ಪಾಲಿಕೆ ಮಾಜಿ ಸದಸ್ಯೆ ಡಾ.ಅಶ್ವಿನಿ ಶರತ್ ಪಾಲಿಕೆ ಕಚೇರಿ ಮುಂಭಾಗ ಶನಿವಾರ ಏಕಾಂಗಿ ಪ್ರತಿಭಟನೆ ನಡೆಸಿದರು.



ಮೈಸೂರು ಮಹಾನಗರಪಾಲಿಕೆ ಮುಂಭಾಗ ಪಾಲಿಕೆ ಮಾಜಿ ಸದಸ್ಯೆ ಡಾ.ಅಶ್ವಿನಿ ಶರತ್ ಶನಿವಾರ ಏಕಾಂಗಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಪಾಲಿಕೆ ವತಿಯಿಂದ 2023–24ನೇ ಸಾಲಿನ ನಿಧಿಯಡಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೂರು ಪುಟಗಳ ಕ್ರಿಯಾಯೋಜನೆ ಸಿದ್ಧಪಡಿಸಿದ್ದು, ಅದರಲ್ಲಿ ಪರಿಶಿಷ್ಟ ಜಾತಿಯವರು ಹೆಚ್ಚಿರುವ ಗಾಂಧಿನಗರಕ್ಕೆ ಯಾವುದೇ ಅನುದಾನ ನೀಡಿಲ್ಲ ಎಂದರು.

ಗಾಂಧಿನಗರದಲ್ಲಿ ಸುಮಾರು 2 ಸಾವಿರಕ್ಕೂ ಹೆಚ್ಚು ಪರಿಶಿಷ್ಟ ಜಾತಿಯ ಜನರು ವಾಸ ಮಾಡುತ್ತಿದ್ದಾರೆ. ಇದೆಲ್ಲದರ ಮಾಹಿತಿ ಇದ್ದರೂ ಪಾಲಿಕೆ ಆಯುಕ್ತರು, ಶಾಸಕ ತನ್ವೀರ್‌ಸೇಠ್ ಪ್ರತಿ ವರ್ಷವೂ ಅನುದಾನ ಹಂಚಿಕೆಯಲ್ಲಿ ಅನ್ಯಾಯ ಮಾಡುತ್ತಲೇ ಬಂದಿದ್ದಾರೆ. ಇದರ ವಿರುದ್ಧ ಪ್ರತಿಭಟನೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಕಿಡಿಕಾರಿದರು.

ಗಾಂಧಿನಗರದಲ್ಲಿ ವಿದ್ಯಾರ್ಥಿಗಳು, ಅಂಗವಿಕಲರು, ವೃದ್ಧರು, ಅನಾರೋಗ್ಯದಿಂದ ಬಳಲುತ್ತಿರುವವರಿದ್ದಾರೆ. ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿದ್ದಾರೆ. ಹೊಸ ಉದ್ಯಮದೊಂದಿಗೆ ಜೀವನ ಕಟ್ಟಿಕೊಳ್ಳುವ ನಿರೀಕ್ಷೆಯ ಯುವಕ ಯುವತಿಯರಿದ್ದಾರೆ. ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕಾದ ಹಲವಾರು ಬೇಡಿಕೆಗಳಿವೆ. ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಅಭಿವೃದ್ಧಿ ಕಾಮಗಾರಿಯ ಕ್ರಿಯಾಯೋಜನೆಗೆ ಅನುಮೋದನೆ ನೀಡಿದ್ದರೂ ಅಧಿಕಾರಿಗಳು ಸದಸ್ಯರ ಅವಧಿ ಪೂರ್ಣಗೊಂಡ ನಂತರ ದುರುದ್ದೇಶದಿಂದ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಅಧಿಕಾರಿಗಳು ದುರುದ್ದೇಶಪೂರ್ವಕವಾಗಿ ಸರ್ಕಾರದ ಮಾರ್ಗಸೂಚಿ ಉಲ್ಲಂಘಿಸಿದ್ದಾರೆ. ಕೂಡಲೇ ಗಾಂಧಿನಗರ ಅಭಿವೃದ್ಧಿಗೆ 2023–24ನೇ ಸಾಲಿನ ಪಾಲಿಕೆ ನಿಧಿಯಡಿ ಸಿದ್ಧಪಡಿಸಿರುವ ಶೇ.24.10, ಶೇ.7.25 ಮತ್ತು ಶೇ.5ರ ಕಾರ್ಯಕ್ರಮದಲ್ಲಿ ಹೆಚ್ಚುವರಿ ಅನುದಾನ ನೀಡಬೇಕು. ಇಲ್ಲದಿದ್ದರೆ ಕಾನೂನು ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳ

ಬಿಜೆಪಿ ಕಾರ್ಯಕರ್ತರ ಅಯೋಧ್ಯೆ ಪ್ರವಾಸಕ್ಕೆ ಚಾಲನೆ

ಫೆ.21ಕ್ಕೆ ಶ್ರೀರಾಮಮಂದಿರದಲ್ಲಿ ಬಾಲರಾಮನ ದರ್ಶನ ಭಾಗ್ಯ



ಮೈಸೂರು,ಫೆ17(ಪಿಎಂ)– ಮೈಸೂರು, ಕೊಡಗು ಮತ್ತು ಚಾಮರಾಜ ನಗರ ಜಿಲ್ಲೆಗಳ ಬಿಜೆಪಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಶನಿವಾರ ರಾತ್ರಿ ಆಸ್ಥಾ ವಿಶೇಷ ರೈಲಿನಲ್ಲಿ ಮೈಸೂರಿನಿಂದ ಅಯೋಧ್ಯೆಗೆ ಪ್ರಯಾಣ ಬೆಳೆಸಿದರು.

ಮೈಸೂರು ನಗರದಿಂದ 400, ಮೈಸೂರು ಗ್ರಾಮಾಂತರದಿಂದ 530, ಕೊಡಗು ಜಿಲ್ಲೆಯಿಂದ 200 ಮತ್ತು ಚಾಮರಾಜನಗರ ಜಿಲ್ಲೆಯಿಂದ 200 ಮಂದಿ ಸೇರಿ ಒಟ್ಟು 1,330 ಮಂದಿ ಪ್ರಯಾಣ ಬೆಳೆಸಿದರು. ಇವರು ಫೆ.21ರಂದು ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಬಾಲರಾಮನ ವಿಶೇಷ ದರ್ಶನ ಪಡೆಯಲಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣದ ಫ್ಲಾಟ್ ಫಾರಂ 6ರಲ್ಲಿ ಹಮ್ಮಿಕೊಂಡಿದ್ದ ಸಭಾ ಕಾರ್ಯಕ್ರಮದಲ್ಲಿ ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಕೇಂದ್ರ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಜಗದೀಶ್ ಹಿರೇಮನಿ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರನ್ನು ಅಯೋಧ್ಯೆಗೆ ಬೀಳ್ಕೊಟ್ಟರು. ಬಾಲರಾಮ ವಿಗ್ರಹದ ಶಿಲ್ಪಿ ಅರುಣ್ ಯೋಗಿರಾಜ್ ಮತ್ತು ಇವರ ತಾಯಿ ಸರಸ್ವತಿ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಬಳಿಕ ರಾತ್ರಿ 12.15ಕ್ಕೆ ಅರುಣ್ ಯೋಗಿರಾಜ್ ಅಯೋಧ್ಯೆಯ ವಿಶೇಷ ರೈಲಿಗೆ ಹಸಿರು ನಿಶಾನೆ ತೋರಿಸಿದರು. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರು ಹಾಗೂ ಅಯೋಧ್ಯೆ ಪ್ರಯಾಣಿಕರಲ್ಲಿ ಒಬ್ಬರಾದ ಬಿ.ವಿ.ಮಂಜುನಾಥ್, ಫೆ.20ರಂದು ಮಧ್ಯಾಹ್ನ ಅಯೋಧ್ಯೆ ತಲುಪಲಿದ್ದೇವೆ. ಫೆ.21ಕ್ಕೆ ನಮಗೆ ಬಾಲರಾಮನ ವಿಶೇಷ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಂದು ರಾತ್ರಿ ರೈಲಿನಲ್ಲಿ ಮೈಸೂರಿನತ್ತ ಪ್ರಯಾಣ ಬೆಳೆಸಲಿದ್ದು, ಫೆ.24ರ ಬೆಳಗ್ಗೆ ಮೈಸೂರಿಗೆ ಮರಳಲಿದ್ದೇವೆ. ಈ ರೀತಿಯಲ್ಲಿ ರಾಜ್ಯದಿಂದ ಹೊರಡುತ್ತಿರುವ ಅಯೋಧ್ಯೆಯ 6ನೇ ರೈಲು ನಮ್ಮದಾಗಿದೆ. ಈ ವಿಶೇಷ ರೈಲು ಮಧ್ಯೆ ಎಲ್ಲಿಯೂ ನಿಲುಗಡೆ ಮಾಡುವುದಿಲ್ಲ. ಪ್ರಯಾಣ, ಊಟ ಮತ್ತು ವಸತಿ ಸೇರಿದಂತೆ ತಲಾ 3 ಸಾವಿರ ರೂ.ಗಳಲ್ಲಿ ಈ ಪ್ರವಾಸ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಎಂಡಿ ಪೆಥಾಲಜಿಯಲ್ಲಿ ಡಾ.ಶೆರ್ಲಿ ಮಾರಿಯಾ ಮೂರನೇ ರ‍್ಯಾಂಕ್

ಮೈಸೂರು, ಫೆ.17–ಮೈಸೂರಿನ ಬೋಗಾದಿ ಪ್ರಶಾಂತನಗರದ ನಿವಾಸಿ ಹಾಗೂ ರಾಜ್ಯ ಜಿಎಸ್‌ಟಿ ಡೆಪ್ಯುಟಿ ಕಮಿಷನರ್ ವಿಲ್ಪ್ರೆಡ್ ಡಿ ಸೋಜಾ ಮತ್ತು ಶ್ರೀಮತಿ ಐರಿನ್ ಡಿ ಸೋಜಾ ಪುತ್ರಿ ಡಾ.ಶೆರ್ಲಿ ಮಾರಿಯಾ ಡಿ ಸೋಜಾ ಎಂಡಿ ಪೆಥಾಲಜಿಯಲ್ಲಿ 3ನೇ ರ‍್ಯಾಂಕ್ ಪಡೆದಿದ್ದಾರೆ. ಮಂಗಳೂರಿನ ಎಜೆ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿ, 2023ರ ಜುಲೈನಲ್ಲಿ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದಿಂದ ನಡೆದ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.



ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಫೆ.17– ಆಹಾರ ತಯಾರಿಕಾ ವಿಭಾಗಗಳಲ್ಲಿ ಉಚಿತವಾಗಿ ಒಂದು ತಿಂಗಳ ಅಲ್ಪಾವಧಿ ತರಬೇತಿಯನ್ನು ಪ್ರಾರಂಭಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ಇಂದಿರಾ ನಗರದ ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಫುಡ್ ಕ್ರಾಫ್ಟ್ ಇನ್‌ಸ್ಟಿಟ್ಯೂಟ್ ದೂ.ಸಂ: 6362018821, 0821 –2445388, ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.2.2024 ಭಾನುವಾರ, ಮಳೆ ನಕ್ಷತ್ರ: ಭರಣಿ 6.2.2024 ರಿಂದ 19.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಬೆಳಗ್ಗೆ 10ಕ್ಕೆ ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಮಧ್ಯಾಹ್ನ 1ಕ್ಕೆ ಸಗ್ರಹಮುಖ ಚಂಡಿಯಾಗ, ಪೂರ್ಣಾಹುತಿ, ಬಲಿಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ ಸ್ಥಳ: ತ್ರಯೀನ್ಯಾಸ್ ಫೌಂಡೇಷನ್ ಆವರಣ, ಜಯಲಕ್ಷ್ಮಿಪುರಂ.

■ **ರಾಮಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಧಾರ್ಮಿಕ ದತ್ತಿ ಇಲಾಖೆ :** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿಣೇಶ್ವರಸ್ವಾಮಿಯವರ ಬ್ರಹ್ಮೋತ್ಸವ, ಹಗಲು ರಾತ್ರಿ ಪೂಜೆ, ಬಲಿಪ್ರಧಾನ ಉತ್ಸವ, ಸ್ಥಳ: ಶ್ರೀ ತ್ರಿಣೇಶ್ವರಸ್ವಾಮಿ ದೇವಸ್ಥಾನ, ಅರಮನೆ ಆವರಣ.

■ **ಎನ್.ಆರ್.ಮೊಹಲ್ಲಾ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಶ್ರೀ ತ್ಯಾಗರಾಜರ ಹಾಗೂ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ, ಬೆಳಗ್ಗೆ 9ರಿಂದ ನಾದಸ್ವರ ಮತ್ತು ಶ್ರೀ ತ್ಯಾಗರಾಜರ, ಶ್ರೀ ಪುರಂದರದಾಸರ ಕೃತಿಗಳ ಹಾಡುಗಾರಿಕೆ, ಬೆ. 11ರಿಂದ ಎಸ್.ರಾಮಪ್ರಸಾದ್, ಡಾ.ರಮಾ ವಿ. ಬೆಣ್ಣೂರು ಅವರಿಗೆ ಸನ್ಮಾನ ಸಮಾರಂಭ, ಮ. 12ರಿಂದ ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನ, ಮ. 1.15ಕ್ಕೆ ಮಹಾಮಂಗಳಾರತಿ, ಶ್ರೀ ಪ್ರಸನ್ನ ಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ.

■ **ಸಪ್ತಗಿರಿ ಕ್ಷೇಮಾಭಿವೃದ್ಧಿ ಸಂಘ:** ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪುರಸ್ಕಾರ, ನಿವೃತ್ತಿ, ಬಡ್ತಿ ಹೊಂದಿರುವವರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ: ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಡಿ.ರಘು, ಅಧ್ಯಕ್ಷತೆ: ಎಲ್‌ಐಸಿ ನಿವೃತ್ತ ಉನ್ನತ ಸಹಾಯಕ ಅಧಿಕಾರಿ ಎಂ. ಸಿದ್ದರಾಜು, ಮುಖ್ಯ ಅತಿಥಿಗಳು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಲ್ಲುಂಡಿ ಮಹದೇವಸ್ವಾಮಿ, ಎಸ್‌ಬಿಐ ನಿವೃತ್ತ ವ್ಯವಸ್ಥಾಪಕ ಎಲ್.ಪ್ರೇಮ್‌ಕುಮಾರ್, ಕಾರ್ಮಿಕ ಕಲ್ಯಾಣಾಧಿಕಾರಿ ಎಂ.ರಶ್ಮಿ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಕಿರಿಯ ಸಂಶೋಧಕರಾದ ಡಾ.ಎಂ.ವಿಮಲ, ಸಪ್ತಗಿರಿ ಕ್ಷೇಮಾಭಿವೃದ್ಧಿ ಸಂಘ ಗೌರವ ಅಧ್ಯಕ್ಷ ಎನ್. ರಾಜ್‌ಕುಮಾರ್, ಸಂಘದ ಅಧ್ಯಕ್ಷ ಆರ್. ರಾಜೇಶ್, ಕಾರ್ಯದರ್ಶಿ ಎಸ್. ರಾಜಪ್ಪ, ಖಜಾಂಚಿ ಪಿ. ನಿಂಗರಾಜು, ಸ್ಥಳ: ಕಲಾ ಮಂದಿರದ ಕಿರು ರಂಗ ಮಂದಿರ, ಬೆಳಗ್ಗೆ 10ಕ್ಕೆ.

■ **ನೇತಾಜಿ ಎಜುಕೇಷನ್ ಫೌಂಡೇಷನ್:** ಭಾರತೀಯ ರೈಲ್ವೆ ಇಲಾಖೆಯಲ್ಲಿನ ಅಸಿಸ್ಟೆಂಟ್ ಲೋಕೋ ಪೈಲಟ್ ಹುದ್ದೆಗಳಿಗೆ ತರಬೇತಿ, ಸ್ಥಳ: ಫೌಂಡೇಷನ್ ಕಚೇರಿ, ಜಗನ್ಮೋಹನ ಅರಮನೆ ಹತ್ತಿರ, ಬೆಳಗ್ಗೆ 10ರಿಂದ.

■ **ಸಮೃದ್ಧಿ ಟ್ರಸ್ಟ್ :** ಉಚಿತ ಸೌಂದರ್ಯವರ್ಧಕ ವಸ್ತುಗಳ ತಯಾರಿಕಾ ತರಬೇತಿ ಶಿಬಿರ, ಸ್ಥಳ: ನಂ. 4, 15ನೇ ಕ್ರಾಸ್, 2ನೇ ಮುಖ್ಯ ರಸ್ತೆ, ಗೋಕುಲಂ, ಬೆಳಗ್ಗೆ 10 ರಿಂದ.

■ **ಪ್ರೊ. ಕೆ. ವೆಂಕಟಗಿರಿಗೌಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಷತ್, ಹನ್ಯಾಳು ಪ್ರಕಾಶನ :** ವಾಣಿಜ್ಯ ತೆರಿಗೆ ಇಲಾಖೆ ವಿಶ್ರಾಂತ ಅಡಿಷನಲ್ ಕಮಿಷನರ್ ಆಲಕೆರೆ ಜೆ. ರಾಮಲಿಂಗೇಗೌಡ ಅವರು ರಚಿಸಿರುವ ಕೊಳಲು ಅಳಲು, ಚುಟುಕು–ಚುರುಕು ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಕುರಿತು ಮಾತನಾಡುವವರು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕರಾದ ಡಾ. ಪ್ರೀತಿ ಶುಭಚಂದ್ರ, ಸರ್ಕಾರಿ ಪದವಿಪೂರ್ವ ಕಾಲೇಜು, ಹರವೆ, ಚಾಮರಾಜನಗರ ಪ್ರಾಂಶುಪಾಲ ಮಹೇಶ್ ಬಿ. ಹರವೆ, ಅಧ್ಯಕ್ಷತೆ : ಹಾವೇರಿ ಜಾನಪದ ವಿವಿ ವಿಶ್ರಾಂತ ಕುಲಪತಿ ಡಾ. ಅಂಬಳಿಕೆ ಹಿರಿಯಣ್ಣ, ಸ್ಥಳ: ರೋಟರಿ ವೆಸ್ಟ್, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಸಾಹಿತ್ಯ ದಾಸೋಹ:** ಮೈಸೂರು ಸಾಹಿತ್ಯ ದಾಸೋಹದ ಶತಕೋತ್ಸವ ಸಮಾರಂಭ, ಸಾಹಿತ್ಯ ಶತಕ ಕೃತಿ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ಎಸ್‌ಬಿಐ ವಿಶ್ರಾಂತ ಅಧಿಕಾರಿ ಬೆಂ. ಶ್ರೀ ರವೀಂದ್ರ, ಲೋಗೋ ಮತ್ತು ಸಾಹಿತ್ಯ ಶತಕ ಕೃತಿ ಲೋಕಾರ್ಪಣೆ: ಎಸ್‌ಬಿಐ ವಿಶ್ರಾಂತ ಪ್ರಬಂಧಕ ಎಂ.ಎಸ್.ನರಸಿಂಹಮೂರ್ತಿ, ಕೃತಿ ಕುರಿತು ಮಾತನಾಡುವವರು: ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಸಾರಾಂಗ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಹಿರಿಯ ಲೇಖಕಿ ಶ್ರೀಮತಿ ಕೆರೋಡಿ ಎಂ.ಲೋಲಾಕ್ಷಿ, ಮೈಸೂರು ಸಾಹಿತ್ಯ ದಾಸೋಹ ಸಂಚಾಲಕ ಎಂ.ಆರ್.ಆನಂದ ಮತ್ತು ಶ್ರೀಮತಿ ಪದ್ಮಾಆನಂದ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಬಡಕಡಮ್ಮಂಡ ಕಸ್ತೂರಿ ಗೋವಿಂದಮಯ್ಯ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ– ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ–ಡಾ.ಎಂ.ಪಿ.ರೇಖಾ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ–ಮನೋದೈಹಿಕ ಕಾರಣಗಳಿದ ಉಂಟಾಗುವ ಬಾಯಿ ಆರೋಗ್ಯದ ಸಮಸ್ಯೆಗಳು ಮತ್ತು ಚಿಕಿತ್ಸೆ ಕುರಿತು ಡಾ.ಸ್ಮಿತಾ ಜೆ.ಡಿ. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಶ್ರೀ ಗುರುಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ.ಮೀನ, 11.00 ನಿಮ್ಮೊಂದಿಗೆ ಬಾಂಬೆ ಸಹೋದರಿಯರು **ಮಧ್ಯಾಹ್ನ:** 12.45 ಜನಪದಸಂಗೀತ–ಮಾಕೇಗೌಡ ಮತ್ತು ಸಂಗಡಿಗರು, 1.20 ಭಾವಗೀತೆ–ಎಸ್.ಜಿ. ರಘುರಾಂ, 2.35 ಕನ್ನಡ ಚಲನಚಿತ್ರ ಧ್ವನಿವಾಹಿನಿ "ಭಕ್ತಕುಂಬಾರ", 4.00 ಯಕ್ಷಗಾನ ತಾಳ ಮದ್ದಲೆ–ಸಂಪೂರ್ಣ ಮಹಾಭಾರತ ಸರಣಿ ಪ್ರಸಂಗ–ಹಿಡಿಂಬಾ ವಿವಾಹ, ಪ್ರಸ್ತುತಿ–ಉಡುಪಿಯ ಅಂಬಲಪಾಡಿಯ ಶ್ರೀ ಲಕ್ಷ್ಮೀ ಜನಾರ್ಧನ ಯಕ್ಷಗಾನ ಕಲಾ ಮಂಡಳಿಯ ಸದಸ್ಯರು, 6.50 ಕೃಷಿರಂಗ–ಹೆಚ್.ಡಿ.ಕೋಟೆಯ ನಾಗರಹೊಳೆ ಕುರಿ ಹಾಗೂ ಮೇಕೆ ಸಾಕಾಣೆದಾರರ ರೈತ ಉತ್ಪಾದಕ ಕಂಪನಿಯ ಕಾರ್ಯಚಟುವಟಿಕೆ ಕುರಿತು ಅಧ್ಯಕ್ಷ ಸಿ.ಎಂ.ಯಶವಂತ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ–ತಾಯಿಗೆ ಸ್ಕೂಟರ್ ನಲ್ಲಿಯೇ ಭಾರತ ಯಾತ್ರೆ ಮಾಡಿಸಿದ ಮೈಸೂರಿನ ಡಿ.ಕೃಷ್ಣಕುಮಾರ ಅವರೊಂದಿಗೆ ಸಂವಾದ ನಡೆಸಿ ಕೊಡುತ್ತಾರೆ–ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಇಂದಿರೇಶ್‌ಕುಮಾರ್ ಮಿಶ್ರ–ಲಘು ಶಾಸ್ತ್ರೀಯ ಗಾಯನ

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಭಾರತದ ಇವಿಎಂ ಮತದಾನ ಮತ್ತು ರಾಜಕೀಯ ಪಕ್ಷಗಳು–ಒಂದು ಅವಲೋಕನ ಸಭೆ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ವಿಷಯ ಮಂಡನೆ : ಭುವನೇಶ್ವರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಮಹದೇವ್, ಕೆಪಿಸಿಸಿ ಮಾಧ್ಯಮ ವಕ್ತಾರ ಅನಿಲ್ ಕುಮಾರ್ ತಡಕಲ್, ಉಪಸ್ಥಿತರು : ನಿವೃತ್ತ ಕಾರ್ಮಿಕ ಅಧಿಕಾರಿ ನಾಗರಾಜ್, ಸ್ಥಳ: ಕಾಂಗ್ರೆಸ್ ಭವನ, ರೈಲ್ವೆ ನಿಲ್ದಾಣದ ಪಕ್ಕ, ಬೆಳಗ್ಗೆ 11ಕ್ಕೆ.

■ **ಕನ್ನಡ ಸಾಹಿತ್ಯ ಕಲಾಕೂಟ, ಇನ್ನೋವೇಟಿವ್:** ಹಿರಿಯ ವಿಜ್ಞಾನ ಲೇಖಕ ಡಾ.ಎಸ್.ಎನ್.ಹೆಗಡೆ ಅವರ ಆರು ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಬಿಡುಗಡೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಕೃತಿಗಳ ಕುರಿತು ಮಾತನಾಡುವವರು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಇನ್ನೋವೇಟಿವ್ ಅಧ್ಯಕ್ಷ ಜಿ.ಎಸ್.ಭಟ್, ಮುಖ್ಯ ಅತಿಥಿಗಳು: ಸಂಸ್ಕೃತಿ ಪೋಷಕ ಡಾ.ಕೆ. ರಘುರಾಂ ವಾಜಪೇಯಿ, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ಡಾ.ಎಸ್.ಎನ್.ಹೆಗಡೆ, ಡಾ.ಎಂ.ಚಂದ್ರಶೇಖರ್, ಕೆ.ವಿ.ಶ್ರೀನಿವಾಸ್, ವಿದ್ವಾನ್ ಹೇರಂಬ ಆರ್.ಭಟ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ

■ **ಸುಮಧ್ವ–ವಿಜಯ ಎಕ್ಸ್‌ಪ್ರೆಸ್ :** ಮಧ್ವ–ಪುರಂದರ ನಮನ, ಗಾನಸಿರಿ–ವೇದಾಂತ ಲಹರಿ ಭಾಗ–2, ಶ್ರೀ ಶ್ರೀ 1008 ಶ್ರೀ ಸತ್ಯಾತೀರ್ಥ ಶ್ರೀಪಾದಂಗಳವರು, ಉಪಸ್ಥಿತರು : ಪಂಡಿತ್ ಪ್ರವೀಣಾಚಾರ್ಯ ಹುನಗುಂದ, ಶ್ರೀ ಉತ್ತರಾದಿ ಮಠದ ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ, ವಿದ್ವಾನ್ ರಮೇಶ್ ಕುಲಕರ್ಣಿ ಅವರಿಂದ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.

■ **ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್, ಟಿ.ಕೆ. ಲೇಔಟ್ :** ಶ್ರೀ ತ್ಯಾಗರಾಜರ ಹಾಗೂ ಶ್ರೀ ಪುರಂದರ ದಾಸರ ಆರಾಧನಾ ಮಹೋತ್ಸವ, ವಿದ್ವಾನ್ ಡಾ. ಮೈಸೂರು ಮಂಜುನಾಥ್ ಹಾಗೂ ವಿದ್ವಾನ್ ಮೈಸೂರು ನಾಗರಾಜ್ ತಂಡದವರಿಂದ ಪಂಚರತ್ನ ಗಾನಗೋಷ್ಠಿ, ಸ್ಥಳ: ಗುರುರಾಘವೇಂದ್ರಸ್ವಾಮಿ ಮಠ, ಟಿ.ಕೆ. ಲೇಔಟ್, ಸಂಜೆ 6 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ನಟನ ಕಲಾವಿದರಿಂದ ಬಿ. ಸುರೇಶ ಅವರ 'ಅಡುಗೆ ಮನೆಯಲ್ಲೊಂದು ಹುಲಿ' ನಾಟಕ ಪ್ರದರ್ಶನ, ನಿರ್ದೇಶನ : ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗಾಯಣ:** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಕಾಕನಕೋಟೆ ನಾಟಕ ಪ್ರದರ್ಶನ, ನಿರ್ದೇಶನ: ಎಸ್.ರಾಮನಾಥ, ಸ್ಥಳ: ವನರಂಗ ಬಯಲು ರಂಗಮಂದಿರ, ರಂಗಾಯಣ, ಸಂಜೆ 6.30ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 18 ಭಾನುವಾರ 2024

ಸಂಪುಟ: 44 | ಸಂಚಿಕೆ: 301 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಪಂಚಾಯತ್ ಬಜೆಟ್

● ಮುಂದಿನ ವರ್ಷದಿಂದ ಮಾರ್ಚ್ 10ರೊಳಗೆ ಮಂಡನೆ ಕಡ್ಡಾಯ; ಸರ್ಕಾರದ ಆದೇಶ ● ಆರ್ಥಿಕ ಸ್ಥಿತಿಗತಿ, ಯಾವ ಬಾಬ್ತು, ಎಷ್ಟು ವೆಚ್ಚ ಘೋಷಿಸಿ; ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ ಖರ್ಗೆ ಅವರಿಂದ ಗ್ರಾಪಂ ಅಧ್ಯಕ್ಷರಿಗೆ ಪತ್ರ ● ಕೇಂದ್ರ, ರಾಜ್ಯ ಹಾಗೂ ಸ್ವಯಂ ಆದಾಯ ಗಳಿಕೆ ಹಿನ್ನೆಲೆಯಲ್ಲಿ ಆರ್ಥಿಕ ಶಿಸ್ತಿಗೆ ಈ ಕ್ರಮ ● ಒತ್ತಡ, ಬಲವಂತಕ್ಕೆ ಮಣಿದು ಹಣ ದುರುಪಯೋಗ ಆರೋಪ



ಬೆಂಗಳೂರು, ಫೆ.17(ಕೆಎಂಶಿ)– ಹಣಕಾಸು ಸಚಿವರು ರಾಜ್ಯ ಬಜೆಟ್ ರೂಪಿಸಿ, ಮಂಡಿಸುವ ಮಾದರಿಯಲ್ಲೇ ಗ್ರಾಮ ಪಂಚಾಯತ್‌ಗಳೂ ತಮ್ಮ ವಾರ್ಷಿಕ ಖರ್ಚು–ವೆಚ್ಚಗಳಿಗೆ ಪಂಚಾಯತ್ ಮುಂಗಡಪತ್ರ ಮಂಡಿಸಿ ಅನುಮೋದನೆ ಪಡೆದು ಅಭಿವೃದ್ಧಿ ಕಾರ್ಯಗಳಿಗೆ ಮುಂದಾಗುವಂತೆ ಸರ್ಕಾರ ಆದೇಶ ಮಾಡಿದೆ.



ಈ ಸಂಬಂಧ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯದ ಎಲ್ಲಾ ಪಂಚಾಯತ್‌ಗಳ ಅಧ್ಯಕ್ಷರಿಗೆ ಪತ್ರ ಬರೆದು, ಕಡ್ಡಾಯವಾಗಿ ಆರ್ಥಿಕ ಸ್ಥಿತಿಗತಿ ಮತ್ತು ಯಾವ ಬಾಬ್ತು, ಎಷ್ಟು ವೆಚ್ಚ ಮಾಡುತ್ತೀರಿ ಎಂಬುದನ್ನು ಬಜೆಟ್‌ನಲ್ಲಿ ಘೋಷಿಸಿ, ಸಾರ್ವಜನಿಕಗೊಳಿಸಬೇಕು ಎಂದಿದ್ದಾರೆ. ರಾಜ್ಯದ ಗಮನಕ್ಕೂ ಬಾರದೆ ಕೇಂದ್ರ ಸರ್ಕಾರ ನೇರವಾಗಿ ನಿಮ್ಮ ಕೆಲವು ಯೋಜನೆಗಳಿಗೆ ಆರ್ಥಿಕ ನೆರವು ನೀಡುತ್ತದೆ. ಇದಲ್ಲದೆ, ರಾಜ್ಯವೂ ವಾರ್ಷಿಕ ಹಣ ನಿಗದಿಪಡಿಸಿದೆ. ಇದೆಲ್ಲದಕ್ಕೂ ಮಿಗಿಲಾಗಿ ಸ್ಥಳೀಯವಾಗಿ ನೀವು ಸಂಗ್ರಹಿಸುವ ಸಂಪನ್ಮೂಲವೂ ಸೇರಿದಂತೆ ಎಲ್ಲವನ್ನೂ ಕ್ರೋಡೀಕರಿಸಿ ಬಜೆಟ್ ಸಿದ್ಧಪಡಿಸಿ. ಕೆಲವು ಪಂಚಾಯತ್‌ಗಳಲ್ಲಿ ಆರ್ಥಿಕ ಶಿಸ್ತು ಇಲ್ಲದಿರುವುದು ಲೆಕ್ಕ ಪರಿಶೋಧನಾ ವರದಿಗಳಿಂದ ತಿಳಿದುಬಂದಿದೆ. ಅಧಿಕಾರ ವಿಕೇಂದ್ರೀಕರಣ ದೃಷ್ಟಿಯಿಂದ ಮೂರು ಹಂತದ ಆಡಳಿತವನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದ್ದರೂ, ನೀವು ಆರ್ಥಿಕ ಶಿಸ್ತಿನಲ್ಲಿ ಎಡವುತ್ತಿದ್ದೀರಿ. ಸ್ಥಳೀಯ ಅಭಿವೃದ್ಧಿ ಸೇರಿದಂತೆ ಯಾವುದೇ ಆಡಳಿತಾತ್ಮಕ ವಿಷಯಗಳು ● 6ನೇ ಪುಟಕ್ಕೆ

ಕೇವಲ ಹತ್ತು ನಿಮಿಷದಲ್ಲಿ ಮೈಸೂರು ಪಾಲಿಕೆಯ 1067 ಕೋಟಿ ಬಜೆಟ್; 12 ಪುಟಗಳ ಓದಿ ಮುಗಿಸಿದ ಆಡಳಿತಾಧಿಕಾರಿ ಡಾ.ಜಿ.ಸಿ.ಪ್ರಕಾಶ್

6.88 ಕೋಟಿ ಉಳಿತಾಯ ಲೆಕ್ಕ



ಮೈಸೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿ ಡಾ.ಜಿ.ಸಿ.ಪ್ರಕಾಶ್ ಬಜೆಟ್ ಮಂಡಿಸಿದರು.

ಮೈಸೂರು, ಫೆ.17(ಎಸ್‌ಬಿಡಿ)–ಮೈಸೂರು ಮಹಾನಗರ ಪಾಲಿಕೆಯಿಂದ 2024–25ನೇ ಸಾಲಿಗೆ ಒಟ್ಟು 1067 ಕೋಟಿ ರೂ.ಗಳ 6.88 ಕೋಟಿ ರೂ. ಉಳಿತಾಯ ಬಜೆಟ್ ಮಂಡಿಸಲಾಯಿತು. ನಗರ ಪಾಲಿಕೆ



ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಶನಿವಾರ ನಡೆದ ವಿಶೇಷ ಸಭೆಯಲ್ಲಿ ಪಾಲಿಕೆ ಆಡಳಿತಾಧಿಕಾರಿಂಯಾದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್, 2023–24ನೇ ಸಾಲಿನ ಪರಿಷ್ಕೃತ ಹಾಗೂ 2024–25ನೇ ಸಾಲಿನ ಅಂದಾಜು ಆಯವ್ಯಯವನ್ನು ಕೇವಲ 10 ನಿಮಿಷದಲ್ಲಿ ಮಂಡಿಸಿದರು. ಪ್ರಾರಂಭಿಕ ಶಿಲ್ಕು ಹಾಗೂ ಜಮೆ ಮೂಲಗಳಿಂದ 2024–25ನೇ ಸಾಲಿಗೆ ಒಟ್ಟು 106706.95 ಲಕ್ಷ (1067.06 ಕೋಟಿ) ರೂ. ಆದಾಯ ನಿರೀಕ್ಷೆ ಹಾಗೂ 106018.86 ಲಕ್ಷ (1060.18 ಕೋಟಿ) ರೂ. ವೆಚ್ಚ ಅಂದಾಜಿಸಲಾಗಿದ್ದು, 688.09 ಲಕ್ಷ (6.88 ಕೋಟಿ ರೂ.) ಉಳಿತಾಯ ನಿರೀಕ್ಷಿಸಬಹುದಾಗಿದೆ. ಪಾಲಿಕೆ ನಿರ್ವಹಣಾ ಸಂಸ್ಥೆಯಾಗಿದ್ದು, ● 9ನೇ ಪುಟಕ್ಕೆ

ಗುರಿ ಮೀರಿ ತೆರಿಗೆ ಸಂಗ್ರಹ

2023–24ನೇ ಸಾಲಿನಲ್ಲಿ ಆಸ್ತಿ ತೆರಿಗೆ, ಖಾತಾ ವರ್ಗಾವಣೆ ಸೇರಿದಂತೆ ಕಂದಾಯ ಶಾಖೆಯಿಂದ 17175 ಲಕ್ಷ (171.75 ಕೋಟಿ) ರೂ. ನಿರೀಕ್ಷಿಸಲಾಗಿತ್ತು ಆದರೆ ಕಳೆದ ಡಿಸೆಂಬರ್ ವೇಳೆಗೆ 17392.56 ಲಕ್ಷ (173.92 ಕೋಟಿ) ರೂ. ಸಂಗ್ರಹವಾಗಿದ್ದು, ಪ್ರಸಕ್ತ ಆರ್ಥಿಕ ವರ್ಷದ ಅಂತ್ಯ(ಮಾರ್ಚ್)ದೊಳಗೆ ಈ ಮೊತ್ತ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ನೀರಿನ ತೆರಿಗೆ ಹಾಗೂ ಒಳಚರಂಡಿ ನಿರ್ವಹಣಾ ಕರದಿಂದ ನಿರೀಕ್ಷಿಸಲಾಗಿದ್ದ 6295 ಲಕ್ಷ (62.95 ಕೋಟಿ) ರೂ.ಗಳಲ್ಲಿ, 5881.12 ಲಕ್ಷ (58.81 ಕೋಟಿ) ರೂ. ಸಂಗ್ರಹವಾಗಿದೆ. 15ನೇ ಹಣಕಾಸು ಆಯೋಗದ 5452 ಲಕ್ಷ (54.52 ಕೋಟಿ) ರೂ. ಸೇರಿದಂತೆ ವಿವಿಧ ಅನುದಾನಗಳ ಬಾಕಿ ಮೊತ್ತ ಮಾರ್ಚ್ ವೇಳೆಗೆ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದು ಪಾಲಿಕೆ ಆಡಳಿತಾಧಿಕಾರಿ ಡಾ.ಜಿ.ಸಿ.ಪ್ರಕಾಶ್ ತಿಳಿಸಿದರು.

ಸದ್ದು–ಗದ್ದಲವಿಲ್ಲ

ಮೈಸೂರು ಮಹಾನಗರ ಪಾಲಿಕೆ ಬಜೆಟ್ ಎಂದರೆ ಸದ್ದು–ಗದ್ದಲ ಇರುತ್ತಿತ್ತು. ಬಜೆಟ್ ಮಾಹಿತಿ ತಿಳಿಯಲು ನಾಗರಿಕರು ಕಾತುರದಿಂದ ಕಾಯುತ್ತಿದ್ದರು. ಬಜೆಟ್ ಮಂಡನೆಯಾದ ಬಳಿಕ ಅದರ ಮೇಲಿನ ಚರ್ಚೆ ಮತ್ತಷ್ಟು ರೋಚಕವಾಗಿರುತ್ತಿತ್ತು. ಚರ್ಚೆ ಮಧ್ಯೆ ಗದ್ದಲ ಉಂಟಾಗುತ್ತಿತ್ತು. ಆದರೆ ಇದ್ಯಾವುದೂ ಇಂದಿನ ಬಜೆಟ್‌ನಲ್ಲಿ ಇರಲಿಲ್ಲ. ನಗರಪಾಲಿಕೆ ಸದಸ್ಯರಿಲ್ಲದ ಬಜೆಟ್ ಕೆಲವೇ ನಿಮಿಷಗಳಲ್ಲಿ ಮುಕ್ತಾಯವಾಯಿತು. ಮಧ್ಯಾಹ್ನ 3.05ಕ್ಕೆ ಬಜೆಟ್ ಮಂಡನೆ ಶುರುಮಾಡಿದ ಆಡಳಿತಾಧಿಕಾರಿ ಡಾ.ಜಿ.ಸಿ.ಪ್ರಕಾಶ್, ಮಧ್ಯಾಹ್ನ 3.15ಕ್ಕೆ 12 ಪುಟಗಳ ಬಜೆಟ್ ಪುಸ್ತಕ ಓದಿ ಮುಗಿಸಿದರು.

ತ್ಯಾಜ್ಯ ನಿರ್ವಹಣೆಗೆ ವಿಶೇಷ ಆದ್ಯತೆ



ಪ್ಲಾಸ್ಟಿಕ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸಾರ್ವಜನಿಕ ಸಹಭಾಗಿತ್ವದಲ್ಲಿ 50 ಟಿಪಿಡಿ ಸಾಮರ್ಥ್ಯದ ಪ್ಲಾಸ್ಟಿಕ್ ಮರುಬಳಕೆ ಘಟಕ ನಿರ್ಮಾಣ. ಮುಡಾ ವತಿಯಿಂದ ಮೀಸಲಿಡಲಾಗಿರುವ ಸಾತಗಳ್ಳಿ ಬಸ್ ಡಿಪೋ ಬಳಿಯ 9.5 ಎಕರೆ ಜಾಗದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಮತ್ತು ಪಾಲಿಕೆ ನೆರವು ಸೇರಿ ಒಟ್ಟು 11.66 ಕೋಟಿ ರೂ. ಅನುದಾನದಲ್ಲಿ ಕಟ್ಟಡ ಭಗ್ನಾವಶೇಷ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ. ತ್ಯಾಜ್ಯವನ್ನು ಮೂಲದಲ್ಲೇ ವಿಂಗಡಣೆ ಮಾಡಿ ಸಂಗ್ರಹಿಸಲು ಎನ್‌ಜಿಓ ಅಥವಾ ಎಸ್‌ಹೆಚ್‌ಜಿ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಹೆಚ್ಚುವರಿ 336 ಹೆಚ್ಚುವರಿ ನೌಕರರ ನಿಯೋಜನೆಗೆ ಕ್ರಮ. ವಿದ್ಯಾರಣ್ಯಪುರಂ ಕಾಂಪೋಸ್ಟ್ ಘಟಕದ 22 ಎಕರೆ ಪ್ರದೇಶದಲ್ಲಿ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯವನ್ನು ಬಯೋಮೈನಿಂಗ್ ತಂತ್ರಜ್ಞಾನದ ಮೂಲಕ ಸಂಸ್ಕರಣೆಗೆ 5.90 ಕೋಟಿ ರೂ. ಯೋಜನೆಯ ಡಿಪಿಆರ್ ಅನುಮೋದನೆಯಾಗಿದ್ದು, ತ್ವರಿತವಾಗಿ ಕಾಮಗಾರಿ ನಿರ್ವಹಿಸಲು ಕ್ರಮ.

ತಮಿಳುನಾಡು ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 9 ಮಂದಿ ಸಾವು

ತಮಿಳುನಾಡು, ಫೆ.17– ತಮಿಳುನಾಡಿನ ವಿರುದುನಗರ ಜಿಲ್ಲೆಯ ಪಟಾಕಿ ಕಾರ್ಖಾನೆಯಲ್ಲಿ ಶನಿವಾರ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ ಒಂಬತ್ತು ಜನರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಸ್ಥಳೀಯರ ಪ್ರಕಾರ, ಸ್ಫೋಟದ ತೀವ್ರತೆ ಎಷ್ಟು ದೊಡ್ಡದಾಗಿದೆ ಎಂದರೆ ಪಟಾಕಿ ಕಾರ್ಖಾನೆ ಬಳಿಯ ನಾಲ್ಕು ಕಟ್ಟಡಗಳು ಸ್ಫೋಟದಿಂದ ಹಾನಿಗೊಳಗಾಗಿವೆ. ಪಟಾಕಿ ಕಾರ್ಖಾನೆಯು ವಿಜಯ್ ಎಂಬುವವರಿಗೆ ಸೇರಿದ್ದಾಗಿದೆ, ಇದು ನಗರದ ಮೆಂಬಕೊಟ್ಟೈ ಪ್ರದೇಶದಲ್ಲಿದೆ


ಸಂಸ್ಕೃತ ವಿದ್ವಾಂಸ ರಾಮಭದ್ರಾಚಾರ್ಯ, ಖ್ಯಾತ ಉರ್ದು ಕವಿ ಗುಲ್ಜಾರ್‌ಗೆ

ಜ್ಞಾನಪೀಠ ಪ್ರಶಸ್ತಿ

ನವದೆಹಲಿ, ಫೆ.17– ಖ್ಯಾತ ಉರ್ದು ಕವಿ ಗುಲ್ಜಾರ್ ಮತ್ತು ಸಂಸ್ಕೃತ ವಿದ್ವಾಂಸ ಜಗದ್ಗುರು ರಾಮಭದ್ರಾಚಾರ್ಯ ಅವರು 58ನೇ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಜ್ಞಾನಪೀಠ ಆಯ್ಕೆ ಸಮಿತಿ ಶನಿವಾರ ಪ್ರಕಟಿಸಿದೆ.



ರಾಮಭದ್ರಾಚಾರ್ಯ



ಕವಿ ಗುಲ್ಜಾರ್

ಗುಲ್ಜಾರ್, ಹಿಂದಿ ಚಿತ್ರರಂಗದಲ್ಲಿ ಖ್ಯಾತ ಸಿನಿಮಾ ಸಾಹಿತಿ ಮತ್ತು ಈ ಯುಗದ ಅತ್ಯುತ್ತಮ ಉರ್ದು ಕವಿಗಳಲ್ಲಿ ಅವರು ಒಬ್ಬರು ಎಂದು ಪರಿಗಣಿಸಲಾಗಿದೆ.

ಗುಲ್ಜಾರ್ ಅವರು ಈ ಹಿಂದೆ 2002 ರಲ್ಲಿ ಉರ್ದುಗಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 2013ರಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ, 2004 ರಲ್ಲಿ ಪದ್ಮಭೂಷಣ ಮತ್ತು ಅವರ ಕೃತಿಗಳಿಗಾಗಿ ಕನಿಷ್ಠ ಐದು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಆಧ್ಯಾತ್ಮಿಕ ನಾಯಕ: ಇನ್ನು ಜ್ಞಾನಪೀಠ ಪ್ರಶಸ್ತಿಗೆ ಭಾಜನರಾದ ಚಿತ್ರಕೂಟದ ತುಳಸಿ ಪೀಠದ ಸಂಸ್ಥಾಪಕ ಮತ್ತು ಮುಖ್ಯಸ್ಥರಾದ ರಾಮಭದ್ರಾಚಾರ್ಯರು ಹೆಸರಾಂತ ಹಿಂದೂ ಆಧ್ಯಾತ್ಮಿಕ ನಾಯಕ, ಶಿಕ್ಷಣತಜ್ಞ ಮತ್ತು 100ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ.

ಸಂಸ್ಕೃತ ಸಾಹಿತಿ ಜಗದ್ಗುರು ರಾಮಭದ್ರಾಚಾರ್ಯ ಮತ್ತು ಪ್ರಸಿದ್ಧ ಉರ್ದು ಸಾಹಿತಿ ಗುಲ್ಜಾರ್ ಎಂಬ ಎರಡು ಭಾಷೆಗಳ ಖ್ಯಾತ ಬರಹಗಾರರಿಗೆ (2023 ಕ್ಕೆ) ಪ್ರಶಸ್ತಿಯನ್ನು ನೀಡಲು ನಿರ್ಧರಿಸಲಾಗಿದೆ ಎಂದು ಜ್ಞಾನಪೀಠ ಆಯ್ಕೆ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಧಾನಿ ಮೋದಿ, ಮಾಜಿ ಸಿಎಂ ಬೊಮ್ಮಾಯಿ ಕಾಲದಲ್ಲಿ ನಾನು ತಂದ ಯೋಜನೆ, ಅನುದಾನ ರಾಜ್ಯ ಬಜೆಟ್‌ನಲ್ಲಿ ಮರು ಘೋಷಣೆ

ಸಿದ್ದರಾಮಯ್ಯರ ಬಜೆಟ್ ಗ್ರೇಟ್ ತಮಾಷಾ!!





ಮೈಸೂರು, ಫೆ. 17– ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರದ ಅವಧಿಯಲ್ಲಿ ತಾವು ತಂದಿದ್ದ ಯೋಜನೆಗಳನ್ನೇ ರಾಜ್ಯ ಬಜೆಟ್‌ನಲ್ಲಿ ಘೋಷಣೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನ ಜನರನ್ನು ಮರಳು ಮಾಡುತ್ತಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಆರೋಪಿಸಿದ್ದಾರೆ. ಮೈಸೂರು ನಗರದ ಕುಕ್ಕರಹಳ್ಳಿ ಕೆರೆ ಬಳಿ ಬೋಗಾದಿ ರಸ್ತೆಯ ಮೈಸೂರು–ಚಾಮರಾಜನಗರ ಲೆವೆಲ್ ಕ್ರಾಸಿಂಗ್ ನಂ. 1ರಲ್ಲಿ ರೋಡ್ ಅಂಡರ್ ಬ್ರಿಡ್ಜ್ ನಿರ್ಮಾಣದ ಕಾಮಗಾರಿಗೆ ಈಗಾಗಲೇ 42.14 ಕೋಟಿ ರೂ.ಗಳು ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ. ಇದೇ ಯೋಜನೆಯನ್ನು ಸಿದ್ದರಾಮಯ್ಯನವರು ತಮ್ಮ ಬಜೆಟ್‌ನಲ್ಲಿ 'ರೋಡ್ ಅಂಡರ್ ಬ್ರಿಡ್ಜ್' (ಆರ್‌ಯುಬಿ) ಎಂಬುದನ್ನು 'ರೋಡ್ ಓವರ್ ಬ್ರಿಡ್ಜ್' (ಆರ್‌ಓಬಿ) ಎಂದು ಮರುಘೋಷಣೆ ಮಾಡಿದ್ದಾರೆ. ಅದೇ ರೀತಿ ಕೆಆರ್‌ಎಸ್ ರಸ್ತೆಯ ರಾಯಲ್ ಇನ್ ಹೋಟೆಲ್ ಬಳಿ ರೈಲ್ವೇ ಲೆವೆಲ್ ಕ್ರಾಸಿಂಗ್ ನಂ. 5ರಲ್ಲಿ ರೋಡ್ ಅಂಡರ್ ಬ್ರಿಡ್ಜ್ ನಿರ್ಮಾಣ ಕಾಮಗಾರಿಗೆ ಈಗಾಗಲೇ ಕೇಂದ್ರದಿಂದ 42.88 ಕೋಟಿ ರೂ. ಅನುಮೋದನೆಗೊಂಡಿದ್ದು, ಈ ಯೋಜನೆಯನ್ನೂ 'ರೋಡ್ ಓವರ್ ಬ್ರಿಡ್ಜ್' ಹೆಸರಿನಲ್ಲಿ ಬಜೆಟ್‌ನಲ್ಲಿ ಮರು ಘೋಷಣೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಮರದೂರು ಗ್ರಾಮದ ಬಳಿ ಲಕ್ಷ್ಮಣತೀರ್ಥ ನದಿಯಿಂದ ಹುಣಸೂರು ತಾಲೂಕಿನ ವ್ಯಾಪ್ತಿಯಲ್ಲಿ 49 ಕೆರೆಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ನೀರು ತುಂಬಿಸುವ 85 ಕೋಟಿ ರೂ. ಯೋಜನೆಗೆ ಬಸವರಾಜ ಬೊಮ್ಮಾಯಿ ಅವರ ಸರ್ಕಾರದಲ್ಲಿ 2023ರ ಮಾರ್ಚ್ 24ರಂದು ಸಂಪುಟ ಸಭೆಯಲ್ಲಿ ಅನುಮೋದನೆಗೊಂಡು ಟೆಂಡರ್ ಪ್ರಕ್ರಿಯೆ ಪ್ರಾರಂಭಗೊಂಡಿದ್ದರೂ, ಸಿದ್ದರಾಮಯ್ಯ ಮಂಡಿಸಿದ ● 6ನೇ ಪುಟಕ್ಕೆ

ಭಾರತದ ಸಂವಿಧಾನ ಜಾರಿಯಾಗಿ 75 ವರ್ಷ ಫೆ.23ರವರೆಗೆ 31 ಜಿಲ್ಲೆಯಲ್ಲಿ

ಸಂವಿಧಾನ ಜಾಥಾ

● ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ● ಫೆ. 24, 25ರಂದು ಬೆಂಗಳೂರಲ್ಲಿ ರಾಷ್ಟ್ರೀಯ ಏಕತಾ ಸಮಾವೇಶ ● ಸಮಾವೇಶದಲ್ಲಿ ಮಹಾಮೇಧಾವಿಗಳು, ವಿಚಾರವಾದಿಗಳು ಪಾಲ್ಗೊಳ್ಳಲಿದ್ದಾರೆ

ಬೆಂಗಳೂರು, ಫೆ.17(ಕೆಎಂಶಿ)– ಜಾತ್ಯತೀತತೆ, ಸಮಾನತೆ, ಭ್ರಾತೃತ್ವ ತತ್ವಗಳೇ ಸಂವಿಧಾನದ ತಳಹದಿ, ಇದಕ್ಕೆ ಧಕ್ಕೆ ತರುವ ಪ್ರಯತ್ನಗಳನ್ನು ವಿಫಲಗೊಳಿಸಬೇಕಾಗಿರುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ. ಇದಕ್ಕೆ ಯಾವ ಪಕ್ಷ, ಗುಂಪು ಇಲ್ಲ. ಸಂವಿಧಾನ ಈ ದೇಶದ ಎಲ್ಲಾ ಜನರಿಗೆ ಸಲ್ಲುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಭಾರತ ಸಂವಿಧಾನ ಹಾಗೂ ರಾಷ್ಟ್ರೀಯ ಐಕ್ಯತಾ ಸಮಾವೇಶಕ್ಕೆ ಸಂಬಂಧಿಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಸಂವಿಧಾನ ಜಾರಿಗೆ ಬಂದು 75ನೇ ವರ್ಷಗಳಾಗಿದ್ದು, ಈ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಲು ಸರ್ಕಾರ ತೀರ್ಮಾನಿಸಿದೆ ಎಂದರು.

ಇದೇ 23ರವರೆಗೆ ಕರ್ನಾಟಕದಾದ್ಯಂತ 31 ಜಿಲ್ಲೆಗಳಲ್ಲಿ ಸಂವಿಧಾನ ಜಾಥಾ ನಡೆಯುತ್ತಿದೆ, ಫೆ.24 ಮತ್ತು 25ರಂದು ರಾಷ್ಟ್ರೀಯ ಏಕತಾ ಸಮಾವೇಶ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಸಮಾವೇಶದಲ್ಲಿ ಹೆಸರಾಂತ ಭಾಷಣಕಾರರು, ಖ್ಯಾತ ಚಿಂತಕರು, ಮೇಧಾವಿಗಳು ಪಾಲ್ಗೊಂಡು, ದೇಶದ ಸಮಸ್ಯೆಗಳು, ಜನರ ಬವಣೆಗಳು, ಸಂವಿಧಾನದಲ್ಲಿನ ಪರಿಹಾರಗಳ ಬಗ್ಗೆ ಬೆಳಕು ಚೆಲ್ಲಲಿದ್ದಾರೆ. 25ರಂದು ಬೃಹತ್ ರ್‍ಯಾಲಿ ನಡೆಯಲಿದೆ.

ಸಮಾವೇಶದಲ್ಲಿ ಖ್ಯಾತ ಚಿಂತಕರಾದ ಪ್ರೊ. ಅಸುತೋಶ್ ವರ್ಷನಿ ಹಾಗೂ ಡಾ.ಗಣೇಶ್ ದೇವಿ, ಪ್ರೊ. ಜಯಂತಿ ● 6ನೇ ಪುಟಕ್ಕೆ

ಮೈಸೂರಿನ ರಂಗಾಯಣದಲ್ಲಿ 'ಇವ ನಮ್ಮವ ಇವ ನಮ್ಮವ' ಆಶಯ ಶೀರ್ಷಿಕೆಯಡಿ

ಮಾ.6ರಿಂದ 11ರವರೆಗೆ 'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವ

● ಖ್ಯಾತ ಚಿತ್ರ ಸಾಹಿತಿ ಜಯಂತ್ ಕಾಯ್ಕಿಣಿ ಚಾಲನೆ ● ಸರ್ಕಾರದಿಂದ 25 ಲಕ್ಷ ಅನುದಾನ

● ಕನ್ನಡ ನಾಟಕಗಳಿಗೆ ಮೇರು ಆದ್ಯತೆ ● ದೇಶ–ವಿದೇಶದ ಸಿನಿಮಾಗಳ ಪ್ರದರ್ಶನ ● ಪುಸ್ತಕ ಮೇಳ, ಕರಕುಶಲ ಮೇಳ; ಖಾದ್ಯ ಸವಿಯಲು ಸದವಕಾಶ





ಮೈಸೂರಿನ ರಂಗಾಯಣದಲ್ಲಿ ಶನಿವಾರ 'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವದ ಪೋಸ್ಟರ್ ಅನ್ನು ನಾಟಕೋತ್ಸವದ ಸಂಚಾಲಕ ಪ್ರೊ.ಉಮೇಶ್ ಬಿಡುಗಡೆ ಮಾಡಿದರು.

ಮೈಸೂರು, ಫೆ.17(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನ ರಂಗಾಯಣದಲ್ಲಿ ಮಾ.6 ರಿಂದ ಆರಂಭವಾಗುವ ಆರು ದಿನಗಳ ರಂಗ ಸಂಭ್ರಮ 'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವವನ್ನು ಖ್ಯಾತ ಚಿತ್ರ ಸಾಹಿತಿ ಜಯಂತ್ ಕಾಯ್ಕಿಣಿ ಉದ್ಘಾಟಿಸಲಿದ್ದಾರೆ ಎಂದು ನಾಟಕೋತ್ಸವದ ಸಂಚಾಲಕ ಪ್ರೊ.ಹೆಚ್.ಎಸ್.ಉಮೇಶ್ ತಿಳಿಸಿದರು.

ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಮಾರ್ಚ್ 6 ರಿಂದ 11 ರವರೆಗೆ ನಡೆಯುವ ನಾಟಕೋತ್ಸವ ಅರ್ಥಪೂರ್ಣವಾಗಿ ನಡೆಯಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಪ್ರತಿ ವರ್ಷ ಬಹುರೂಪಿಯನ್ನು ಅರ್ಥಪೂರ್ಣ ಆಶಯ, ಶೀರ್ಷಿಕೆಯಡಿ ನಡೆಸುವುದು ಸಂಪ್ರದಾಯ. ಅದರಂತೆ ವಚನ ಚಳವಳಿಯ ನೇತಾರ, ವಿಶ್ವಗುರು ಬಸವಣ್ಣನವರ 'ಇವ ನಮ್ಮವ, ಇವ ನಮ್ಮವ' ವಚನ ಸಾಲಿನ ಆಶಯ ಶೀರ್ಷಿಕೆಯೊಂದಿಗೆ ಆ ಬಾರಿಯ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿದೆ ಎಂದು ಹೇಳಿದರು. ಉತ್ತರ ಪ್ರದೇಶ, ಮುಂಬೈ, ಕೊಲ್ಕತ್ತಾ, ಮಣಿಪುರ, ಕೇರಳ ಹಾಗೂ ಮಹಾರಾಷ್ಟ್ರ ರಾಜ್ಯಗಳ 6 ನಾಟಕಗಳು, ಕನ್ನಡ ಭಾಷೆಯ 10 ನಾಟಕಗಳು ಹಾಗೂ 1 ತುಳು ಭಾಷೆಯ ನಾಟಕ ಸೇರಿದಂತೆ ಒಟ್ಟು 17 ನಾಟಕಗಳನ್ನು ಈ ಬಾರಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಪ್ರದರ್ಶಿಸಲಾಗುವುದು ಎಂದು ಪ್ರೊ.ಉಮೇಶ್ ವಿವರಿಸಿದರು.

ಬಹುರೂಪಿಗೆ ಜಾನಪದ ಕಲಾತಂಡಗಳ ಮೆರಗು

ಮಾರ್ಚ್ 6 ರಿಂದ 11 ರವರೆಗೆ ಪ್ರತಿದಿನ ಸಂಜೆ 4 ಗಂಟೆಗೆ ಕರ್ನಾಟಕದ ವಿವಿಧ ರಾಜ್ಯಗಳ ಜಾನಪದ ಕಲಾತಂಡಗಳು ವಿಶಿಷ್ಟ ರೀತಿಯ ಕಲಾ ಪ್ರದರ್ಶನ ನೀಡಲಿವೆ.

ಗದಗದ ಜೋಗತಿ ನೃತ್ಯ ಮತ್ತು ಕೋಲಾಟ ನೃತ್ಯ, ದಕ್ಷಿಣ ಕನ್ನಡದ ಚಂಡೆ ಮತ್ತು ಕಂಗೀಲು, ಚಾಮರಾಜನಗರದ ಕಂಸಾಳೆ ಮತ್ತು ಗೊರವರ ನೃತ್ಯ, ಚಿಕ್ಕಮಗಳೂರಿನ ಡೊಳ್ಳು ಕುಣಿತ ಮತ್ತು ವೀರಗಾಸೆಯ ವಿವಿಧ ಕಲಾ ಪ್ರಕಾರಗಳು ಪ್ರದರ್ಶನವಾಗಲಿವೆ.

ಜೊತೆಗೆ ಹಾಸನದ ಗಾರುಡಿ ಗೊಂಬೆ ಮತ್ತು ನಾದಸ್ವರ, ಉಡುಪಿಯ ಕೊರಗರ ಡೋಲು ಮತ್ತು ಕರಗ ಕೋಲಾಟ, ಮಂಡ್ಯದ ಪೂಜಾ ಕುಣಿತ ಮತ್ತು ಪಟ ಕುಣಿತ, ಮೈಸೂರಿನ ರಂಗಾಯಣದ ವಚನ ಗಾಯನ ಮತ್ತು ಬೆಂಗಳೂರಿನ ಮಹಿಳಾ ಜನಪದ ಕಲಾ ತಂಡಗಳು ಪ್ರದರ್ಶನ ನೀಡಲಿವೆ.

ಮಹಿಳಾ ಆಶಯವುಳ್ಳ ಯಕ್ಷಗಾನ ಭೂಮಿಗೀತ, ವನರಂಗ, ಕಲಾಮಂದಿರ ಹಾಗೂ ಕಿರು ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ. ಕರ್ನಾಟಕದ ವಿವಿಧ ಜಿಲ್ಲೆಗಳ 16 ಜಾನಪದ ಕಲಾ ತಂಡಗಳು ಕಿಂದರಿ ಜೋಗಿ ವೇದಿಕೆಯಲ್ಲಿ ಪ್ರದರ್ಶನ ನೀಡಲಿವೆ ಎಂದರು. ಮಾರ್ಚ್ 9 ಮತ್ತು 10ರಂದು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದ್ದು, ವಚನ ಸಾಹಿತ್ಯ ಮತ್ತು ರಂಗಭೂಮಿ ಕುರಿತು ವಿಷಯ ಮಂಡನೆಯಾಗಲಿದೆ. ನಾಡಿನ ಹೆಸರಾಂತ ವಿದ್ವಾಂಸರು ವಿಷಯ ಮಂಡಿಸಲಿದ್ದಾರೆ ಎಂದು ಪ್ರೊ.ಉಮೇಶ್ ತಿಳಿಸಿದರು. ರಂಗಾಯಣದ ಶ್ರೀರಂಗ ರಂಗ ಮಂದಿರದಲ್ಲಿ ರಾಷ್ಟ್ರೀಯ ಚಲನ ಚಿತ್ರೋತ್ಸವ, ರಂಗಾಯಣದ ಆವರಣದಲ್ಲಿ ಪುಸ್ತಕ ಮೇಳ, ಕರಕುಶಲ ಮೇಳ, ಚಿತ್ರಕಲಾ ಪ್ರದರ್ಶನ ಆಯೋಜಿಸಲಾಗಿದೆ ಲಂಕೇಶ್ ಕಲಾ ಗ್ಯಾಲರಿಯಲ್ಲಿ ಮೈಸೂರು ಶೈಲಿಯ ಪೈಂಟಿಂಗ್ಸ್ ಹಾಗೂ ಪತ್ರಾಗಾರ ಇಲಾಖೆಯಿಂದ ● 6ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಗುಂಡ : ಕೆಲವು ಹುಡುಗಿಯರು ತುಂಬಾ ಕಲಿಯೋದಿಕ್ಕೆ ಆಸಕ್ತಿ ತೋರಿಸೊಲ್ಲ.
ತಿಮ್ಮ : ಯಾಕೆ?
ಗುಂಡ : ಅವರಿಗೆ ಚೆನ್ನಾಗಿ ಗೊತ್ತು. ಪ್ರಪಂಚದ ಯಾವುದೋ ಮೂಲೆಯಲ್ಲಿ ತನಗಾಗಿ ಒಬ್ಬ ನಿದ್ದೆ ಬಿಟ್ಟು ಓದುತ್ತಾ ಇದ್ದಾನೆ ಅಂತ!

ಮೈಸೂರು ಮಿತ್ರ

ಭಾನುವಾರ, 18 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಚಿಂತನೆಯಿಂದ ಬುದ್ಧಿವಂತನಾಗಬಹುದು. ಆದರೆ ತಿಳುವಳಿಕೆ ಓದಿನಿಂದಲೇ ಬರಬೇಕು –ಎಡ್ವರ್ಡ್‌ನ್ಯೂಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೂರದ ಮದ್ದು ಖಾಯಿಲೆಗಾಗೊಲ್ಲ

ನಿಮ್ಮ ಪತ್ರಗಳು

ಯುಜಿಡಿ ಚೇಂಬರ್ ಮುಚ್ಚಳ ಸರಿಪಡಿಸಿ

ಮಾನ್ಯರೆ,

ಮೈಸೂರಿನ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಬೆಳವಾಡಿ ಬಿಸಿಲು ಮಾರಮ್ಮ ದೇವಸ್ಥಾನದ ರಸ್ತೆಯಲ್ಲಿ ಯುಜಿಡಿ ಚೇಂಬರ್ ಮುಚ್ಚಳಗಳು ಒಡೆದು ಹೋಗಿ ಸುಮಾರು ಎರಡು ತಿಂಗಳು ಕಳೆದರೂ ಇದುವರೆಗೂ ಸರಿಪಡಿಸಿರುವುದಿಲ್ಲ. ಈಗಾಗಲೇ ಸುಮಾರು ಅನಾಹುತಗಳು ಅಂದರೆ ಕಾರು ಮತ್ತು ದ್ವಿಚಕ್ರ ವಾಹನಗಳ ಚಕ್ರ ಚೇಂಬರ್ ಗುಂಡಿಗೆ ಸಿಕ್ಕಿ ಅನಾಹುತ ಸಂಭವಿಸಿದೆ. ಸದರಿ ರಸ್ತೆಯಲ್ಲಿ ಸ್ಕೂಲ್ ಹತ್ತಿರವಿದ್ದು, ಮಕ್ಕಳು ಓಡಾಡುವುದರಿಂದ ಮಕ್ಕಳು ಗುಂಡಿಗೆ ಬಿದ್ದು ಬಿಟ್ಟವೋ ಎಂಬ ಭಯದಲ್ಲಿ ಪೋಷಕರು ಆತಂಕದಲ್ಲಿದ್ದಾರೆ. ಇದರ ಬಗ್ಗೆ ಸಂಬಂಧ ಪಟ್ಟವರಿಗೆ ತಿಳಿಸಿದರೂ ಯಾವುದೇ ಕ್ರಮ ವಹಿಸಿರುವುದಿಲ್ಲ. ರಸ್ತೆಯಲ್ಲಿ ನೀರಿನ ಪೈಪ್ ಒಡೆದು ಸುಮಾರು ಮೂರು ತಿಂಗಳಿಂದ ನೀರು ರಸ್ತೆ ಮಧ್ಯದಲ್ಲಿ ಹರಿಯುತ್ತಿದ್ದು, ವಾಟರ್ ಮ್ಯಾನ್‌ಗೆ ತಿಳಿಸಿದರೂ ಕ್ರಮ ವಹಿಸಿರುವುದಿಲ್ಲ. ಆದುದರಿಂದ ಈ ಸಮಸ್ಯೆಯನ್ನು ಆದಷ್ಟು ಬೇಗ ಸರಿಪಡಿಸಬೇಕೆಂದು ಮನವಿ.

–ಬೆಳವಾಡಿ ಗ್ರಾಮಸ್ಥರು, ಮೈಸೂರು.

ಚುನಾವಣಾ ಬಾಂಡುಗಳ ರದ್ದತಿ ಸಕಾಲಿಕ

ಮಾನ್ಯರೆ,

ಮಹತ್ವದ ಬೆಳವಣಿಗೆಯೊಂದರಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ, ಚುನಾವಣಾ ಬಾಂಡ್‌ಗಳನ್ನು ರದ್ದುಪಡಿಸಿ ಆದೇಶ ಹೊರಡಿಸಿದೆ. ಈ ಯೋಜನೆಯನ್ನು ವಿರೋಧಿಸಿ ಕೆಲವು ರಾಜಕೀಯ ಪಕ್ಷಗಳು ಹಾಗೂ ಪ್ರಜಾಪ್ರಭುತ್ವ ಹಕ್ಕಿಗಾಗಿ ಇರುವ ಸಂಘಟನೆ (Association for Democratic Rights) ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದವು.

ಈ ಬಾಂಡುಗಳನ್ನು ಅಸಂವಿಧಾನಿಕ ಎಂದು ಹೇಳಿರುವ ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಸುಪ್ರೀಂಕೋರ್ಟಿನ ಪಂಚ ಸದಸ್ಯರ ಪೀಠ, ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಈ ಆದೇಶ ಹೊರಡಿಸಿದೆ ಎಂದು ಹೇಳಿದೆ. ಕೇಂದ್ರ ಸರ್ಕಾರ 2017ರಲ್ಲಿ ಪ್ರಪ್ರಥಮವಾಗಿ ಈ ರೀತಿಯ ಚುನಾವಣಾ ಬಾಂಡುಗಳ ಯೋಜನೆಯನ್ನು ಜಾರಿಗೊಳಿಸಿತ್ತು. ಚುನಾವಣಾ ಬಾಂಡುಗಳ ಮೂಲಕ ವ್ಯಕ್ತಿಗಳು ಹಾಗೂ ಸಂಸ್ಥೆಗಳು ರಾಜಕೀಯ ಪಕ್ಷಗಳಿಗೆ 1000 ರೂ.ಗಳಿಂದ ಹಿಡಿದು ಯಾವುದೇ ಗರಿಷ್ಟ ಮಿತಿಯಿಲ್ಲದೆ ದೇಣಿಗೆ ನೀಡಿ, ಆದಾಯ ತೆರಿಗೆಯಿಂದ ಸುಲಭವಾಗಿ ವಿನಾಯಿತಿ ಪಡೆಯಬಹುದು. ದೊಡ್ಡ ದೊಡ್ಡ ಉದ್ದಿಮೆದಾರರು, ಕೈಗಾರಿಕೋದ್ಯಮಿಗಳು ಹಾಗೂ ಪ್ರಭಾವಶಾಲಿ ವ್ಯಕ್ತಿಗಳು ರಾಜಕೀಯ ಪಕ್ಷಗಳೊಂದಿಗೆ ತಮ್ಮ ನೆಂಟಸ್ತನವನ್ನು ಗಟ್ಟಿ ಮಾಡಿಕೊಳ್ಳಲು ಈ ರೀತಿಯ ದೇಣಿಗೆ ನೀಡುತ್ತಾರೆ. ಇಲ್ಲಿ ಹಣ ನೀಡುವವರ ಹೆಸರು ಗೌಪ್ಯವಾಗಿರುತ್ತದೆ.

ಸರ್ಕಾರಿ ಮೂಲಗಳ ಪ್ರಕಾರ ಕಳೆದ 05 ವರ್ಷಗಳಲ್ಲಿ, ಬಾಂಡುಗಳ ಮೂಲಕ ವಿವಿಧ ರಾಜಕೀಯ ಪಕ್ಷಗಳಿಗೆ 16,000 ಕೋಟಿ ರೂಪಾಯಿಗಳಿಗಿಂತಲೂ ಅಧಿಕ ದೇಣಿಗೆ ನೀಡಲಾಗಿದೆ ಎಂದು ಹೇಳಲಾಗಿದೆ. ಇದು ಮಾಹಿತಿ ಹಕ್ಕು ಹಾಗೂ ಮತದಾರರ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ಹೇಳಿದೆ. ಚುನಾವಣಾ ಬಾಂಡುಗಳು ನಿರ್ದಿಷ್ಟ ವ್ಯಕ್ತಿಗಳ (ದೇಣಿಗೆದಾರರ) ಹಾಗೂ ರಾಜಕೀಯ ಪಕ್ಷಗಳ ನಡುವಿನ ಅಪವಿತ್ರ ಮೈತ್ರಿಯಾಗಿದ್ದು, ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಇದನ್ನು ರದ್ದುಪಡಿಸಿರುವ ಸುಪ್ರೀಂಕೋರ್ಟ್ ಆದೇಶ ಸಕಾಲಿಕ ಹಾಗೂ ಸ್ವಾಗತಾರ್ಹವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸರಕಾರಿ ಶಾಲಾ ಶಿಕ್ಷಕರ ರಾಜಕಾರಣ


ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲಾ ಶಿಕ್ಷಕರು ಶಾಲೆಯಲ್ಲಿ ಪಾಠ ಮಾಡುವುದಕ್ಕಿಂತ ರಾಜಕಾರಣಿಗಳ ಹಿಂಬಾಲಕರಾಗಿ, ರಾಜಕಾರಣಿಗಳಿಗೆ ಬಕೆಟ್ ಹಿಡಿಯುವವರಾಗಿ ತಮ್ಮ ಮೂಲ ಬದ್ಧತೆ ಮರೆತು ಹಾಗೂ ಮಕ್ಕಳಿಗೆ ಶಿಕ್ಷಣ ನೀಡುವುದರಲ್ಲಿ ವಿಮುಖರಾಗುತ್ತಿದ್ದಾರೆ... ರಾಜಕಾರಣಿಗಳ ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಕ್ಷಕರೇ ಪ್ರಮುಖ ಪಾತ್ರ ವಹಿಸುತ್ತಿದ್ದು, ಇದು ಶಿಕ್ಷಣ ರಾಜಕಾರಣ ಧರ್ಮ ವಿರುದ್ಧ ದಿಕ್ಕಿನಲ್ಲಿ ಸಾಗಬೇಕೆ ಹೊರತು ಪರಸ್ಪರ ಒಂದೇ ದಿಕ್ಕಿನಲ್ಲಿ ಹೋದಾಗ ಸಮಾಜದಲ್ಲಿ ಸಂಘರ್ಷ ಏರ್ಪಡುವುದು.

ಆದ್ದರಿಂದ ಸರ್ಕಾರ ಶಿಕ್ಷಕರನ್ನು ಮಕ್ಕಳಿಗೆ ಪಾಠ ಮಾಡುವಂತೆ ಶಿಸ್ತು ಬದ್ಧ ಕ್ರಮ ಕೈಗೊಳ್ಳಬೇಕು. ಅಂದಾಗ ಮಾತ್ರ ಶಿಕ್ಷಣ ಹಾಗೂ ಸರ್ಕಾರಿ ಶಾಲೆಗಳ ಬಗ್ಗೆ ಪಾಲಕರಿಗೆ ಹಾಗೂ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ಹೋಗಬಹುದು. ಮೊದಲಿನಿಂದಲೂ ಶಿಕ್ಷಕರು ರಾಜಕಾರಣಿಗಳೊಂದಿಗೆ ನಿಕಟ ಸಂಪರ್ಕ ಹೊಂದಿ ರಾಜಕಾರಣಿಗಳಿಗೆ ಕಳಂಕ ತರುತ್ತಿದ್ದಾರೆ. ಆದ್ದರಿಂದ ರಾಜಕಾರಣಿಗಳು ಸಹ ಶಿಕ್ಷಕರಿಂದ ಅಂತರ ಕಾಯ್ದುಕೊಂಡು ಪಾಠ ಮಾಡಲು ಕಠಿಣ ಕ್ರಮ ಕೈಗೊಳ್ಳಬೇಕು. ಅಂತ ವಿಷಯದಲ್ಲಿ ಕುಷ್ಟಗಿ ಮಾಜಿ ಶಾಸಕರಾದ ಅಮರೆಗೌಡ ಬಯ್ಯಾಪುರ ಅವರನ್ನು ನೆನಪಿಸಿಕೊಳ್ಳಬೇಕು. ಶಿಕ್ಷಕರು ರಾಜಕಾರಣದಿಂದ ದೂರವಿರಬೇಕು. ರಾಜಕಾರಣಿಗಳಾದಾಗ ವ್ಯವಸ್ಥೆ ಹಾಳಾಗಿ ಹೋಗುತ್ತದೆ ಎಂಬುದು ಅವರ ನಿಯಮವಾಗಿತ್ತು. ಆದ್ದರಿಂದ ಕರ್ನಾಟಕದ ಎಲ್ಲಾ 224 ಶಾಸಕರು ಸರ್ಕಾರಿ ಶಾಲಾ ಶಿಕ್ಷಕರಿಂದ ಅಂತರ ಕಾಯ್ದುಕೊಂಡರೆ ಶಿಕ್ಷಣ ವ್ಯವಸ್ಥೆಗೆ ಒಂದು ದೊಡ್ಡ ಮಹಾ ಉಪಕಾರ.

–ಮಹಾಂತೇಶ್ ಬಯ್ಯಾಪುರ, ರಾಯಚೂರು.

ಕಟ್ಟಡದ ಚಾವಣಿಯಲ್ಲಿರುವ ಗಿಡಗಳನ್ನು ಬೇರು ಸಮೇತ ಕಿತ್ತುಹಾಕಿ



ಮಾನ್ಯರೆ,

ಮೈಸೂರಿನ ಮಹಾರಾಜ ಕಾಲೇಜು ವಿದ್ಯಾರ್ಥಿ ನಿಲಯದ ಕಟ್ಟಡದ ಚಾವಣಿಯಲ್ಲಿ ಅರಳಿ ಗಿಡಗಳು ಬೆಳೆಯುತ್ತಿದ್ದು, ಅವುಗಳ ಬೇರು ಕಟ್ಟಡದ ಒಂದು ಭಾಗಕ್ಕೆ ಹರಡಿ ಬಿರುಕುಗಳು ಉಂಟಾಗಿವೆ. ಇದನ್ನು ಹಾಗೆಯೇ ಬಿಟ್ಟರೆ ಗಿಡಗಳು ಬೆಳೆಯುತ್ತಾ ಹೋದಂತೆ, ಬೇರು ವ್ಯಾಪಕವಾಗಿ ಹರಡಿ ಆ ಕಟ್ಟಡದ ಒಂದು ಭಾಗವೇ ಕುಸಿಯುವ ಸಂಭವವಿದೆ. ಈ ಕಟ್ಟಡದಲ್ಲಿ ಪದವಿ ಓದುತ್ತಿರುವ ವಿದ್ಯಾರ್ಥಿಗಳು ಉಳಿದುಕೊಂಡಿದ್ದಾರೆ. ಜೊತೆಗೆ ಹಲವಾರು ವಿದ್ಯಾರ್ಥಿಗಳು ಕಟ್ಟಡದ ಆಸುಪಾಸಿನಲ್ಲಿಯೇ ಓಡಾಡುತ್ತಿರುತ್ತಾರೆ. ಹೀಗಾಗಿ, ಸಂಬಂಧಪಟ್ಟವರು ಯಾವುದೇ ಅಪಾಯ ಸಂಭವಿಸುವ ಮೊದಲು ಆ ಗಿಡಗಳನ್ನು ಬೇರು ಸಮೇತ ತೆಗೆದು ಕಟ್ಟಡವನ್ನು ದುರಸ್ತಿಗೊಳಿಸಬೇಕಾಗಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

9. ರಾಜಮಂತ್ರ ಪ್ರವೀಣ ಸಿ. ಶ್ರೀನಿವಾಸ ಅಯ್ಯಂಗಾರ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

ಹೊಸದಾಗಿ ಅಧಿಕಾರಕ್ಕೆ ಬಂದ ಅಧಿಕಾರಿಗಳು ನಿಸ್ಪೃಹತೆ ಮತ್ತು ದಕ್ಷತೆಯಿಂದ ಸರ್ಕಾರದಲ್ಲಿ ಸೇವೆ ಮಾಡಿದರೆ ಅಂತಹವರಿಗೆ ಕ್ರಮೇಣ ಉನ್ನತ ಸ್ಥಾನ ಮಹಾರಾಜರ ಆಡಳಿತದ ಅವಧಿಯಲ್ಲಿ ನಿಶ್ಚಿತವಾಗಿತ್ತು. ಜಾತಿ, ಮತ, ವಯಸ್ಸು ಇತ್ಯಾದಿ ಗೌಣವಾಗಿತ್ತು. ಹೊಸದಾಗಿ ಕೆಲಸಕ್ಕೆ ಸೇರಿದ ವ್ಯಕ್ತಿಗಳು ಅಷ್ಟೇ ತ್ಯಾಗ ಮನೋಭಾವದಿಂದ ರಾಜ್ಯಕ್ಕೆ ಸೇವೆ ಸಲ್ಲಿಸಿ, ಮಹಾರಾಜರ, ಮೇಲಿನ ಅಧಿಕಾರಿಗಳ, ಎಲ್ಲಕ್ಕಿಂತ ಹೆಚ್ಚಾಗಿ ಜನರ ಮೆಚ್ಚುಗೆ–ವಿಶ್ವಾಸ ಗಳಿಸುತ್ತಿದ್ದರು. ಹಾಗೆ ಮೇಲಕ್ಕೆ ಬಂದ ವ್ಯಕ್ತಿಗಳಲ್ಲಿ ಒಬ್ಬರು ಸಿ. ಶ್ರೀನಿವಾಸ ಅಯ್ಯಂಗಾರ್.

ಶ್ರೀನಿವಾಸ ಅಯ್ಯಂಗಾರರು 1850ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಅಲ್ಲಿನ ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ಅವರ ಬಹುತೇಕ ಓದು. ಅಂದು ಅತ್ಯುತ್ತಮ ಶಿಕ್ಷಣ ತಜ್ಞ ಎಂದು ಹೆಸರು ಗಳಿಸಿದ್ದ ರೆವರೆಂಡ್ ಜೆ.ಎಚ್. ವಾಲ್ಟನ್ ಇವರಿಗೆ ಗುರುಗಳಾಗಿ ಮಾರ್ಗದರ್ಶನ ನೀಡಿದರು. ವಿದ್ಯಾರ್ಥಿಯಾಗಿದ್ದಾಗಲೇ ಶ್ರೀನಿವಾಸ ಅಯ್ಯಂಗಾರರು ತಮ್ಮ ಪ್ರತಿಭೆಯನ್ನು ತೋರಿದ್ದರು. ಮುಂದೆ ಅದು ಅವರಿಗೆ ಸದವಕಾಶಗಳನ್ನು ಒದಗಿಸಿತು. ಕೀರ್ತಿಯನ್ನೂ ತಂದಿತು.

ಅವರ ಬುದ್ಧಿವಂತಿಕೆ ಎಷ್ಟಿತ್ತೆಂದರೆ ಇನ್ನೂ ಯುವಕರಾಗಿದ್ದು ಓದುತ್ತಿದ್ದಾಗಲೇ ಮೈಸೂರು ಸರ್ಕಾರದಲ್ಲಿ ಕೆಲಸಕ್ಕೆ ಸೇರಿದರು. ತಮ್ಮ ಮೇಲಿನವರು ತೃಪ್ತರಾಗುವಂತೆ ಹಲವಾರು ವರ್ಷಗಳು ಕಾಲ ಸಚಿವ ಮಟ್ಟದ ಹುದ್ದೆಗಳಲ್ಲಿದ್ದು ಉತ್ತಮ ಕೆಲಸ ಮಾಡಿದರು. ಮೊದಲಿಗೆ ಅಂಚೆ ಇಲಾಖೆಯಲ್ಲಿದ್ದು, ನಂತರ ಮುಖ್ಯ ಆಯುಕ್ತರ ಕಚೇರಿ, ಅಂತಿಮವಾಗಿ ನ್ಯಾಯಾಂಗ ಆಯುಕ್ತರ ಕಚೇರಿಯಲ್ಲಿ ಕೆಲಸ ಮಾಡಿದರು. ಹಾಗೆ ಕೆಲಸ ಮಾಡುತ್ತಾ ಖಾಸಗಿಯಾಗಿ ಅಭ್ಯಾಸ ಮಾಡಿ ನ್ಯಾಯವಾದಿ ವರ್ಗಕ್ಕೆ ಅರ್ಹರಾದರು. 1871ರಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಅಂದಿನ ಅತ್ಯುನ್ನತ ನ್ಯಾಯಾಲಯವಾದ ನ್ಯಾಯಾಂಗ ಆಯುಕ್ತರ ಕಚೇರಿಯಲ್ಲಿ ನ್ಯಾಯವಾದಿಯಾಗಿ ದಾಖಲಿಸಿಕೊಂಡರು.

ಸ್ವಲ್ಪ ಕಾಲ ಯಶಸ್ವಿಯಾಗಿ ವಕೀಲ ವೃತ್ತಿಯಲ್ಲಿ ಕೆಲಸ ಮಾಡುತ್ತಿರುವಾಗಲೇ ಅವರ ಸಾಧನೆ ಮತ್ತು ನ್ಯಾಯಾಂಗದ ವಿಚಾರಗಳಲ್ಲಿ ಇದ್ದ ಪ್ರತಿಭೆ ಜ್ಯುಡಿಷಿಯಲ್ ಕಮೀಷನರ್ ಆಗಿದ್ದ ಜೇಮ್ಸ್ ಗೋರ್ಡನ್ ಅವರ ಗಮನಕ್ಕೆ ಬಂದಿತು. 1873ರಲ್ಲಿ ಗೋರ್ಡನ್ ಅವರು ಶ್ರೀನಿವಾಸ ಅಯ್ಯಂಗಾರರನ್ನು ಕರೆದು ಮುನ್ಸೀಫರಾಗಿ ಸರ್ಕಾರದ ಸೇವೆ ಸೇರಬೇಕೆಂದು ಆಹ್ವಾನಿಸಿದರು. ಕೋಲಾರ ಜಿಲ್ಲೆಯಲ್ಲಿ ಕಾನೂನು ವ್ಯಾಜ್ಯಗಳಲ್ಲೇ ನಿರತವಾಗಿದ್ದ ವಾಣಿಜ್ಯ ನಗರ ಚಿಂತಾಮಣಿಯಲ್ಲಿ ಅವರನ್ನು ನೇಮಿಸುವುದು ಉಚಿತವಾಗುವುದೆಂದು ಗೋರ್ಡನ್ ಭಾವಿಸಿ ಶ್ರೀನಿವಾಸ ಅಯ್ಯಂಗಾರರಿಗೆ ಆಹ್ವಾನ ನೀಡಿದರು. ಶ್ರೀನಿವಾಸ ಅಯ್ಯಂಗಾರ್, ಗೋರ್ಡನ್ ಅವರ ಆಹ್ವಾನವನ್ನು ಒಪ್ಪಿ ಸಮಸ್ಯೆಗಳ ಬೀಡಾಗಿದ್ದ ಚಿಂತಾಮಣಿಯಲ್ಲಿ ಮುನ್ಸೀಫ್ ಹುದ್ದೆಯನ್ನು ವಹಿಸಿಕೊಂಡರು. ಇಲ್ಲಿ ಅವರು ಆರು ವರ್ಷಗಳ ದೀರ್ಘ ಅವಧಿ ಕೆಲಸ ಮಾಡಿ ನ್ಯಾಯಾಧೀಶರಾಗಿ, ಜೊತೆಗೆ ಅವಕಾಶ ದೊರೆತರೆ, ನ್ಯಾಯಾಂಗ ವಿಚಾರಗಳೇ ಅಲ್ಲದೆ ಆಡಳಿತದ ವಿಚಾರಗಳಲ್ಲಿಯೂ ಸಮರ್ಥವಾಗಿ ಕರ್ತವ್ಯ ನಿರ್ವಹಿಸಬಲ್ಲ ಅಧಿಕಾರಿಯೆಂದು ಮನ್ನಣೆ ಗಳಿಸಿದರು.

ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅವರು ತೋರಿದ ಅರ್ಹತೆಗಳು ಮತ್ತು ಕಾರ್ಯಸಾಧನೆ ಅವರಿಗೆ ಮೂರು ಬಡ್ತಿಗಳನ್ನು ತಂದುಕೊಟ್ಟಿತು. ಶ್ರೀನಿವಾಸ ಅಯ್ಯಂಗಾರರು ನ್ಯಾಯಾಧೀಶರಾಗಿ ನ್ಯಾಯ ಸಂಬಂಧ ವಿಚಾರಗಳಲ್ಲಿ ತೋರಿದ ಕಾರ್ಯಸಾಧನೆಯನ್ನು ಜ್ಯುಡಿಷಿಯಲ್ ಕಮಿಷನರ್ ಗೋರ್ಡನ್ ಪ್ರಶಂಸಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಂತೆಯೇ 1876–78ರ ಭೀಕರ ಕ್ಷಾಮದ ಅವಧಿಯಲ್ಲಿ ಅವರು ಮಾಡಿದ ಸೇವೆ ಕ್ಷಾಮ ಪರಿಹಾರ ಕಾರ್ಯಗಳ ಆಯುಕ್ತರಾಗಿದ್ದ ಸರ್ ಚಾರ್ಲ್ಸ್ ಈಲಿಯಾಟ್ ಅವರ ಮೆಚ್ಚುಗೆಯನ್ನೂ ಗಳಿಸಿದ್ದಲ್ಲದೆ ಭಾರತ ಸರ್ಕಾರದಿಂದ ಧನ್ಯವಾದಗಳನ್ನೂ ಅವರಿಗೆ ತಂದುಕೊಟ್ಟಿತು.

1879ರ ಅಂತ್ಯದಲ್ಲಿ ಶ್ರೀನಿವಾಸ ಅಯ್ಯಂಗಾರರನ್ನು ಚಿತ್ರದುರ್ಗಕ್ಕೆ ವರ್ಗಾಯಿಸಲಾಯಿತು. ಇಲ್ಲಿ ಅವರು ಮುನ್ಸೀಫರಾಗಿ ಕರ್ತವ್ಯ ನಿರ್ವಹಿಸುವುದರ ಜೊತೆಗೆ ಜಿಲ್ಲಾ ಖಜಾನೆ ಮತ್ತು ಜೈಲಿನ ಮೇಲುಸ್ತುವಾರಿಯನ್ನು ಹಾಗೂ ಕೆಳಗಿನ ನ್ಯಾಯಾಲಯದ ಮೇಲುಸ್ತುವಾರಿಯನ್ನು ನೋಡಿಕೊಳ್ಳಬೇಕಾಯಿತು. ನಂತರ 1883ರ ಪ್ರಾರಂಭದಲ್ಲಿ ಅವರನ್ನು ಮೈಸೂರಿಗೆ ವರ್ಗಾಯಿಸಲಾಯಿತು. ಇಲ್ಲಿ ಅವರು ಪೂರ್ತಿ ಹತ್ತು ವರ್ಷ ಕಾಲ ಕರ್ತವ್ಯ ನಿರ್ವಹಿಸಿದರು. ಮೊದಲಿಗೆ ಮೊದಲ ದರ್ಜೆ ಮುನ್ಸೀಫ್, ನಂತರ ಸಹಾಯಕ ಆಯುಕ್ತ ಸ್ಥಾನ, ಅದಾದ ಮೇಲೆ ಸಬ್–ಜಡ್ಜ್ ಮತ್ತು ಕೊನೆಯಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ಈ ಎಲ್ಲ ಹುದ್ದೆಗಳಲ್ಲಿ ಅವರು ಶ್ರೇಷ್ಠ ಮಟ್ಟದ ದಕ್ಷತೆ ತೋರಿ ಪ್ರಸಿದ್ಧಿಯನ್ನೂ ಪಡೆದರು.

ಅಧಿಕೃತವಾದ ಈ ಹುದ್ದೆಗಳನ್ನು ಅವರು ನಿರ್ವಹಿಸುವುದರ ಜೊತೆಗೆ ಮೈಸೂರು ನಗರಾಭಿವೃದ್ಧಿ ಸಮಿತಿಯ ಸದಸ್ಯರೂ ಆಗಿದ್ದರು. ಸದ್ವಿದ್ಯಾ ಸಂಸ್ಕೃತ ಪಾಠಶಾಲೆಯ ಅಧ್ಯಕ್ಷರೂ (1892–93) ಹಾಗೂ ಸಹಾಯ ಧನ ಪಡೆಯುತ್ತಿದ್ದ ಆಂಗ್ಲೋ ಸಂಸ್ಕೃತ ಶಾಲೆಯ ವಿಶ್ವಾಸ ಮಂಡಲಿಯ ಕಾರ್ಯದರ್ಶಿಯೂ ಆಗಿ ಸಮರ್ಥ ಕೆಲಸ ಮಾಡಿದರು. 1892ರಲ್ಲಿ ವೈಸರಾಯ್ ಅವರ ಭೇಟಿಯ ಸಂದರ್ಭದಲ್ಲಿ ಇವರನ್ನು ವಿಶೇಷ ಕರ್ತವ್ಯದ ಮೇಲೆ ನೇಮಿಸಲಾಯಿತು. ಈ ಎಲ್ಲ ಜವಾಬ್ದಾರಿಗಳನ್ನು ಅವರು ಸಮರ್ಥವಾಗಿ ನಿರ್ವಹಿಸಿದರು.

ನ್ಯಾಯ ನಿರ್ವಹಣೆಯಲ್ಲಿ ಅವರ ಸಾಮರ್ಥ್ಯ ಮತ್ತು ನ್ಯಾಯ ವಿಚಾರಗಳಲ್ಲಿ ಅವರ ಕುಶಾಗ್ರಮತಿ, ಅವುಗಳಿಂದಾಗಿ ನ್ಯಾಯ ನಿರ್ವಹಣಾ ಕಾರ್ಯಗಳಲ್ಲಿ ಅಚ್ಚಳಿಯದಂತೆ ಉಳಿದ ಅವರ ಸಾಧನೆ, ತಾವಾಗಿಯೇ ವಹಿಸಿಕೊಂಡ ಇತರೆ ಜವಾಬ್ದಾರಿ ಕೆಲಸಗಳಲ್ಲಿ ಅವರು ತೋರಿಸಿದ ಬುದ್ಧಿವಂತಿಕೆ ಮತ್ತು ಚಾಕಚಕ್ಯತೆಗಳು ಸರ್ಕಾರ ಹಾಗೂ ಸಾರ್ವಜನಿಕರ ಗೌರವ–ಪ್ರಶಂಸೆಗಳನ್ನು ಗಳಿಸಿದವು. ಅವರ ಆರೋಗ್ಯದ ದೃಷ್ಟಿಯಿಂದ ಹಾಗೂ ಅವರು ತಮ್ಮ ಸಾಮರ್ಥ್ಯಗಳನ್ನು ಇತರೆಡೆ ಬಳಸಿಕೊಳ್ಳುವ ಸಲುವಾಗಿ 1893ರಲ್ಲಿ ಅವರನ್ನು ಮೈಸೂರಿನಿಂದ ವರ್ಗಾಯಿಸಿದಾಗ ಮೈಸೂರಿನ ಜನತೆ ವಿಷಾದವನ್ನು ವ್ಯಕ್ತಪಡಿಸಿದರಾದರೂ ಅವರ ಸೇವೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿ ಹಾರ್ದಿಕವಾಗಿ ಬೀಳ್ಕೊಟ್ಟರು. ಮೈಸೂರಿನಲ್ಲಿನ ಸೇವೆಯ ನಂತರ ಶ್ರೀನಿವಾಸ ಅಯ್ಯಂಗಾರರನ್ನು ನ್ಯಾಯಾಂಗ ಇಲಾಖೆ ಸೇವೆಯಿಂದ ಸಾಮಾನ್ಯ ಆಡಳಿತ ಇಲಾಖೆಗೆ ವರ್ಗಾಯಿಸಿ ಚಿತ್ರದುರ್ಗದ ಜಿಲ್ಲಾ ಆಯುಕ್ತರು ಮತ್ತು ಜಿಲ್ಲಾ ನ್ಯಾಯಾಧೀಶರನ್ನಾಗಿ ನೇಮಿಸಲಾಯಿತು. ಅವರ ಆರೋಗ್ಯದ ಸಲುವಾಗಿ ಅವರ ಕೋರಿಕೆಯಂತೆ ಶ್ರೀನಿವಾಸ ಅಯ್ಯಂಗಾರರನ್ನು ನ್ಯಾಯಾಂಗ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗ ಮಾಡಬೇಕಾಗಿ ಬಂದಿದ್ದಕ್ಕಾಗಿ ಸರ್ಕಾರ ತನ್ನ ವಿಷಾದವನ್ನು ದಾಖಲಿಸಿ, ನ್ಯಾಯಾಂಗ ಇಲಾಖೆಯಲ್ಲಿ ಅವರು ಮಾಡಿದ ಸೇವಾ ಕಾರ್ಯವನ್ನು ರಾಜ್ಯದ ಶ್ರೇಷ್ಠ ನ್ಯಾಯಾಲಯ ಕೂಡ ಅಪಾರ ಮೆಚ್ಚುಗೆಯೊಂದಿಗೆ ವರ್ಗಾವಣೆಗೆ ಒಪ್ಪಿಗೆ ನೀಡಿರುವುದನ್ನು ಶ್ರೀನಿವಾಸ ಅಯ್ಯಂಗಾರರಿಗೆ ಸರ್ಕಾರ ತಿಳಿಸಿತು.

ಶ್ರೀನಿವಾಸ ಅಯ್ಯಂಗಾರ್ ಮೊದಲಿಗೆ ಸರ್ಕಾರದ ಲೆಜಿಸ್ಲೇಟಿವ್ ಕಾರ್ಯದರ್ಶಿಯಾಗಿ ಸ್ವಲ್ಪ ಕಾಲ ಕೆಲಸ ಮಾಡಿದ ನಂತರ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾಗಿದ್ದು, 1893ರಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಣೆಗಾರಿಕೆಯನ್ನು ವಹಿಸಿಕೊಂಡರು. ಅಲ್ಲಿ ಎರಡು ವರ್ಷದ ಸೇವಾವಧಿಯಲ್ಲಿ ತಮಗೆ ನೇರವಾಗಿ ಒಳಪಟ್ಟಿದ್ದ ಇಲಾಖೆಗಳಲ್ಲದೆ ಶೈಕ್ಷಣಿಕ, ನೀರಾವರಿ, ಸಂಪರ್ಕ, ಮತ್ತು ನೈರ್ಮಲ್ಯಗಳ ವಿಷಯಗಳ ಬಗ್ಗೆಯೂ ಆಸಕ್ತಿ ವಹಿಸಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದರು. 1895ರಲ್ಲಿ ಸರ್ಕಾರ ಅವರನ್ನು ಕೇಂದ್ರ ಸ್ಥಾನಕ್ಕೆ ಕರೆಸಿಕೊಂಡು ಸರ್ಕಾರದ ಕಂದಾಯ ಇಲಾಖೆ ಕಾರ್ಯದರ್ಶಿಯನ್ನಾಗಿ ನೇಮಿಸಿತು. ಒಂದು ವರ್ಷದ ತರುವಾಯ ಕಂದಾಯ ಮತ್ತು ಸಾಮಾನ್ಯ ಆಡಳಿತದ ಕಾರ್ಯದರ್ಶಿಯನ್ನಾಗಿ ನೇಮಿಸಿ ಎರಡೂ ವಿಭಾಗಗಳ ಹೊಣೆಗಾರಿಕೆಯನ್ನು ಅವರಿಗೆ ವಹಿಸಿತು. ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅವರಿಗೆ ತಮ್ಮ ಮೆಚ್ಚಿನ ನ್ಯಾಯಾಂಗ ಇಲಾಖೆಗೆ ಮತ್ತೆ ಹಿಂತಿರುಗುವ ಆಸೆ ಉಂಟಾಯಿತು. ಈ ಹಿಂದೆ ಅವರು ಈ ಇಲಾಖೆಯಲ್ಲಿ 20 ವರ್ಷಗಳ ಕಾಲ ಕೆಲಸ ಮಾಡಿ ಇದರ ಬಗ್ಗೆ ವಿಶೇಷ ಮಮತೆಯನ್ನು ಹೊಂದಿದ್ದರು. ಅದೃಷ್ಟವೋ ಎನ್ನುವಂತೆ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಮತ್ತೆ ನ್ಯಾಯಾಂಗ ಜವಾಬ್ದಾರಿಗೇ ಹಿಂತಿರುಗುವ ಅವಕಾಶ ಕಂಡು ಬಂದಿತಾದರೂ ಮುಮ್ಮಡಿ ಕೃಷ್ಣರಾಜ ಒಡೆಯರು ಇನ್ನೂ ಚಿಕ್ಕವರಾಗಿದ್ದು ಅವರ ಬದಲಿಗೆ ರೀಜೇಂಟ್ ಸ್ಥಾನದಲ್ಲಿದ್ದ ಮಹಾರಾಣಿ ವಾಣೀವಿಲಾಸ ಸನ್ನಿಧಾನದವರು ಅವರು ಕಾರ್ಯದರ್ಶಿ ಸ್ಥಾನದಲ್ಲೇ ಮುಂದುವರಿಯುವುದು ಅಗತ್ಯವೆಂದು ನಿರ್ಧರಿಸಿ ಅವರನ್ನು ಆ ಹುದ್ದೆಯಿಂದ ಬಿಡುಗಡೆ ಮಾಡಲು ಇಚ್ಛಿಸದೆ ಹೋದರು. ಇದರಿಂದಾಗಿ ಶ್ರೀನಿವಾಸ ಅಯ್ಯಂಗಾರ್ ಅವರು ಅದೇ ಸ್ಥಾನದಲ್ಲಿ ಆರು ವರ್ಷ ಕಾಲ ಇರಬೇಕಾಯಿತು. ಈ ಅವಧಿಯಲ್ಲಿ ಅವರು ಸಲ್ಲಿಸಿದ ಸೇವೆ ರೀಜೆಂಟ್ ಮಹಾರಾಣಿ, ಸರ್ ಕೆ. ಶೇಷಾದ್ರಿ ಅಯ್ಯರ್ ಹಾಗೂ ಸರ್ ಡೋನಾಲ್ಡ್ ರಾಬರ್ಟ್ಸನ್ ಅವರ ಗಮನಕ್ಕೆ ಬಂದು ಅವರು ಶ್ರೀನಿವಾಸ ಅಯ್ಯಂಗಾರರ ಬಗ್ಗೆ ಪೂರ್ಣ ಭರವಸೆಯನ್ನು ಇಟ್ಟುಕೊಂಡು ರಾಜ್ಯದ ಮಹತ್ವಪೂರ್ಣ ವಿಷಯಗಳ ಬಗ್ಗೆ ಅವರ ಸಲಹೆ ಮತ್ತು ಸಹಾಯಗಳನ್ನು ಆಗಾಗ್ಗೆ ಕೇಳಲಾರಂಭಿಸಿದರು.

ರೀಜೆನ್ಸಿ ಕೌನ್ಸಿಲ್‌ನಿಂದ ಶೇಷಾದ್ರಿ ಅಯ್ಯರ್ 1901ರಲ್ಲಿ ನಿವೃತ್ತಿಹೊಂದಿದ ಮೇಲೆ ಅದರ ಎರಡನೇ ಸದಸ್ಯರಾಗಿ ಶ್ರೀನಿವಾಸ ಅಯ್ಯಂಗಾರ್ ಪದೋನ್ನತಿ ಪಡೆದರು. 1903ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಪಟ್ಟದ ಮೇಲೆ ಕೂರಿಸಿದ ಮೇಲೆ ರೀಜೆನ್ಸಿ ಕೌನ್ಸಿಲ್ ರದ್ದಾಗಿ ಸಲಹಾ ಮಂಡಲಿ ರಚಿತವಾಗಿ ಶ್ರೀನಿವಾಸ ಅಯ್ಯಂಗಾರರನ್ನು ಅದರ ಎರಡನೇ ಸದಸ್ಯರನ್ನಾಗಿ ಮಾಡಲಾಯಿತು. ವಿ.ಪಿ. ಮಾಧವರಾವ್ ಅವರು ದಿವಾನರಾಗಿ ತಿರುವನಂತಪುರಕ್ಕೆ ತೆರಳಿದ ನಂತರ ಶ್ರೀನಿವಾಸ ಅಯ್ಯಂಗಾರರನ್ನು ಮೈಸೂರು ಮಂಡಲಿಯ ಹಿರಿಯ ಸದಸ್ಯರನ್ನಾಗಿ ನೇಮಿಸಲಾಯಿತು. ಶ್ರೀನಿವಾಸ ಅಯ್ಯಂಗಾರರ ದೀರ್ಘ ಮತ್ತು ದಕ್ಷ ಸೇವೆಯನ್ನು ಗುರುತಿಸಿ ಅಕ್ಟೋಬರ್ 1904ರಲ್ಲಿ ಮಹಾರಾಜರು ಅವರಿಗೆ 'ರಾಜಾ ಮಂತ್ರ ಪ್ರವೀಣ' ಬಿರುದನ್ನು ನೀಡಿದರು. ಅಲ್ಲಿಯವರೆಗೆ ಈ ಅತ್ಯುನ್ನತ ಗೌರವನ್ನು ಚೆಂಟ್ಸಲ್ ರಾವ್ ಮಾತ್ರ ಪಡೆದಿದ್ದರು. ಮಂಡಲಿಯ ಸದಸ್ಯತ್ವ ಮುಗಿದ ನಂತರ ಶ್ರೀನಿವಾಸ ಅಯ್ಯಂಗಾರರು 1905ರಲ್ಲಿ 40 ವರ್ಷಗಳ ಕಾಲದ ಸುದೀರ್ಘ ಹಾಗೂ ನಿಷ್ಠಾವಂತ ಸೇವೆಯನ್ನು ಪೂರ್ಣಗೊಳಿಸಿ ನಿವೃತ್ತರಾದರು. ನಿವೃತ್ತಿ ಆದ ಮೇಲೂ ಶ್ರೀನಿವಾಸ ಅಯ್ಯಂಗಾರ್ ಅವರು ಹೊಸದಾಗಿ ರಚಿಸಲಾದ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಅನಧಿಕೃತ ಸದಸ್ಯರಾಗಿ ಹಾಗೂ ಹಲವಾರು ಸಂಸ್ಥೆಗಳ ಅಧ್ಯಕ್ಷರಾಗಿ ತಮ್ಮ ಸೇವೆ ಸಲ್ಲಿಸಿಕೊಂಡು ಬಂದರು.

ಶ್ರೀನಿವಾಸ ಅಯ್ಯಂಗಾರರ ನಾಲ್ಕು ದಶಕಗಳ ಅವಧಿಯ ಸೇವೆ ಅತ್ಯುನ್ನತ ಮಟ್ಟದ್ದಾಗಿತ್ತು. ಅವರನ್ನು ಕಂಡವರೆಲ್ಲಾ ಅವರ ಅದಮ್ಯ ಸೇವೆ, ಕರ್ತವ್ಯ ಪ್ರಜ್ಞೆ ಮತ್ತು ಸ್ನೇಹಪರ ಮನೋಭಾವಗಳನ್ನು ಮೆಚ್ಚದೆ ಇರುತ್ತಿರಲಿಲ್ಲ. ಅಂತಹ ಉತ್ತಮ ಸೇವೆ ಸಲ್ಲಿಸಿ 'ರಾಜಮಂತ್ರ ಪ್ರವೀಣ' ಸಿ. ಶ್ರೀನಿವಾಸ ಅಯ್ಯಂಗಾರ್ ನಿವೃತ್ತಿ ಪಡೆದಿದ್ದರು.

ಹೂಟಗಳ್ಳಿ ನಗರಸಭೆ ಆಯವ್ಯಯ ಪೂರ್ವ ಸಭೆಯಲ್ಲಿ ಜನರ ಸಮಸ್ಯೆಗಳ ಸುರಿಮಳೆ!





2024–25ನೇ ಸಾಲಿನ ಆಯ–ವ್ಯಯ ಸಿದ್ಧಪಡಿಸಲು ಮೈಸೂರು ಹೂಟಗಳ್ಳಿ ನಗರಸಭೆ ಪೌರಾಯುಕ್ತ ಟಿ.ಎನ್.ನರಸಿಂಹಮೂರ್ತಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಹಿರಿಯ ನಾಗರಿಕರು, ವಿವಿಧ ಸಂಘ–ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕೈಗಾರಿಕಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಮೈಸೂರು, ಫೆ.17(ಎಸ್‌ಪಿಎನ್)– ನಮ್ಮ ಬೀದಿಯಲ್ಲಿ ಲೈಟ್ ಇಲ್ಲ.... ಕೆಲ ಬಡಾವಣೆಗಳಲ್ಲಿ ಯುಜಿಡಿ ಪೈಪ್ ಸರಿಪಡಿಸಿಲ್ಲ... ಸರಿಯಾದ ಸಮಯಕ್ಕೆ ಕಸದ ವ್ಯಾನ್ ಬರುತ್ತಿಲ್ಲ.. ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿದೆ. ರಸ್ತೆಗಳಿಗೆ ಡಾಂಬರ್ ಹಾಕಿಲ್ಲ ಹೀಗೆ ಸಾರ್ವಜನಿಕ ಸಭೆಯಲ್ಲಿ ಸಾಲು ಸಾಲು ಸಮಸ್ಯೆಗಳು ಮಂಡನೆಯಾದವು.

ಹೂಟಗಳ್ಳಿ ನಗರಸಭೆ ಪೌರಾಯುಕ್ತ ಟಿ.ಎನ್.ನರಸಿಂಹ ಮೂರ್ತಿ ನೇತೃತ್ವದಲ್ಲಿ ಶನಿವಾರ 2024–25ನೇ ಸಾಲಿನ ಆಯ–ವ್ಯಯ ಸಿದ್ಧಪಡಿಸಲು ಕರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಹಿರಿಯ ನಾಗರಿಕರು, ವಿವಿಧ ಸಂಘ–ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕೈಗಾರಿಕಾ ಪ್ರತಿನಿಧಿಗಳು ಮನವಿ ಮಾಡಿದರು. ಸಭೆಯಲ್ಲಿದ್ದ ಸುಬ್ರಹ್ಮಣ್ಯ ನಗರದ ನಿವಾಸಿಗಳು, ಪೌರಾಯುಕ್ತರಿಗೆ ಮನವಿ ಮಾಡುತ್ತ, ನಮ್ಮ ಬಡಾವಣೆ ಇತ್ತ ಮೈಸೂರು ನಗರ ಪಾಲಿಕೆ ವ್ಯಾಪ್ತಿಗೂ ಇಲ್ಲ.. ಅತ್ತ ಹೂಟಗಳ್ಳಿ ನಗರಸಭೆ ವ್ಯಾಪ್ತಿಗೂ ಇಲ್ಲ ಎನ್ನುವ ಪರಿಸ್ಥಿತಿ ಇದೆ. ನಮ್ಮನ್ನು ಯಾಕೆ ಅತಂತ್ರ ಸ್ಥಿತಿಯಲ್ಲಿಟ್ಟಿದ್ದೀರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ನಮ್ಮ ಬಡಾವಣೆ ಸಮೀಪ ಇರುವ ಖಾಸಗಿ ಅಪಾರ್ಟ್‌ಮೆಂಟ್‌ನವರು ಪೂರ್ಣಯ್ಯ ನಾಲೆ ಜಾಗವನ್ನು ಒತ್ತುವರಿ ಮಾಡಿದ್ದಾರೆ. ಇದರಿಂದ ವಿಜಯನಗರ ಒಂದನೇ ಹಂತದಿಂದ ಬರುವ ಯುಜಿಡಿ ಮತ್ತು ಮಳೆ ನೀರು ಮುಂದೆ ಸರಾಗವಾಗಿ ಸಾಗದೇ ಸುಬ್ರಹ್ಮಣ್ಯನಗರದ ಬಳಿ ನಿಂತು ಸಾಂಕ್ರಾಮಿಕ ರೋಗ ಹರಡುತ್ತಿದೆ. ಈ ಸ್ಥಳಕ್ಕೆ ಸಮೀಪದಲ್ಲಿರುವ ಫುಡ್‌ಕೋರ್ಟ್‌ನವರು ನಾನ್‌ವೆಜ್ ತ್ಯಾಜ್ಯ ಹಾಗೂ ರಾಶಿರಾಶಿ ಕೂದಲು ಮೂಟೆಯನ್ನು ತಂದು ಸುರಿಯುತ್ತಿದ್ದಾರೆ. ಇದರ ಜೊತೆಗೆ ಬೇರೆ ಬೇರೆ ಸ್ಥಳದಲ್ಲಿರುವ ನಾನ್‌ವೆಜ್ ಶಾಪ್‌ನವರು ತ್ಯಾಜ್ಯ ತಂದು ಈ ಸ್ಥಳದಲ್ಲೇ ಸುರಿಯುತ್ತಿರುವುದರಿಂದ ದುರ್ವಾಸನೆ ಹೇಳತೀರದು. ಈ ವಾಸನೆಯಿಂದ ನಿತ್ಯವೂ ನರಕಯಾತನೆ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆಗೆ ಬಜೆಟ್‌ನಲ್ಲಿ ಏನಾದರೂ ಪರಿಹಾರ ಒದಗಿಸಲು ಸಾಧ್ಯವೇ ಎಂದು ಸಹಾಯಕ ಅಭಿಯಂತರ (ಪರಿಸರ)ರಾದ ಬಿ.ಜೆ.ಅಶ್ವಿನಿ ಅವರಲ್ಲಿ ಮನವಿ ಮಾಡಿದರು.

ಹೂಟಗಳ್ಳಿ ನಗರಸಭೆ ವ್ಯಾಪ್ತಿಗೆ ಹಿನಕಲ್, ಕೂರ್ಗಳ್ಳಿ, ಬೆಳವಾಡಿ, ಸುಬ್ರಹ್ಮಣ್ಯನಗರ, ಚಾಮುಂಡೇಶ್ವರಿನಗರ, ಹೆಬ್ಬಾಳ ಕೈಗಾರಿಕಾ ಪ್ರದೇಶ ಬಡಾವಣೆಗಳು ಬರುತ್ತವೆ. ಹೂಟಗಳ್ಳಿ ನಗರಸಭೆ ಆದ ಮೇಲೂ ಈ ಬಡಾವಣೆಗಳಿಗೆ ಮೂಲ ಸೌಕರ್ಯ ಒದಗಿಸುತ್ತಿಲ್ಲ. ರಾಜಕಾಲುವೆ ಒತ್ತುವರಿ ತೆರವುಗೊಳಿಸುತ್ತಿಲ್ಲ. ಪ್ಲಾಸ್ಟಿಕ್ ಬಳಕೆ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಬೀದಿನಾಯಿಗಳ ಹಾವಳಿ ಹೆಚ್ಚಾಗಿದೆ. ಹೂಟಗಳ್ಳಿ ನಗರ ವ್ಯಾಪ್ತಿಯ ಪರಿಸರವೇ ಹದಗೆಟ್ಟು ಹೋಗಿದೆ. ಇಷ್ಟೆಲ್ಲ ಸಮಸ್ಯೆಗಳ ನಡುವೆ, 2024–25ನೇ ಸಾಲಿನ ಬಜೆಟ್ ಮಂಡನೆ ಮಾಡಿ ಏನು ಮಾಡುತ್ತೀರಿ?. ನಿಮ್ಮಲ್ಲಿ ಎಷ್ಟು ಅನುದಾನ ಲಭ್ಯವಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುವ ಅನುದಾನವನ್ನು ಬೇಕಾಬಿಟ್ಟಿ ವ್ಯಯಿಸಿ ಸಾರ್ವಜನಿಕರಿಗೆ ಉಪಯೋಗವಾಗದ ಕಾಮಗಾರಿಗಳನ್ನು ಹಮ್ಮಿಕೊಳ್ಳಬೇಡಿ ಎಂದು ತಾಕೀತು ಮಾಡಿದರು. ಇದಕ್ಕೆ ಉತ್ತರಿಸಿದ ಪೌರಾಯುಕ್ತ ಟಿ.ಎನ್.ನರಸಿಂಹಮೂರ್ತಿ, ಇಂದಿನ ಸಭೆಯಲ್ಲಿ ವಿವಿಧ ಕ್ಷೇತ್ರದ ಜನಪ್ರತಿನಿಧಿಗಳು ನೀಡಿರುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿ, ನಮ್ಮ ನಗರಸಭೆ ವ್ಯಾಪ್ತಿಯ ಬಡಾವಣೆಗಳಿಗೆ ಹಂತ ಹಂತವಾಗಿ ಗುಣಮಟ್ಟದ ಕಾಮಗಾರಿಗಳನ್ನು ಹಮ್ಮಿಕೊಂಡು ಮೂಲಸೌಕರ್ಯ ಒದಗಿಸಲಾಗುವುದು. ಈ ವೇಳೆ ಲೆಕ್ಕಾಧಿಕಾರಿ ಸಿದ್ದೇಗೌಡ ಸೇರಿದಂತೆ ಇತರೆ ನಗರಸಭೆ ಅಧಿಕಾರಿಗಳು ಉಪಸ್ಥಿತರಿದ್ದರು.

ಫೆ.26, 27ರಂದು ಮೈಸೂರಲ್ಲಿ ಬೃಹತ್ ಉದ್ಯೋಗ ಮೇಳ

ಮೈಸೂರು, ಫೆ.17–ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ಫೆ.26 ಹಾಗೂ 27 ರಂದು ಬೆಂಗಳೂರಿನ ಅರಮನೆಯ ಮೈದಾನದಲ್ಲಿ 2 ದಿನಗಳ ರಾಜ್ಯ ಮಟ್ಟದ ಯುವ ಸಮೃದ್ಧಿ ಸಮ್ಮೇಳನ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಉದ್ಯೋಗ ಮೇಳದಲ್ಲಿ ಅತಿ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿದ್ದು, ಪ್ರೌಢಶಿಕ್ಷಣ, ಪದವಿ ಪೂರ್ವ, ಪದವಿ, ಸ್ನಾತಕೋತ್ತರ, ಐ.ಟಿ.ಐ, ಡಿಪ್ಲೊಮಾ, ತಾಂತ್ರಿಕ ಶಿಕ್ಷಣ ಮತ್ತು ಕಂಪ್ಯೂಟರ್ ಜ್ಞಾನವುಳ್ಳ ಅಭ್ಯರ್ಥಿಗಳು ಮೇಳದಲ್ಲಿ ಭಾಗವಹಿಸಬಹುದಾಗಿದ್ದು, ಆಸಕ್ತ ಅಭ್ಯರ್ಥಿಗಳು https://skillconnect.kaushalkar.com ವೆಬ್‌ಸೈಟ್‌ನಲ್ಲಿ ನೋಂದಣಿಯಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಯ ದೂ.ಸಂ. 0821–2970815 ಅನ್ನು ಸಂಪರ್ಕಿಸಬಹುದೆಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 18 ಫೆಬ್ರವರಿ 2024

ಪಾಲಿಕೆ ಆಯುಕ್ತರಿಂದ ಸೇವಾಪರ ನಿರ್ಧಾರ; ಮೂಲಸೌಕರ್ಯ, ತುರ್ತು ಸೇವೆಗಳಿಗೆ ಪಾಲಿಕೆ ಅಧಿಕಾರಿಗಳನ್ನು ಸಂಪರ್ಕಿಸಿ!

ಮೈಸೂರು,ಫೆ17(ಆರ್‌ಕೆ)– ಅಪಾಯಕಾರಿ ಮರ, ವಿದ್ಯುತ್ ಕಂಬ, ಮ್ಯಾನ್ ಹೋಲ್, ಒಳಚರಂಡಿ, ರೋಡ್ ಹಂಪ್‌ಗಳು ಹಾಗೂ ಇನ್ನಿತರ ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರು ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದ್ದಾರೆ.

ಪಾಲಿಕೆಯ ಎಲ್ಲಾ 9 ವಲಯ ಕಚೇರಿ ವ್ಯಾಪ್ತಿಯಲ್ಲಿ ವಾಸವಿರುವ ನಾಗರಿಕರು, ತಮ್ಮ ದೈನಂದಿನ ಕಾರ್ಯಗಳಾದ ನೀರು ಸರಬರಾಜು, ಒಳಚರಂಡಿ, ಬೀದಿ ದೀಪ, ಸ್ವಚ್ಛತೆ, ರಸ್ತೆ ರಿಪೇರಿ, ಜನನ–ಮರಣ ಪ್ರಮಾಣಪತ್ರ, ಬಾಕಿ ಕಂದಾಯ, ಕಟ್ಟಡ ರಹದಾರಿ, ಉದ್ದಿಮೆ ರಹದಾರಿ ಸೇರಿದಂತೆ ಇನ್ನಿತರ ಸೇವೆಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಅವರ ಮೊಬೈಲ್ ಸಂಖ್ಯೆ ಮೂಲಕ ಸಂಪರ್ಕಿಸಬೇಕೆಂದು ಆಯುಕ್ತರು ತಿಳಿಸಿದ್ದಾರೆ.

ವಲಯ ಕಚೇರಿ–1 ಎಂ.ಎನ್.ಮಂಜುನಾಥ ರೆಡ್ಡಿ–9886114076, ಎಸ್.ಸುಶ್ರುತ 9448666380, ವಲಯ ಕಚೇರಿ–2 ನಾಗರಾಜು 9945266195, ಚೇತನ್‌ಬಾಬು 9008071575, ವಲಯ ಕಚೇರಿ–3 ವಿ.ಎಸ್.ಸತ್ಯಮೂರ್ತಿ 9945566213, ವಲಯ ಕಚೇರಿ–4 ವೈ.ಎನ್.ಚಂದ್ರಮ್ಮ 9449338536, ಡಿ.ಪಿ.ಮನುಗೌಡ 9611879547, ವಲಯ ಕಚೇರಿ–5 ಮಹೇಶ್‌ಕುಮಾರ್ ಎಸ್.ಜಿಗಣಿ 9845899348, ವೈ.ವಿ.ಹೇಮಾನಂದ 9980809996, ವಲಯ ಕಚೇರಿ–6 ಎಂ.ಎಸ್.ಪ್ರತಿಭಾ 9964658738, ಜ.ವೆಂಕಟೇಶ್ 9880859192, ವಲಯ ಕಚೇರಿ–7 ನಂಜುಂಡಯ್ಯ 9448008342, ಆರ್.ಜೆ.ರಾಜೀವ್‌ನಾಥ 9731926176, ವಲಯ ಕಚೇರಿ–8 ಬಿ.ಆನಂದ 7795576333, ಅನಂತು 9480768828, ವಲಯ ಕಚೇರಿ–9 ಶಿವಕುಮಾರ್ 9900684767 ಹರ್ಷಿಯೋ ತರುನಂ 7204796331, ನಗರ ಯೋಜನಾ ವಿಭಾಗದ ವೀಣಾ 9880480015, ಎಸ್.ಸಹನ 9738324154 ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ ಎಇಇ ಗಳಾದ ಬಿ.ಎ.ಧನುಷ್ (ಪೂರ್ವ)8073171447, ನಾಗರಾಜೇಗೌಡ (ಪೂರ್ವ)99166 31092, ಮೊಹಮದ್ ಮುಸ್ತಫಾ (ಪಶ್ಚಿಮ) 9535525049, ಸೋಮಶೇಖರ (ಪಶ್ಚಿಮ) 9686237138, ಬೀದಿದೀಪ ನಿರ್ವಹಣೆಯ ಇಇ ದೀಪಕ್ 8197608441, ಎಇಇ ಕವನ 7019977184, ಟೋಲ್ ಫ್ರೀ ಕಂಟ್ರೋಲ್ ರೂಂ 1800425525, ಮೊಬೈಲ್ 8277068000 ಸಂಖ್ಯೆಗೆ ಕರೆ ಮಾಡಬಹುದು.

ಅಲ್ಲದೆ ಪಾಲಿಕೆಯ 24X7 ನಿಯಂತ್ರಣ ಕೊಠಡಿ ಸಹಾಯವಾಣಿ 9449841195, 9449841196, 0821–2440890, 2418800, 2418811 ಹಾಗೂ 2418816 ಸಂಖ್ಯೆಗಳಿಗೂ ಸಾರ್ವಜನಿಕರು ಕರೆ ಮಾಡಿ ನಾಗರಿಕ ಸಮಸ್ಯೆಗಳ ಬಗ್ಗೆ ದೂರು, ಮಾಹಿತಿ ನೀಡಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇತ್ಯರ್ಥಗೊಳಿಸುವರು ಎಂದು ಆಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದ್ದಾರೆ.

ಜಿ.ಲಾವಣ್ಯರಾಜ್‌ಗೆ ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿ



ಮೈಸೂರು,ಫೆ.17(ಪಿಎಂ)– ಸದ್ವಿದ್ಯಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಜಿ.ಲಾವಣ್ಯರಾಜ್ ತಮ್ಮ ಶಾಲೆಯ ವಿದ್ಯಾರ್ಥಿನಿಯರ ವಿಭಾಗದಲ್ಲಿ 2023–24ನೇ ಸಾಲಿನ ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿಗೆ ಭಾಜನ ರಾಗಿದ್ದಾರೆ. 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಜಿ.ಲಾವಣ್ಯ ರಾಜ್, ಉದ್ದ ಜಿಗಿತ ಮತ್ತು ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಕಳೆದ ವರ್ಷ ರಾಜ್ಯ ಮಟ್ಟದ ಬಾಸ್ಕೆಟ್‌ಬಾಲ್ ಪಂದ್ಯಾವಳಿ ಯಲ್ಲಿ ಪ್ರಥಮ ಸ್ಥಾನ ಪಡೆದಿದ್ದರು. ಆರ್.ಗುರುರಾಜ್ ಮತ್ತು ರಂಗವೇಣಿ ದಂಪತಿ ಪುತ್ರಿ ಲಾವಣ್ಯರಾಜ್ ಕ್ರೀಡಾ ಕ್ಷೇತ್ರದಲ್ಲಿ ಹಲವು ಸಾಧನೆ ಮಾಡಿದ್ದಾರೆ.

'ಕಮಲ' ಹಿಡಿಯಲು ಮುಂದಾದರೆ ಕಮಲ್‌ನಾಥ್!?



ಹೊಸದಿಲ್ಲಿ: ಕಾಂಗ್ರೆಸ್ ಹಾಗೂ ಗಾಂಧಿ ಕುಟುಂಬದ ನಿಷ್ಠ ಎಂದೇ ಗುರುತಿಸಿಕೊಂಡಿರುವ ಮಧ್ಯಪ್ರದೇಶದ ಮಾಜಿ ಸಿಎಂ ಕಮಲ್ ನಾಥ್, ಈಗ ತಮ್ಮ ಹೆಸರಿನಲ್ಲಿ ಮಾತ್ರವಲ್ಲ, ಕೈಯಲ್ಲೂ ಕಮಲ ಹಿಡಿಯಲು ಮುಂದಾಗಿದ್ದಾರೆ ಎಂಬ ಸುದ್ದಿ ಹರಡಿದೆ. ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಈ ಬೆಳವಣಿಗೆ ರಾಷ್ಟ್ರ ರಾಜಕಾರಣದಲ್ಲಿ ಮತ್ತೊಂದು ಸಂಚಲನ ಮೂಡಿಸಿದೆ.

ಕಮಲನಾಥ್ ಅವರ ಬಿಜೆಪಿ ಸೇರ್ಪಡೆ ಊಹಾಪೋಹಕ್ಕೆ ಅವರ ದಿಲ್ಲಿ ಭೇಟಿ ಪುಷ್ಠಿ ನೀಡಿದೆ. ಈಗಾಗಲೇ ಅವರ ಮಗ ನಕುಲ್ ನಾಥ್, ಕಾಂಗ್ರೆಸ್ ತ್ಯಜಿಸುತ್ತಿರುವ ಸಂಕೇತವನ್ನು ಸಾಮಾಜಿಕ ಜಾಲತಾಣದಲ್ಲಿನ ತಮ್ಮ 'ಬಯೋ' ಬದಲಿಸುವ ಮೂಲಕ ನೀಡಿದ್ದಾರೆ. ರಾಷ್ಟ್ರ ರಾಜಧಾನಿಗೆ ಶನಿವಾರ ಮಧ್ಯಾಹ್ನ ತೆರಳಿರುವ ಕಮಲ್ ನಾಥ್ ಅವರು ಬಿಜೆಪಿ ಹಿರಿಯ ನಾಯಕರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ.

ಕಮಲ್ ನಾಥ್ ಅವರು ಕೇಸರಿ ಶಾಲು ಧರಿಸಲಿದ್ದಾರೆ ಎಂಬ ಸುದ್ದಿ ಕಳೆದ ಕೆಲವು ದಿನಗಳಿಂದ ಹರಿದಾಡುತ್ತಿತ್ತು. ಈಗಿನ ಬೆಳವಣಿಗೆಗಳು, ಊಹಾಪೋಹಗಳನ್ನು ದಟ್ಟಗೊಳಿಸಿವೆ.

ಕಮಲ್ ನಾಥ್ ಅವರು ಬಿಜೆಪಿ ಸೇರುತ್ತಾರೋ, ಇಲ್ಲವೋ. ಆದರೆ, ಅವರ ಮಗ ನಕುಲ್ ನಾಥ್ ಅವರು ಲೋಕಸಭೆ ಚುನಾವಣೆಯಲ್ಲಿ ಛಿಂದ್ವಾರಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆದು ಸ್ಪರ್ಧಿಸುವುದು ಖಚಿತ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ. ಕಮಲ್ ನಾಥ್ ಅವರು ಬಿಜೆಪಿ ಸೇರ್ಪಡೆಯಾಗುವ ವರದಿಗಳನ್ನು ಒಪ್ಪಿಕೊಂಡಿಲ್ಲ. ಆದರೆ ನಿರಾಕರಿಸಿಯೂ ಇಲ್ಲ. ಇದು ನಿರಾಕರಿಸುವುದರ ಕುರಿತಲ್ಲ. ನೀವು ಇದನ್ನು ಹೇಳುತ್ತಿದ್ದೀರಿ. ನಿಮಗೆ ಕಾತರ ಉಂಟಾಗುತ್ತಿದೆ. ನನಗೆ ಕಾತರ ಇಲ್ಲ. ಈ ಬದಿ ಅಥವಾ ಆ ಬದಿ, ಆದರೆ ಅಂತಹ ಯಾವ ಸಂಗತಿ ಇದ್ದರೂ ನಿಮಗೇ ಮೊದಲು ಹೇಳುತ್ತೇನೆ ಎಂದು ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಿದ್ದರು.

ಚುನಾವಣಾ ರಾಜಕಾರಣದಿಂದ ಹೊರಗಿರಲು ಬಯಸಿರುವ ಕಮಲ್ ನಾಥ್ ಅವರು ರಾಜ್ಯಸಭೆ ಟಿಕೆಟ್ ಸಿಗಲಿದೆ ಎಂದು ಭಾವಿಸಿದ್ದರು. ಆದರೆ ತಮ್ಮ ಹೆಸರು ಪಟ್ಟಿಯಲ್ಲಿ ಇಲ್ಲದ ಕಾರಣ ಕಾಂಗ್ರೆಸ್ ಬಗ್ಗೆ ಅಸಮಾಧಾನಗೊಂಡಿದ್ದಾರೆ. 2023ರ ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿನ ನಂತರ ಕಮಲ್‌ನಾಥ್ ಅವರಿಗೆ ಟಿಕೆಟ್ ನೀಡಲು ರಾಹುಲ್ ಗಾಂಧಿ ವಿರೋಧಿಸಿದ್ದರು ಎನ್ನಲಾಗಿದೆ. ಚುನಾವಣಾ ಪರಾಜಯದ ಬಳಿಕ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದಲೂ ಕಮಲ್ ಅವರಿಗೆ ಕೊಕ್ ನೀಡಲಾಗಿತ್ತು.

ಕಾಂಗ್ರೆಸ್ ತೊರೆದು ಬಿಜೆಪಿ ಸೇರಲಿದ್ದಾರೆ ನವಜೋತ್ ಸಿಂಗ್ ಸಿಧು



ದೆಹಲಿ, ಫೆ. 17– ನವಜೋತ್ ಸಿಂಗ್ ಸಿಧು ಅವರು ಕಾಂಗ್ರೆಸ್ ತೊರೆಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ರಿಪಬ್ಲಿಕ್ ಟಿವಿ ವರದಿ ಪ್ರಕಾರ ಫೆಬ್ರವರಿ 22ರ ನಂತರ ಸಿಧು ಜೊತೆಗೆ 3 ಕಾಂಗ್ರೆಸ್ ಶಾಸಕರು ಬಿಜೆಪಿ ಸೇರಬಹುದು. ಸಿಧು ಅವರಿಗೆ ಯಾವುದೇ ಮಹತ್ವದ ಜವಾಬ್ದಾರಿಗಳನ್ನು ವಹಿಸದ ಕಾರಣ ಪಕ್ಷದ ಹೈಕಮಾಂಡ್ ಬಗ್ಗೆ ಅವರು ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ.

2017 ರ ಪಂಜಾಬ್ ಅಸೆಂಬ್ಲಿ ಚುನಾವಣೆಗೆ ಮೊದಲು ನವಜೋತ್ ಸಿಂಗ್ ಸಿಧು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದರು. ಆಗ ಅವರು ಮೂಲಕ್ಕೆ ಮರಳಿದ 'ಹುಟ್ಟು ಕಾಂಗ್ರೆಸ್ಸಿಗ' ಎಂದು ಹೇಳಿದ್ದರು. ಕ್ರಿಕೆಟಿಗ ಕಮ್ ರಾಜಕಾರಣಿ ಸಿಧು ಅವರು ಹೈಕಮಾಂಡ್ ನಿಂದ ಯಾರನ್ನು ನೇಮಿಸಿದರೂ ಕೆಲಸ ಮಾಡಲು ಸಿದ್ಧ. ಪಕ್ಷವು ಹೇಳಿದರೆ ಎಲ್ಲಿ ಬೇಕಾದರೂ ಚುನಾವಣೆಗೆ ಸ್ಪರ್ಧಿಸುತ್ತೇನೆ ಎಂದು ಹೇಳಿದ್ದರು.

ಗುರುವಾರ ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ರೈತರ ಪ್ರತಿಭಟನೆ ವೇಳೆ ಅಶ್ರುವಾಯು ಶೆಲ್ ದಾಳಿ ಬಗ್ಗೆ ಖಂಡಿಸಿದ ಸಿಧು, ಹೇಡಿತನ ಇದು. ನಮ್ಮ ಪ್ರಾದೇಶಿಕ ವ್ಯಾಪ್ತಿಯಲ್ಲಿ ಇದು ನಡೆಯುತ್ತಿದೆ. ರಿಮೋಟ್ ಕಂಟ್ರೋಲ್ ಸಿಎಂ ಭಗವಂತ್ ಮಾನ್ /ಗೃಹಸಚಿವರು ಮೂಕ ಪ್ರೇಕ್ಷಕರಾಗಿದ್ದಾರೆ ಅದು ನಾಚಿಕೆಗೇಡು ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಸತತ ಪರಿಶ್ರಮಪಟ್ಟರಷ್ಟೇ ಯಶಸ್ಸು ಸಾಧ್ಯ

●ಶಕ್ತಿಧಾಮದ ಮಕ್ಕಳಿಗೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಿವಿಮಾತು ●ಸಮಾಲೋಚನಾ ಸಭೆಯಲ್ಲಿ ವಿದ್ಯಾರ್ಥಿನಿಯರೊಂದಿಗೆ ಸಂವಾದ: ಕುತೂಹಲ ಮೂಡಿಸಿದ ವಿದ್ಯಾರ್ಥಿನಿಯರ ಪ್ರಶ್ನೆಗಳು



ಮೈಸೂರಿನ ಶಕ್ತಿಧಾಮ ಟ್ರಸ್ಟ್ ಹಾಗೂ ಶಕ್ತಿಧಾಮ ವಿದ್ಯಾಶಾಲೆಯಲ್ಲಿ ಆಯೋಜಿಸಿದ್ದ ಸಮಾಲೋಚನಾ ಸಮಾರಂಭದಲ್ಲಿ ವಿದ್ಯಾರ್ಥಿನಿಯರೊಂದಿಗೆ ಶಾಲಾ ಶಿಕ್ಷಣ ಸಚಿವ ಎಸ್.ಮಧುಬಂಗಾರಪ್ಪ ಸಂವಾದ ನಡೆಸಿದರು. ನಟ ಶಿವರಾಜ್‌ಕುಮಾರ್, ಶಕ್ತಿಧಾಮ ವಿದ್ಯಾಶಾಲೆ ಗೌರವಾಧ್ಯಕ್ಷೆ ಶ್ರೀಮತಿ ಗೀತಾ ಶಿವರಾಜ್‌ಕುಮಾರ್, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ್, ಶಕ್ತಿಧಾಮ ಟ್ರಸ್ಟಿ ಸದಾನಂದ, ಶಕ್ತಿಧಾಮ ವಿದ್ಯಾಶಾಲೆ ನಿರ್ದೇಶಕಿ ಮಂಜುಳಾ ಉಪಸ್ಥಿತರಿದ್ದರು



ಫೆ.27ಕ್ಕೆ 'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಯೋಜನೆಗೆ ಚಾಲನೆ...

ಕಲಿತು ಉನ್ನತ ಸ್ಥಾನಕ್ಕೆ ಹೋದ ಬಳಿಕ ನೀವು ಓದಿದ ಶಾಲೆ ನಿಮ್ಮ ಕೊಡುಗೆಗಾಗಿ ಕಾಯುತ್ತಿರುತ್ತದೆ. ಈ ನಿಟ್ಟಿನಲ್ಲಿ 'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಎಂಬ ವಿಶೇಷ ಯೋಜನೆಯನ್ನು ಜಾರಿಗೆ ತಂದಿದ್ದು, ಫೆ.27 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿಗಳು ತಮ್ಮ ಸಂಬಳದಲ್ಲಿನ 10 ಲಕ್ಷ ರೂ.ಗಳನ್ನು ತಾವು ಓದಿದ ಶಾಲೆಗೆ ನೀಡಲಿದ್ದಾರೆ. ನಾನು ಸಹ ನಮ್ಮ ತಂದೆ ಓದಿದ ಸರ್ಕಾರಿ ಶಾಲೆ ಅಭಿವೃದ್ಧಿಗೆ ಸಹಕಾರ ನೀಡುತ್ತೇನೆ. ಇದರಿಂದ ಸರ್ಕಾರಿ ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್‌ಗಳನ್ನು ನಡೆಸಲು, ಕಂಪ್ಯೂಟರ್‌ಗಳನ್ನು ಪೂರೈಸಲು ಅನುಕೂಲವಾಗುತ್ತದೆ.

– ಎಸ್.ಮಧುಬಂಗಾರಪ್ಪ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಮೈಸೂರು, ಫೆ.17(ಎಂಕೆ)– ಫೇಲ್ ಎಂಬುದು ಕೊನೆಯಲ್ಲ ಅದು ಸಾಧನೆಯ ಮೆಟ್ಟಿಲು. ಪ್ರಯತ್ನವೇ ಆಸ್ತಿಯಾಗಿದ್ದು, ಸತತವಾಗಿ ಪ್ರಯತ್ನಪಟ್ಟರಷ್ಟೇ ಸಾಧನೆ ಸಾಧ್ಯ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶಕ್ತಿಧಾಮ ಟ್ರಸ್ಟ್ ಹಾಗೂ ಶಕ್ತಿಧಾಮ ವಿದ್ಯಾಶಾಲೆಯಲ್ಲಿ ಆಯೋಜಿಸಿದ್ದ ಸಮಾಲೋಚನಾ ಸಮಾರಂಭದಲ್ಲಿ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದ ಅವರು, ಫೇಲ್ ಆದ ಕೂಡಲೇ ಅಲ್ಲವೂ ಮುಗಿತು ಮುಂದೇನೂ ಇಲ್ಲ ಎಂದುಕೊಂಡರೆ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಲು ಹಾಗೂ ಗುರಿಯನ್ನು ತಲುಪಲು ಸಾಧ್ಯವಿಲ್ಲ. ಸತತ ಪರಿಶ್ರಮಪಟ್ಟರಷ್ಟೇ ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯ ಎಂದರು.

ಹಿಂದಿನ ಮತ್ತು ಇವತ್ತಿನ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಯಾಗಿದೆಯೇ ಎಂಬ 9ನೇ ತರಗತಿ ವಿದ್ಯಾರ್ಥಿನಿ ಸಿದ್ದಮ್ಮ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಹಿಂದೆ ಸಾಕಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದರು. ಆದರೆ ಇಂದು ಹಲವು ಸುಧಾರಣೆಗಳ ಮೂಲಕ ಪ್ರತಿಯೊಬ್ಬರು ಕಡ್ಡಾಯವಾಗಿ ಶಿಕ್ಷಣ ಪಡೆಯುವಂತಾಗಿದೆ. ಆರೋಗ್ಯದ ಜೊತೆಗೆ ಶಿಕ್ಷಣ ಎಂಬಂತೆ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪೌಷ್ಟಿಕ ಆಹಾರ, ಹಾಲು, ಮೊಟ್ಟೆ ನೀಡಲಾಗುತ್ತಿದೆ. ಕೆಎಂಎಫ್‌ನಿಂದ ವಾರದಲ್ಲಿ 5 ದಿನ ಹಾಲು ಪೂರೈಕೆಯಾಗುತ್ತಿದೆ. ಮಕ್ಕಳ ಭವಿಷ್ಯಕ್ಕೆ ಅನುಕೂಲವಾಗುವಂತೆ ಶಿಕ್ಷಣ ವ್ಯವಸ್ಥೆ ಬದಲಾಗಿದೆ ಎಂದು ವಿವರಿಸಿದರು.

ಇಂದಿಗೂ ಸಾಕಷ್ಟು ಕಡೆಗಳಲ್ಲಿ ನೆಲದ ಮೇಲೆ ಕುಳಿತು ಕಲಿಯುವ ವ್ಯವಸ್ಥೆ ಇದೆ. ಅದಕ್ಕಾಗಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿಯೂ ಸಮಾನತೆ ತರುವ ಉದ್ದೇಶದಿಂದ ಎಲ್ಲಾ ಮಕ್ಕಳು ಟೇಬಲ್ ಮೇಲೆಯೇ ಕುಳಿತು ಅಭ್ಯಾಸ ಮಾಡುವಂತೆ ಕಾರ್ಯಕ್ರಮ ರೂಪಿಸಲಾಗಿದೆ. ದೇಶದ ಹಾಗೂ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಗತ್ಯವಿರುವ ಶಿಕ್ಷಣ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ರೂಪಿಸಿದ್ದು, ಈ ವರ್ಷದ ಬಜೆಟ್‌ನಲ್ಲಿ 44,400 ಕೋಟಿ ರೂ. ಅನುದಾನವನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡಲಾಗಿದೆ ಎಂದರು.

ಪರೀಕ್ಷೆಗೆ ಭಯಪಡುವ ಅಗತ್ಯವಿಲ್ಲ: ಪರೀಕ್ಷೆಗಳು ಹೆಚ್ಚಾಗುತ್ತಿವೆ ಎಂಬ 10ನೇ ತರಗತಿ ವಿದ್ಯಾರ್ಥಿ ಸ್ವಾತಿ ಪ್ರಶ್ನೆಗೆ, ಪರೀಕ್ಷೆಗಳು ಕಲಿಕಾ ದೃಷ್ಟಿಯಿಂದ ಇರುವುದು ಸಹಜವೇ. ಆದರೆ ಪರೀಕ್ಷೆ ಇದೆ ಎಂಬ ಕಾರಣಕ್ಕೆ ಭಯಪಡುವ ಅಗತ್ಯವಿಲ್ಲ. ಪರೀಕ್ಷೆಗೆ ಪೂರ್ವ ತಯಾರಿ ನಡೆಸಬೇಕೇ ಹೊರತು ಭಯಪಡಬಾರದು. ಫೇಲ್ ಆದರೂ ಮತ್ತೆ ಅದೇ ವರ್ಷ ಸಪ್ಲಿಮೆಂಟರಿ ಪರೀಕ್ಷೆ ಬರೆಯಲು ಅವಕಾಶ ಇದೆ. ಫೇಲ್ ಆದರೆ ಸೋತೆ, ಅದೇ ಕಡೆ ಎಂಬ ಮನಸ್ಥಿತಿಯಿಂದ ಹೊರಬಂದು ಇರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಅಲ್ಲದೆ ಎಲ್ಲಾ ಮಕ್ಕಳೂ ಕೂಡ ಪಾಸ್ ಆಗಬೇಕು ಎಂಬುದೇ ಸರ್ಕಾರ ಉದ್ದೇಶ. ಶ್ರದ್ಧೆಯಿಂದ ಓದಿ. ಎಕ್ಸಾಂ ಟೆನ್ಷನ್ ಬಿಟ್ಟುಬಿಡಿ ಎಂದು ಕಿವಿಮಾತು ಹೇಳಿದರು.

ಕೌಶಲ್ಯಾಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡಿ: ಶಾಲಾ ಹಂತದಲ್ಲಿಯೇ ಸೈಬರ್ ಸೆಕ್ಯೂರಿಟಿ, ಮಾಹಿತಿ ತಂತ್ರಜ್ಞಾನ ಸೇರಿದಂತೆ ಕೌಶಲ್ಯಾಧಾರಿತ ಶಿಕ್ಷಣ ಜಾರಿಗೆ ತನ್ನಿ ಎಂಬ 8ನೇ ತರಗತಿ ಕೃತಿಕಾ ಪ್ರಶ್ನೆಗೆ, ಶಾಲಾ ಹಂತದಲ್ಲಿ ಪಠ್ಯಪುಸ್ತಕದಲ್ಲಿರುವುದನ್ನು ಕಲಿಯುವುದು ಅವಶ್ಯವಿದೆ. 10ನೇ ತರಗತಿ ಅಥವಾ ಪಿಯುಸಿ ನಂತರ ಕೌಶಲ್ಯಾಧಾರಿತ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಪಡೆಯಲು ಸಾಕಷ್ಟು ಅವಕಾಶಗಳಿವೆ. ಶಾಲಾ ಹಂತದಲ್ಲಿ ಪಠ್ಯದ ಜೊತೆಗೆ ಕೌಶಲ್ಯಾಧಾರಿತ ಪಠ್ಯೇತರ ಚಟುವಟಿಕೆಗಳಿಗೂ ಅವಕಾಶ ನೀಡಲಾಗಿದೆ. ಮೊದಲಿಗಿಂತ ಇಂದು ಮಾಹಿತಿ ತಂತ್ರಜ್ಞಾನ ಕ್ಷೇತ್ರ ಸಾಕಷ್ಟು ಮುಂದಿದೆ. ಮೊಬೈಲ್‌ನಲ್ಲಿಯೇ ಬಹುತೇಕ ಮಾಹಿತಿಗಳು ದೊರೆಯಲಿದ್ದು, ಈಗಿನ ಮಕ್ಕಳು ಹಿಂದಿನವರಿಗಿಂತ ಬಹಳ ವೇಗವಾಗಿದ್ದಾರೆ ಎಂದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಶಕ್ತಿಧಾಮ ವಿದ್ಯಾಶಾಲೆ ಗೌರವಾಧ್ಯಕ್ಷೆ ಶ್ರೀಮತಿ ಗೀತಾ ಶಿವರಾಜ್‌ಕುಮಾರ್, ಶಕ್ತಿಧಾಮ ವಿದ್ಯಾಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಕಲಿಕಾ ಚಟುವಟಿಕೆಗಳ ಬಗ್ಗೆ ಹಾಗೂ ಶಾಲೆಯ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿದರು. ನಟ ಶಿವರಾಜ್‌ಕುಮಾರ್, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ್, ಶಕ್ತಿಧಾಮ ವಿದ್ಯಾಶಾಲೆ ನಿರ್ದೇಶಕಿ ಮುಂಜುಳಾ, ಶಕ್ತಿಧಾಮ ಟ್ರಸ್ಟಿ ಸದಾನಂದ ಮತ್ತಿತರರು ಉಪಸ್ಥಿತರಿದ್ದರು.

ಮಲ್ಲಕಂಬ ಸಾಹಸ...!

ಇದೇ ವೇಳೆ ವಿದ್ಯಾರ್ಥಿನಿಯರಾದ ಅಂಕಿತಾ, ದುರ್ಗಮ್ಮ, ಜ್ಞಾನಮ್ಮ, ರೇಖಾ ಇನ್ನಿತರ ತಂಡ ಮಲ್ಲಕಂಬ ಸಾಹಸ ಪ್ರದರ್ಶಿಸಿದರು. ಹಗ್ಗದ ಮೇಲೆ ಯೋಗಾಸನದ ವಿವಿಧ ಭಂಗಿಗಳನ್ನು ಪ್ರದರ್ಶಿಸುವ ಮೂಲಕ ಚಪ್ಪಾಳೆ ಗಿಟ್ಟಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸಂವಿಧಾನ ಪೀಠಿಕೆ ಹಾಡನ್ನು ಹಾಡಿದ ಶಕ್ತಿಧಾಮ ವಿದ್ಯಾಶಾಲೆ ವಿದ್ಯಾರ್ಥಿನಿಯರು ಸಂವಿಧಾನವೇ ನಮ್ಮ ಧರ್ಮವೆಂದು ಸಾರಿದರು.

ಪ್ರೊ.ಜಿ.ಹೆಚ್.ನಾಯಕ್‌ರಿಗೆ ನುಡಿನಮನ, ಸ್ಮರಣೆ



ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ದಿವಂಗತ ಜಿ.ಹೆಚ್.ನಾಯಕ್‌ರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಬೆಂಗಳೂರು ಉತ್ತರ ವಿವಿ ಕುಲಪತಿ ಡಾ. ನಿರಂಜನ ವಾನಳ್ಳಿ ಮತ್ತಿತರರಿದ್ದರು.

ಮೈಸೂರು, ಫೆ.17(ಎಂಕೆ)– ನೇರ–ನಿಷ್ಠುರ ಮನೋಭಾವದ ಪ್ರೊ.ಜಿ.ಹೆಚ್. ನಾಯಕ್ ಅವರದ್ದು, ಅನನ್ಯ ವ್ಯಕ್ತಿತ್ವ. ಅವರ ವ್ಯಕ್ತಿತ್ವದ ಭಾಗವೇ ಹೃದಯವಂತಿಕೆ ಎಂದು ಬೆಂಗಳೂರು ಉತ್ತರ ವಿವಿ ಕುಲಪತಿ ಡಾ. ನಿರಂಜನ ವಾನಳ್ಳಿ ಸ್ಮರಿಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ದಿವಂಗತ ಜಿ.ಹೆಚ್. ನಾಯಕ್ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಯಸಿದಂತೆ ಬದುಕಿದ ಆದರ್ಶ ವ್ಯಕ್ತಿಯಾಗಿ ಮಾದರಿಯಾಗಿ ಉಳಿಯುವ ಜಿ.ಹೆಚ್. ನಾಯಕ್‌ರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಮೈಸೂರಿಗೆ ವಿದ್ಯಾರ್ಥಿಯಾಗಿ ಬಂದ ನಂತರ ಅವರ ನನಗೆ ಪರಿಚಯವಾದ ಅವರು, ಸ್ಥಳೀಯ ಗಾಂಧಿ. ಜಿ.ಹೆಚ್. ನಾಯಕ್‌ರಿಗೆ ಮೈಸೂರು ವಿವಿಯಿಂದ ಗೌರವ ಡಾಕ್ಟರೇಟ್ ಕೊಡಿಸಬೇಕು ಎಂದು ಸಾಕಷ್ಟು ಪ್ರಯತ್ನಗಳನ್ನು ವೈಯಕ್ತಿಕವಾಗಿ ಮಾಡಿದರು ಸಾಧ್ಯವಾಗಲಿಲ್ಲ. ಆದರೆ, ಡಾಕ್ಟರೇಟ್ ಗೌರವಕ್ಕಿಂತಲೂ ಎತ್ತರ ಸ್ಥಾನಕ್ಕೆ ಅವರು ಬೆಳೆದರು. ರಾಷ್ಟ್ರೀಯ ಹಬ್ಬಗಳನ್ನು ಅವರ ಮನೆಯಲ್ಲೇ ಆಚರಣೆ ಮಾಡಲಾಗುತ್ತಿತ್ತು. ಎಂದಿಗೂ ಯಾರೊಂದಿಗೂ ಒಪ್ಪಂದ ಮಾಡಿಕೊಳ್ಳದೆ ನೇರ–ನಿಷ್ಠುರವಾಗಿ ಬದುಕಿದ ಅವರು, ಎಂದಿಗೂ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಂಡವರಲ್ಲ. ಕನ್ನಡ ಸಾಹಿತ್ಯ ಸಮೀಕ್ಷೆಯ ಸಂಪಾದಕರಾಗಿದ್ದ ಅವರು, ಸಮಯಕ್ಕೆ ಮತ್ತು ಓದಿಗೆ ಬಹಳ ಮಹತ್ವ ಕೊಡುತ್ತಿದ್ದರು ಎಂದು ಸ್ಮರಿಸಿದರು.

ಬಳಿಕ ಮಹಾಜನ ಕಾಲೇಜು ವಿಶ್ರಾಂತ ಪ್ರಾಂಶುಪಾಲ ಡಾ. ತಿಮ್ಮೇಗೌಡ ಮಾತನಾಡಿದರು. ಇದಕ್ಕೂ ಮುನ್ನ ದಿವಂಗತ ಜಿ.ಹೆಚ್. ನಾಯಕ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಗೌರ ಸೂಚಿಸಲಾಯಿತು. ಸಂಘದ ಕಾರ್ಯದರ್ಶಿ ತೇಜಸ್ವಿ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

3ನೇ ಟೆಸ್ಟ್: ಭಾರತಕ್ಕೆ 322 ರನ್ ಮುನ್ನಡೆ

ಇಂಗ್ಲೆಂಡ್ 319ಕ್ಕೆ ಆಲೌಟ್, ಯಶಸ್ವಿ ಜೈಸ್ವಾಲ್ ಭರ್ಜರಿ ಶತಕ

ರಾಜ್‌ಕೋಟ್, ಫೆ.17– ಯಶಸ್ವಿ ಜೈಸ್ವಾಲ್ ಅವರ ಭರ್ಜರಿ ಶತಕದ ನೆರವಿನಿಂದ ಭಾರತ, ಇಂಗ್ಲೆಂಡ್ ವಿರುದ್ಧದ 3ನೇ ಟೆಸ್ಟ್ ಪಂದ್ಯದಲ್ಲಿ ಮೂರನೇ ದಿನದಾಟದಂತ್ಯಕ್ಕೆ ದ್ವಿತೀಯ ಇನ್ನಿಂಗ್ಸ್‌ನಲ್ಲಿ 2 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿದೆ. ಆ ಮೂಲಕ 322 ರನ್‌ಗಳ ಮುನ್ನಡೆ ಸಾಧಿಸಿದೆ.

126 ರನ್‌ಗಳ ಮುನ್ನಡೆಯೊಂದಿಗೆ ದ್ವಿತೀಯ ಇನ್ನಿಂಗ್ಸ್ ಆರಂಭಿಸಿದ ಭಾರತದ ಪರ ರೋಹಿತ್ ಶರ್ಮಾ 19 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ನಂತರ ಜೊತೆಯಾದ ಯಶಸ್ವಿ ಜೈಸ್ವಾಲ್ ಹಾಗೂ ಶುಭ್‌ಮನ್ ಗಿಲ್ 2ನೇ ವಿಕೆಟ್‌ಗೆ 161 ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಆಸರೆಯಾದರು. ಇಂಗ್ಲೆಂಡ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಜೈಸ್ವಾಲ್ 122 ಎಸೆತಗಳಲ್ಲಿ ಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 133 ಎಸೆತಗಳಲ್ಲಿ 5 ಸಿಕ್ಸರ್, 9 ಬೌಂಡರಿ ಒಳಗೊಂಡ 104 ರನ್ ಗಳಿಸಿದ್ದ ವೇಳೆ ಬೆನ್ನುನೋವಿನ ಸಮಸ್ಯೆಯಿಂದ ರಿಟೈರ್ಡ್ ಹರ್ಟ್ ಆಗಿ ಹೊರ ನಡೆದರು. ಮತ್ತೊಂದೆಡೆ ಜೈಸ್ವಾಲ್‌ಗೆ ಉತ್ತಮ ಸಾಥ್ ನೀಡಿದ ಗಿಲ್ 6 ಬೌಂಡರಿ, 2ಸಿಕ್ಸರ್ ಒಳಗೊಂಡ 65 ರನ್ ಗಳಿಸಿ ನಾಲ್ಕನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಉಳಿದಂತೆ ರಜತ್ ಪಾಟಿದಾರ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರೇ, ಕುಲದೀಪ್ ಯಾದವ್ 3 ರನ್ ಗಳಿಸಿ ಅಜೇಯರಾಗಿ ಉಳಿದಿದ್ದಾರೆ. ಇಂಗ್ಲೆಂಡ್ ಪರ ಜೋ ರೂಟ್, ಟಾಮ್ ಹಾರ್ಟ್ಲೆ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ 2 ವಿಕೆಟ್ ನಷ್ಟಕ್ಕೆ 207 ರನ್‌ನಿಂದ 3ನೇ ದಿನದಾಟ ಆರಂಭಿಸಿದ ಇಂಗ್ಲೆಂಡ್ 319ರನ್‌ಗಳಿಗೆ ಆಲೌಟಾಯಿತು. ಇಂಗ್ಲೆಂಡ್ ಪರ ಬೆನ್ ಡಕೆಟ್ 153, ಓಲಿ ಪೋಪ್ 39, ಜೋ ರೂಟ್ 18, ಬೆನ್ ಸ್ಟೋಕ್ಸ್ 41, ಬೆನ್ ಫೋಕ್ಸ್ 13 ರನ್ ಗಳಿಸಿದರು. ಭಾರತದ ಪರ ಮೊಹಮ್ಮದ್ ಸಿರಾಜ್ 4, ಕುಲದೀಪ್ ಯಾದವ್, ರವೀಂದ್ರ ಜಡೇಜಾ ತಲಾ 2, ಬೂಮ್ರಾ ಹಾಗೂ ಅಶ್ವಿನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಗಾನಸುಧೆಯಲ್ಲಿ ದಾಸ ಸಾಹಿತ್ಯ ಹರಿಸಿದ ವಿದ್ವಾನ್ ಅನಂತ ಕುಲಕರ್ಣಿ: ಮಂತ್ರಮುಗ್ಧರಾದ ಶ್ರೋತೃ ವರ್ಗ

ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಜಂಟಿ ಆಶ್ರಯದಲ್ಲಿ 'ದಾಸಸೌರಭ' ಸಂಗೀತ ಕಾರ್ಯಕ್ರಮ





ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಬಿವಿಬಿ ಮೈಸೂರು ಕೇಂದ್ರದ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ದಾಸಸೌರಭ' ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಅನಂತ ಕುಲಕರ್ಣಿ ಗಾಯನ ಸಾದರಪಡಿಸಿದರು. ಮತ್ತೊಂದು ಚಿತ್ರದಲ್ಲಿ ಬಿವಿಬಿ ಮೈಸೂರು ಕೇಂದ್ರದ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ ಸೇರಿದಂತೆ ಸಭಿಕರನ್ನು ಕಾಣಬಹುದು.

ಮೈಸೂರು, ಫೆ.17(ಪಿಎಂ)– ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸುವಲ್ಲಿ ಮಹತ್ವದ ಕೊಡುಗೆ ನೀಡಿರುವ ದಾಸ ಸಾಹಿತ್ಯದ ಭಕ್ತಿಗೀತೆಗಳನ್ನು ತಮ್ಮ ಕಂಚಿನ ಕಂಠದಲ್ಲಿ ವಿದ್ವಾನ್ ಅನಂತ ಕುಲಕರ್ಣಿ ಸಾದರಪಡಿಸಿ, ಶ್ರೋತೃಗಳನ್ನು ಮಂತ್ರಮುಗ್ಧಗೊಳಿಸಿ, ಭಕ್ತಿಭಾವ ಮೂಡಿಸಿದರು. ಎರಡು ತಾಸಿಗೂ ಅಧಿಕ ಕಾಲ ದಣಿವರಿಯದೇ ಹಾಡಿದ ಅವರು ತಮ್ಮ ಗಾನ ಮೋಡಿಯಲ್ಲಿ ಶ್ರೋತೃಗಳು ಮೈ ಮರೆಯುವಂತೆ ಮಾಡಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಜಂಟಿ ಆಶ್ರಯದಲ್ಲಿ 'ದಾಸಸೌರಭ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ 124ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ತಮ್ಮ ಗಾನ ಮಾಧುರ್ಯದ ಮೂಲಕ ಸಭಿಕರು ಭಕ್ತಿ ಸುಧೆಯಲ್ಲಿ ತೇಲುವಂತೆ ಮಾಡಿದರು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಶೈಲಿಯಲ್ಲಿ ಗಾಯನ ಪ್ರಸ್ತುತಪಡಿಸಿದ ಅನಂತ ಕುಲಕರ್ಣಿಯವರು, ಗಾನದ ಅಲೆಯಲ್ಲಿ ಶ್ರೋತೃಗಳು ಸಂಭ್ರಮಿಸುವಂತೆ ಮಾಡಿದರು. ವಿಜಯದಾಸರ ರಚನೆಯ 'ಬೇಸರದೆ ಭಜಿಸಿರೋ ಪುರಂದರ ದಾಸರಾಯರ...' ಗೀತೆಯನ್ನು ಹಾಡುವ ಮೂಲಕ ಸದರಿ ಗೀತೆಯಲ್ಲಿರುವ ಪುರಂದರದಾಸರ ದಾಸಪೂರ್ವ ಹಿನ್ನೆಲೆಯನ್ನು ಕಣ್ಮುಂದೆ ತಂದರು. ಆಗರ್ಭ ಶ್ರೀಮಂತರು ಹಾಗೂ ಜಿಪುಣತನವನ್ನೂ ಹೊಂದಿದ್ದ ಪುರಂದರದಾಸರು ದಾಸಶ್ರೇಷ್ಠರಾದ ಚಿತ್ರಣವನ್ನು ಈ ಹಾಡಿನ ಸಾಹಿತ್ಯದಲ್ಲಿ ವಿಜಯದಾಸರು ಕಟ್ಟಿಕೊಟ್ಟಿದ್ದು, ಜೋಗಿಯಾ ರಾಗ ಮತ್ತು ದೀಪಚಂದಿ ತಾಳದಲ್ಲಿ ಈ ಗೀತೆಯನ್ನು ಸಾದರಪಡಿಸಿ, ಪುರಂದರದಾಸರ ಜೀವನದ ಮಹತ್ವದ ಘಟ್ಟವನ್ನು ಅನಾವರಣಗೊಳಿಸಿದರು.

ಬಳಿಕ ಶ್ಯಾಮಸುಂದರದಾಸರ ರಚನೆಯ 'ಇಂಥ ಗುರುಗಳ ಕಾಣೆನಾ ಭೂತಳದೊಳು...' ಗೀತೆಯನ್ನು ಭೂಪಾಲಿ ತೋಡಿ ರಾಗ ಮತ್ತು ಚಿಂತಾಲ್ ಭಜನ್ ತಾಳದಲ್ಲಿ ಪ್ರಸ್ತುತಪಡಿಸಿ, ಇಂಪಾದ ಕಂಪು ಮೂಡಿಸಿದರು. ಶ್ರೀವಿಠಲದಾಸರ ರಚನೆಯ 'ಶಿವನೇ ನಾ ನಿನ್ನ ಸೇವಕನಯ್ಯ... ಕುರುಣದಿ ಪಿಡಿ ಕೈಯ್ಯಾ ಶಿರಿಧರನರಮಯ್ಯ...' ಗೀತೆಯನ್ನು ಮಾಲ್‌ಕೌನ್ಸ್ ರಾಗ ಮತ್ತು ಕೇಹರ್ವ ತಾಳದಲ್ಲಿ ಸಾದರಪಡಿಸಿ, ಸಭಿಕರಲ್ಲಿ ಭಕ್ತಿಯ ಪರಾಕಾಷ್ಠೆ ಮೂಡಿಸಿದರು.

ಭೈರಾಗಿ ಭೈರವ ರಾಗ ಮತ್ತು ಚಿಂತಾಲ್ ಭಜನ್ ತಾಳದಲ್ಲಿ ವಿಜಯದಾಸರ ರಚನೆಯ 'ಶಂಭೋ ಸ್ವಯಂಭು ಸಂಭವ ನಂಬಿದೆ ಕಾಯೋ...' ಗೀತೆಯನ್ನು ಹಾಡಿ, ಶಿವನ ಆರಾಧನೆಯಲ್ಲಿ ಸಭಿಕರಲ್ಲಿ ಮೈ ಮರೆಯುವಂತೆ ಮಾಡಿದರು. ಶಿವನಿಗೆ ಭಕ್ತರು ಭಕ್ತಿ ಸಮರ್ಪಿಸುವ ಸಾಹಿತ್ಯ ಹೊಂದಿರುವ ವಿಜಯದಾಸರ ರಚನೆಯ 'ಲಿಂಗ ಎನ್ನಂತರಂಗ ಮಂಗಳಾಂತ ಸರ್ವೋತ್ತುಂಗ...' ಗೀತೆಯನ್ನು ಜೋಗ್ ರಾಗ ಮತ್ತು ದೀಪಚಂದಿ ತಾಳದಲ್ಲಿ ಸಾದರಪಡಿಸಿ ಭಕ್ತಿಯ ಸಿಂಚನ ಮೂಡಿಸಿದರು.

ಶ್ರೀಪಾದರಾಜರ ರಚನೆಯ 'ನಲಿದಾಡೆ ಎನ್ನ ನಾಲಿಗೆ ಮೇಲೆ, ಸರಸ್ವತಿ ದೇವಿ ಕುಣಿದಾಡೆ ಎನ್ನ ನಾಲಿಗೆ ಮೇಲೆ...', ವಿಜಯದಾಸರ ರಚನೆಯ 'ಪವಮಾನ ಜಗದ ಪ್ರಾಣ...' ಗೀತೆಗಳು ಸೇರಿದಂತೆ ಇನ್ನೂ ಅನೇಕ ಹಾಡುಗಳ ಸಾದರಪಡಿಸಿದ ವಿದ್ವಾನ್ ಅನಂತ ಕುಲಕರ್ಣಿ, ಸಭಿಕರಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು. ಪಕ್ಕವಾದ್ಯದಲ್ಲಿ ವಿಷ್ಣು ಜೋಷಿ (ತಬಲ), ಅಶ್ವಿನ್ ವಾಲವಾಲ್‌ಕರ್ (ಹಾರ್ಮೋನಿಯಂ) ಮತ್ತು ಸುಧನ್ವ ಕಮಲಾಪುರ್ (ತಾಳ) ಸಹಕಾರ ನೀಡಿದರು.

ಬಿವಿಬಿ ಮೈಸೂರು ಕೇಂದ್ರದ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯೆ ಡಾ.ತುಳಸಿ ರಾಮಚಂದ್ರ ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್, ಸಂಗೀತ ಶಿಕ್ಷಕಿ ಸುಮ ಹರಿನಾಥ್ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಭಾನುವಾರ 18 ಫೆಬ್ರವರಿ 2024

ಶ್ರೀರಂಗಪಟ್ಟಣದಲ್ಲಿ ದರ್ಶನ್ ಬೆಳ್ಳಿಹಬ್ಬದ ವೈಭವ

ತಾರೆಯರ ಸಮಾಗಮ, ಸುಂದರಿಯರ ಭರ್ಜರಿ ಸ್ಟೆಪ್ಸ್, ಸಾವಿರಾರು ಅಭಿಮಾನಿಗಳು ಭಾಗಿ



ಹುಟ್ಟುಹಬ್ಬ ಮತ್ತು ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರನ್ನು ಸುತ್ತೂರು ಶ್ರೀಗಳು ಮತ್ತು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮಿಗಳು ಅಭಿನಂದಿಸಿದರು.

ಶ್ರೀರಂಗಪಟ್ಟಣ, ಫೆ.17– ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರ ಹುಟ್ಟುಹಬ್ಬ ಮತ್ತು ಚಿತ್ರರಂಗ ಪ್ರವೇಶಿಸಿದ ಬೆಳ್ಳಿಹಬ್ಬವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು.

ಪಟ್ಟಣದ ಶ್ರೀರಂಗನಾಥಸ್ವಾಮಿ ದೇಗುಲದ ಆವರಣದಲ್ಲಿ ನಿರ್ಮಿಸಲಾಗಿದ್ದ ಭವ್ಯ ವೇದಿಕೆಯಲ್ಲಿ ಚಲನ ಚಿತ್ರ ನಟ–ನಟಿಯರು, ಸಹ–ಕಲಾವಿದರು ಅದ್ದೂರಿಯಾಗಿ ಸ್ಟೆಪ್ ಹಾಕುವ ಮೂಲಕ ನೆರೆದಿದ್ದ ಸಾವಿರಾರು ಸಂಖ್ಯೆಯ ಅಭಿಮಾನಿಗಳಿಗೆ ರಸದೌತಣ ನೀಡಿದರು. ತಮ್ಮ ನೆಚ್ಚಿನ ನಟನನ್ನು ಕಾಣಲು ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಸಾವಿರಾರು ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಡಿ–ಬಾಸ್ ದರ್ಶನ್‌ಗೆ ಜಯವಾಗಲಿ ಎಂಬ ಘೋಷಣೆಗಳು ಮುಗಿಲು ಮುಟ್ಟಿದರೆ, ಗಣ್ಯಾತಿಗಣ್ಯರು ದರ್ಶನ್ ಅವರ ಸಾಧನೆಯನ್ನು ಕೊಂಡಾಡಿದರು. ದರ್ಶನ್ ವೇದಿಕೆಗೆ ಬರುತ್ತಿದ್ದಂತೆ ಭಾರೀ ಚಪ್ಪಾಳೆ, ಶಿಳ್ಳೆಗಳೊಂದಿಗೆ ಹರ್ಷೋದ್ಗಾರ ಮೊಳಗಿತು.

ನಟರಾದ ವಿನೋದ್ ರಾಜ್, ಚಿಕ್ಕಣ್ಣ, ಶರಣ್, ನೆನಪಿರಲಿ ಪ್ರೇಮ್, ಅಭಿಷೇಕ ಅಂಬರೀಶ್, ವಿನೋದ್ ಪ್ರಭಾಕರ್, ನೀನಾಸಂ ಸತೀಶ್, ಪ್ರಜ್ವಲ್ ದೇವರಾಜ್, ಧನ್ವೀರ್, ಯಶಸ್ ಸೂರ್ಯ, ಶಿವರಾಜ್ ಕೆಆರ್.ಪೇಟೆ, ನಿರ್ದೇಶಕ ತರುಣ್ ಸುಧೀರ್ ಸೇರಿದಂತೆ ನಟ–ನಟಿಯರ ದಂಡೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ತಾರಾ ರಂಗು ತುಂಬಿದರು. ಕಾರ್ಯಕ್ರಮದಲ್ಲಿ ದರ್ಶನ್ ನಟನೆಯ ದಾಸ, ಐರಾವತ, ಗಜ ಸಿನಿಮಾದ ಗೀತೆಗಳಿಗೆ ನೃತ್ಯ ಮಾಡಿ ಜನರನ್ನು ರಂಜಿಸಿದರು. ಸಾರಥಿ ಸಿನಿಮಾ ಹಾಡಿನ ಮೂಲಕ ವಾಣಿ ಹರಿಕೃಷ್ಣ ಮೋಡಿ ಮಾಡಿದರು. ಹಿನ್ನೆಲೆ ಗಾಯಕ–ಗಾಯಕಿಯರ ಹಾಡುಗಳಿಗೆ ಡಿ ಬಾಸ್ ಫ್ಯಾನ್ಸ್ ತಲೆದೂಗಿದರು.

ಕಾರ್ಯಕ್ರಮದಲ್ಲಿ ಸುತ್ತೂರು ದೇಶಿಕೇಂದ್ರ ಶ್ರೀಗಳು ಮಾತನಾಡಿ, ನಟ ದರ್ಶನ್ ಅವರು ಕನ್ನಡದ ಮೇರು ಕಲಾವಿದ ಅವರು ಮೈಸೂರಿನಲ್ಲಿ ಹುಟ್ಟಿ ಬೆಳೆದಿರುವುದು ಸಂತೋಷ, ಸಿನಿಮಾ ರಂಗಕ್ಕೆ ಕಾಲಿಟ್ಟು 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ಅವರು ಜನರ ಪ್ರೀತಿ ಗಳಿಸಿದ್ದಾರೆ. ಅವರು ಸುವರ್ಣ ಮಹೋತ್ಸವ ಆಚರಿಸಲಿ. ಇನ್ನು ಹೆಚ್ಚು ಸಿನಿಮಾ ಮಾಡಲಿ. ದೇವರ ಆಶೀರ್ವಾದ ಅವರ ಮೇಲಿರಲಿ ಎಂದು ಆಶೀರ್ವದಿಸಿದರು. ನಂತರ ಮಾತನಾಡಿದ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ಸ್ವಾಮಿ, ಕಲೆಗೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂಬಂಧವಿದೆ. ಜೀವನದಲ್ಲಿ ಕಲೆ ಎಲ್ಲರಿಗೂ ತುಂಬಾ ಮುಖ್ಯವಾಗಿದೆ, ಕಲೆಗೆ ದರ್ಶನ್ ಅವರು ಜೀವವನ್ನೇ ಮುಡಿಪಾಗಿಟ್ಟಿದ್ದಾರೆ ಎಂದರು.

ಇಂದು ಮಳವಳ್ಳಿಗೆ ಸಿಎಂ ಸಿದ್ದರಾಮಯ್ಯ, ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ

ಮಂಡ್ಯ,ಫೆ.17– ಭಾನುವಾರ(ಫೆ.18) ಬೆಳಿಗ್ಗೆ 10 ಗಂಟೆಗೆ ಮಳವಳ್ಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುತ್ತಿದ್ದು, ಪಟ್ಟಣದ



ಶಾಂತಿ ಕಾಲೇಜು ಮುಂಭಾಗ ಏರ್ಪಡಿಸಲಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಹಾಗೂ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಘನ ಉಪಸ್ಥಿತಿ ವಹಿಸಲಿದ್ದು, ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವರಾದ ಎನ್.ಚಲುವರಾಯಸ್ವಾಮಿ, ಮಹದೇವಪ್ಪ ಸೇರಿದಂತೆ ಅನೇಕ ಸಚಿವರು ಹಾಗೂ ಜಿಲ್ಲೆಯ ಶಾಸಕರು, ಸಂಸದರು ಭಾಗವಹಿಸಲಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ವಿಶೇಷಚೇತನ ಅಪ್ರಾಪ್ತೆ ಮೇಲೆ ಅತ್ಯಾಚಾರ: ಆರೋಪಿಗೆ 13 ವರ್ಷ ಶಿಕ್ಷೆ

ಮಂಡ್ಯ: ಅಪ್ರಾಪ್ತ ವಿಶೇಷಚೇತನ ಬಾಲಕಿ ಮೇಲೆ ಅತ್ಯಾಚಾರವೆಸಗಿದ್ದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ 13 ವರ್ಷ ಶಿಕ್ಷೆ ಹಾಗೂ 30 ಸಾವಿರ ರೂ. ದಂಡ ವಿಧಿಸಿ ಮಂಡ್ಯ ಅಧಿಕ ಸತ್ರ ಮತ್ತು ತ್ವರಿತಗತಿ ನ್ಯಾಯಾಲಯದ ವಿಶೇಷ ನ್ಯಾಯಾಧೀಶರಾದ ಕೆ.ಎ.ನಾಗಜ್ಯೋತಿ ತೀರ್ಪು ನೀಡಿದ್ದಾರೆ. ಮಂಡ್ಯದ ಸುಭಾಷ್‌ನಗರ (ನೂರಡಿ ರಸ್ತೆ)ದ ಎಂ.ಎಸ್.ಮಹೇಶ್ ಎಂಬಾತನೇ ಶಿಕ್ಷೆಗೊಳಗಾದ ಆರೋಪಿ.

ಕಳೆದ 2022ರಲ್ಲಿ ಆರೋಪಿ ಮಹೇಶನು 16 ವರ್ಷದ ಅಪ್ರಾಪ್ತ ವಿಶೇಷಚೇತನ ಬಾಲಕಿಯನ್ನು ಪುಸಲಾಯಿಸಿ ತನ್ನ ಕಾರಿನಲ್ಲಿ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದ ಹಿಂಭಾಗದ ರಸ್ತೆಗೆ (ಸೆಸ್ಕ್ ಕಚೇರಿಗೆ ಹೋಗುವ ರಸ್ತೆ) ಕರೆದೊಯ್ದು ಆಕೆಯ ಮೇಲೆ ಅತ್ಯಾಚಾರ ನಡೆಸಿದ್ದ. ಈ ಸಂಬಂಧ ಮಹಿಳಾ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರಕ್ಕೊಳಗಾದ ಅಪ್ರಾಪ್ತೆ ಹಾಗೂ ಪೋಷಕರು ದೂರು ನೀಡಲಾಗಿ, ವಿಚಾರಣೆ ನಡೆಸಿದ ಅಂದಿನ ಇನ್ಸ್‌ಪೆಕ್ಟರ್ ಎಸ್.ಕೆ.ಕೃಷ್ಣ ಅವರು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ಪೋಕ್ಸೋ ಕಾಯ್ದೆಯಡಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದ ಮಂಡ್ಯ ಅಧಿಕ ಸತ್ರ ಮತ್ತು ತ್ವರಿತಗತಿ ನ್ಯಾಯಾಲಯದ ವಿಶೇಷ ನ್ಯಾಯಾಧೀಶರಾದ ಕೆ.ಎ.ನಾಗಜ್ಯೋತಿ ಅವರು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ಮಹೇಶ್‌ಗೆ ಭಾದಂಸಂ ಕಲಂ 354(2ಇ) ಅಡಿಯಲ್ಲಿನ ಅಪರಾಧಕ್ಕೆ ಒಂದು ವರ್ಷ ಶಿಕ್ಷೆ 5 ಸಾವಿರ ರೂ. ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 2 ತಿಂಗಳ ಸಾದಾ ಶಿಕ್ಷೆ ಹಾಗೂ ಭಾದಂಸಂ ಕಲಂ 376(2)(ಐ) ಅಡಿಯಲ್ಲಿನ ಅಪರಾಧಕ್ಕೆ 12 ವರ್ಷಗಳ ಶಿಕ್ಷೆ, 30 ಸಾವಿರ ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 3 ತಿಂಗಳು ಸಾದಾ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಅಭಿಯೋಜನೆಯ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಹೆಬ್ಬಕವಾಡಿ ನಾಗರಾಜು ವಾದ ಮಂಡಿಸಿದ್ದರು.

ನಾಳೆ ಛತ್ರಪತಿ ಶಿವಾಜಿ ಜಯಂತಿ

ಮಂಡ್ಯ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಹಯೋಗದೊಂದಿಗೆ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮವನ್ನು ಗಾಂಧಿ ಭವನದಲ್ಲಿ ಫೆ.19 ರಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕೃಷಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ: ಪಾದಚಾರಿಗೆ ಗಂಭೀರ ಗಾಯ

ಭಾರತೀನಗರ, ಫೆ17– ಅಪರಿಚಿತ ವಾಹನವೊಂದು ಡಿಕ್ಕಿಹೊಡೆದ ಪರಿಣಾಮ ಪಾದಚಾರಿಯೊಬ್ಬರ ಕಾಲು ಮುರಿದು ಗಂಭೀರವಾಗಿ ಗಾಯಗೊಂಡಿರುವ ಘಟನೆ ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಜರುಗಿತು.

ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಕ್ಯಾತಘಟ್ಟದ ಗ್ರಾಮದ ಪಾಪಣ್ಣ(58) ಅವರಿಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಕಾಲು ಮುರಿದು ಗಾಯಗೊಂಡರು. ತಕ್ಷಣ ಸ್ಥಳದಲ್ಲಿದ್ದ ಸಾರ್ವಜನಿಕರು ಆಂಬುಲೆನ್ಸ್ ಕರೆಸಿ ಕೆ.ಎಂ.ದೊಡ್ಡಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆಯ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲುಪಡಿಸಲಾಗಿದೆ. ಕೆ.ಎಂ.ದೊಡ್ಡಿ ಪೊಲೀಸರು ಸ್ಥಳಕ್ಕಾಗಮಿಸಿ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಜಖಂಗೊಂಡಿದ್ದ ವಾಹನಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಪಾಂಡವಪುರದಲ್ಲಿ 'ಭಾರತ್ ಅಕ್ಕಿ'ಗೆ ಮುಗಿಬಿದ್ದು ಖರೀದಿಸಿದ ಸಾರ್ವಜನಿಕರು



ಪಾಂಡವಪುರ ಪಟ್ಟಣದ ಡಾ.ರಾಜ್‌ಕುಮಾರ್ ವೃತ್ತದಲ್ಲಿ ಕೇಂದ್ರ ಸರಕಾರ ವಿತರಿಸುತ್ತಿರುವ ಭಾರತ್ ಅಕ್ಕಿಯನ್ನು ಸಾರ್ವಜನಿಕರು ಹಣಕೊಟ್ಟು ಖರೀದಿ ಮಾಡುತ್ತಿರುವುದು.

ಪಾಂಡವಪುರ: ಕೇಂದ್ರ ಸರಕಾರ ಹಾಗೂ ಪ್ರಧಾನಿ ಮೋದಿ ಅವರ ಮಹತ್ವಾಕಾಂಕ್ಷೆ ಯೋಜನೆಯಾದ 'ಭಾರತ್ ಅಕ್ಕಿ'ಯನ್ನು ಪಡೆಯಲು ಸಾರ್ವಜನಿಕರು ಪಟ್ಟಣದಲ್ಲಿ ಮುಗಿಬಿದ್ದರು.

ಪಟ್ಟಣದ ಡಾ.ರಾಜ್‌ಕುಮಾರ್ ವೃತ್ತಕ್ಕೆ ಆಗಮಿಸಿದ ಭಾರತ್ ಅಕ್ಕಿ ವಾಹನವು ಬಿಜೆಪಿ ಕಾರ್ಯಕರ್ತರ ಸಮ್ಮುಖದಲ್ಲಿ ಸಾರ್ವಜನಿಕರಿಗೆ ಭಾರತ್ ಅಕ್ಕಿ ಚೀಲಗಳನ್ನು ಮಾರಾಟ ಮಾಡಿದರು.

ಒಂದು ಕೆಜಿಗೆ 29 ರೂ. ನಂತೆ 10 ಕೆಜಿ ಅಕ್ಕಿ ಬ್ಯಾಗ್‌ನ್ನು 290 ರೂ.ಗೆ ಮಾರಾಟ ಮಾಡಿದರು. ಭಾರತ್ ಅಕ್ಕಿಯನ್ನು ಪಡೆಯಲು ಸಾರ್ವಜನಿಕರು ಮುಗಿಬಿದ್ದರು. ಸರತಿ ಸಾಲಿನಲ್ಲಿ ಸಾರ್ವಜನಿಕರು ಈ 10 ಕೆಜಿ ಭಾರತ್ ಅಕ್ಕಿ ಚೀಲಕ್ಕೆ 290 ರೂ. ಕೊಟ್ಟು ಖರೀದಿಸಿದರು.

ಸಂದರ್ಭದಲ್ಲಿ ಬಿಜೆಪಿ ಅಧ್ಯಕ್ಷ ಅಶೋಕ್, ಮುಖಂಡರಾದ ಎಚ್.ಎನ್.ಮಂಜುನಾಥ್, ಜಿಲ್ಲಾ ಕಾರ್ಯದರ್ಶಿ ಮಂಗಳ ನವೀನ್, ಧನಂಜಯ್, ಚಿಕ್ಕಮರಳಿ ನವೀನ್, ಶ್ರೀನಿವಾಸ್ ನಾಯ್ಕ, ರಾಜ್‌ಕುಮಾರ್ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ಕೆಎಂ ದೊಡ್ಡಿಯಲ್ಲಿ ಉತ್ಸವ ಮೂರ್ತಿ ಮೆರವಣಿಗೆ



ಭಾರತೀನಗರ: ಕೆ.ಎಂ.ದೊಡ್ಡಿಯ ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ರಥಸಪ್ತಮಿಯ ಅಂಗವಾಗಿ ಉತ್ಸವ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ದೇವಾಲಯದ ಪ್ರಧಾನ ಅರ್ಚಕ ಗೋಪಾಲಕೃಷ್ಣ ಭಟ್ಟರ್ ಹಾಗೂ ಅನಂತಕೃಷ್ಣ ಭಟ್ಟರ್ ಅವರ ನೇತೃತ್ವದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಬೆಳಿಗ್ಗೆ 7 ಗಂಟೆಯಿಂದಲೇ ಪ್ರಾರಂಭಗೊಂಡವು. ಶ್ರೀ ವೆಂಕಟೇಶ್ವರ ಸ್ವಾಮಿ ಮೂರ್ತಿಗೆ ಹೂ ಮತ್ತು ಆಭರಣಗಳಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು.

ಈ ಸಂದರ್ಭದಲ್ಲಿ ವಾದ್ಯಗೋಷ್ಠಿಯೊಂದಿಗೆ ನಡೆದ ಪೂಜಾ ಕಾರ್ಯಕ್ರಮದಲ್ಲಿ ಪ್ರಧಾನ ಅರ್ಚಕ ಗೋಪಾಲಕೃಷ್ಣ ಭಟ್ಟರ್ ಅರುಣಾ ಪಾರಾಯಣ ಮಾಡಿದರು.

ನಂತರ ಉತ್ಸವ ಮೂರ್ತಿಯನ್ನು ಗೋವಿಂದನ ನಾಮಸ್ಮರಣೆಯೊಂದಿಗೆ ದೇವಸ್ಥಾನದ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕಲಾಯಿತು. ಬಂದಂತಹ ಭಕ್ತಾದಿಗಳಿಗೆ ಗೋಧಿ ಪಾಯಸ ವಿತರಣೆ ಮಾಡಲಾಯಿತು.

ಮಾಕವಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ಸಾಕಮ್ಮ ಸಿದ್ದರಾಜು, ಉಪಾಧ್ಯಕ್ಷರಾಗಿ ವರಲಕ್ಷ್ಮಿ ಪ್ರದೀಪ್ ಅವಿರೋಧ ಆಯ್ಕೆ



ಕೆ.ಆರ್.ಪೇಟೆ, ಫೆ.17– ತಾಲೂಕಿನ ಕಸಬಾ ಹೋಬಳಿಯ ಮಾಕವಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸಾಕಮ್ಮ ಸಿದ್ದರಾಜು ಹಾಗೂ ಉಪಾಧ್ಯಕ್ಷರಾಗಿ ವರಲಕ್ಷ್ಮೀ ಪ್ರದೀಪ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸಾಕಮ್ಮ ಸಿದ್ದರಾಜು, ಉಪಾಧ್ಯಕ್ಷ ಸ್ಥಾನಕ್ಕೆ ವರಲಕ್ಷ್ಮೀ ಪ್ರದೀಪ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ಸಹ ನಾಮಪತ್ರ ಸಲ್ಲಿಸದೇ ಇರುವ ಕಾರಣ ಅವಿರೋಧ ಆಯ್ಕೆ ನಡೆಯಿತು.

ಚುನಾವಣಾಧಿಕಾರಿಯಾಗಿ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಎಸ್.ಸತೀಶ್, ಸಹ ಚುನಾವಣಾಧಿಕಾರಿಯಾಗಿ ತಾ.ಪಂ ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ಎಚ್.ಎನ್.ಶೈಲಜಾ ಕಾರ್ಯನಿರ್ವಹಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಹೆಚ್.ಎಸ್. ವೀಣಾ ಅಶೋಕ್, ಗ್ರಾಮ ಪಂಚಾಯಿತಿ ಸದಸ್ಯರಾದ ಶೀಲಾ ಮಹಾದೇವೇಗೌಡ, ಎಂ.ಟಿ. ಮಂಜೇಗೌಡ, ಎಂ.ಆರ್.ಮಂಜುನಾಥ್, ಜ್ಯೋತಿ ಹರೀಶ್, ಕರೋಟಿ ಅನಿಲ್, ಎಂ.ಆರ್. ಮಂಜೇಗೌಡ, ಲಲಿತಮ್ಮ, ಮಲ್ಲೇನಹಳ್ಳಿ ಯೋಗೇಶ್, ಸವಿತಮ್ಮ, ವಡ್ಡರಹಳ್ಳಿ ಮಂಜು, ಮಾಕವಳ್ಳಿ ಲಲಿತಮ್ಮ, ಕುಂದನಹಳ್ಳಿ ಭೈರಯ್ಯ, ಹೆಗ್ಗಡಹಳ್ಳಿ ವೀಣಾ, ಅಶೋಕ್, ಎಂ.ಡಿ. ಯೋಗೇಶ್, ವಿ.ಡಿ. ಮಂಜುನಾಥ್, ಸಿ.ಎನ್. ಜ್ಯೋತಿ, ಆರ್. ಕುಮಾರ್, ಸುಜಾತ ಮಂಜುನಾಥ್, ಮುಖಂಡರುಗಳಾದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಮಹಾದೇವೇಗೌಡ, ಪುರಸಭೆ ಸದಸ್ಯ ಡಿ.ಪ್ರೇಮಕುಮಾರ್, ಮುಖಂಡರಾದ ಬಾಲರಾಮೇಗೌಡ, ರಾಮೇಗೌಡ, ಅಲೋಕ್, ಅರುಣ್, ವಸಂತಪ್ಪ, ಬಸಪ್ಪ, ಕೆಂಗಯ್ಯ, ಸುಕಂದರಾಜ್, ಸಾಧುಗೋನಹಳ್ಳಿ ಲೋಕಿ, ರಾಜೇಶ್, ಸುನಿಲ್, ರಂಗಸ್ವಾಮಿ, ನಾಗೇಶ್, ಯೋಗೇಶ್, ಎಂ.ಎಸ್.ಮಂಜೇಗೌಡ, ರಮೇಶ್, ಲಿಂಗಾಪುರ ವಸಂತ್ ಕುಮಾರ್, ಅರುಣ್, ಲೋಕೇಶ್, ಕೋಳಿ ಮಂಜು, ಚೆಲುವರಾಜ್,

ಹೆಗ್ಗಡಹಳ್ಳಿ ಅಶೋಕ್, ಮಲ್ಲೇನಹಳ್ಳಿ ದೇವರಾಜು, ಚೌಡೇನಹಳ್ಳಿ ದೇವರಾಜು, ಕೃಷ್ಣಪುರ ಗಿರೀಶ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದು ಅಭಿನಂದಿಸಿದರು.

ಬಹುರೂಪಿಯಲ್ಲಿ ಪ್ರದರ್ಶನಗೊಳ್ಳುವ ನಾಟಕಗಳಿವು

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಈ ಬಾರಿ ಪಿ.ಲಂಕೇಶ್ ಅವರ 'ಮುಟ್ಟಿಸಿಕೊಂಡವನು', ರವೀಂದ್ರ ನಾಥ ಟಾಗೋರ್ ಅವರ ಲೋಕದ ಒಳ–ಹೊರಗೆ ಸೇರಿದಂತೆ 17 ನಾಟಕಗಳು ಪ್ರದರ್ಶನಗೊಳ್ಳಲಿದೆ. ಮಾ.7 ರಿಂದ 11 ರವರೆಗೆ ಪ್ರತಿ ದಿನ ಪ್ರದರ್ಶನಗೊಳ್ಳುವ ನಾಟಕಗಳ ವಿವರ ಇಂತಿದೆ.

■ **ಮಾರ್ಚ್ 7**

ಭೂಮಿ ಗೀತದಲ್ಲಿ ಸಂಜೆ 6.30ಕ್ಕೆ
ಮುಟ್ಟಿಸಿಕೊಂಡವನು(ಕನ್ನಡ)
ರಚನೆ– ಪಿ.ಲಂಕೇಶ್, ರಂಗರೂಪ ನಿರ್ದೇಶನ– ಕೆ.ಆರ್.ನಂದಿನಿ, ತಂಡ– ರಂಗಾಯಣ

ಕಿರುರಂಗ ಮಂದಿರದಲ್ಲಿ ಸಂಜೆ 6ಕ್ಕೆ
ಲೋಕದ ಒಳಹೊರಗೆ(ಕನ್ನಡ)
ರಚನೆ–ರವೀಂದ್ರನಾಥ ಟಾಗೋರ್, ನಿರ್ದೇಶನ–ಬಿ.ಸುರೇಶ್, ತಂಡ–ರಂಗಸಂಪದ, ಬೆಂಗಳೂರು

ಕಲಾಮಂದಿರದಲ್ಲಿ ರಾತ್ರಿ 7.30ಕ್ಕೆ
ಶಿಶುನಾಳ ಶರೀಫ(ಕನ್ನಡ)
ನಿರ್ದೇಶನ– ಚಿಂದೋಡಿ ಎಲ್.ಚಂದ್ರಧರ, ತಂಡ–ಪದ್ಮಶ್ರೀ ಚಿಂದೋಡಿ ಲೀಲಾರವರ ಕೆ.ಬಿ.ಆರ್.ಡ್ರಾಮಾ ಕಂಪನಿ, ದಾವಣಗೆರೆ

ವನರಂಗದಲ್ಲಿ ರಾತ್ರಿ 7 ಗಂಟೆಗೆ
ರಾಷ್ಟ್ರೀಯ ನಾಟಕೋತ್ಸವ ಉದ್ಘಾಟನೆ

■ **ಮಾರ್ಚ್ 8**

ಭೂಮಿಗೀತಾದಲ್ಲಿ ಸಂಜೆ 6.30ಕ್ಕೆ
ದುಖ್ವಾ ಮೇ ಬೀತಲ್ ರತಿಯಾ(ಹಿಂದಿ)
ರಚನೆ–ರಾಮೇಶ್ವರ್ ಉಪಾಧ್ಯಾಯ್, ರೂಪಾಂತರ–ಲಲಿತ್ ಸಿಂಹ ಪೋಖರಿಯಾ, ನಿರ್ದೇಶನ–ಪ್ರಸೂನ್ ನರೇನ್ ಶ್ರೀವತ್ಸವ್, ತಂಡ–ಕಮಲಾಶಂಕರ್ ಧನವಂತಿದೇವಿ ಫೌಂಡೇಶನ್, ಉತ್ತರ ಪ್ರದೇಶ

ಕಿರು ರಂಗ ಮಂದಿರದಲ್ಲಿ ಸಂಜೆ 6ಕ್ಕೆ
ದ್ರೋಪದಿ ಹೇಳ್ತವ್ಳೆ(ಕನ್ನಡ)
ರಚನೆ–ಕುಮಾರವ್ಯಾಸ ಭಾರತ ಮತ್ತು ಜನಪದ ಮಹಾ ಭಾರತ, ನಿರ್ದೇಶನ ಗಣೇಶ್ ಮಂದಾರ್ತಿ, ತಂಡ–ರಂಗಾಸ್ಥೆ, ಬೆಂಗಳೂರು

ಕಲಾಮಂದಿರದಲ್ಲಿ ರಾತ್ರಿ 7.30ಕ್ಕೆ
ಕಲ್ಯಾಣದ ಬಾಗಿಲು(ಕನ್ನಡ)
ರಚನೆ–ಡಾ.ನಟರಾಜ್ ಬೂದಾಳು, ನಿರ್ದೇಶನ–ಸಿ.ಬಸವಲಿಂಗಯ್ಯ, ತಂಡ–ಶ್ರೀ ಶಿವಕುಮಾರ ಕಲಾ ಸಂಘ, ಸಾಣೇಹಳ್ಳಿ

ವನರಂಗ ರಾತ್ರಿ 7ಕ್ಕೆ
ಸೀತೆಯ ವ್ಯಥೆ(ಕನ್ನಡ)
ಯಕ್ಷಗಾನ ಪ್ರಸಂಗ, ಥಿಯೇಟರ್ ಯಕ್ಷ ಉಡುಪಿ

■ **ಮಾರ್ಚ್ 9**

ಭೂಮಿಗೀತದಲ್ಲಿ ಸಂಜೆ 6.30ಕ್ಕೆ
ಜಂಪ್(ಹಿಂದಿ)
ರಚನೆ ಮತ್ತು ನಿರ್ದೇಶನ–ಮನೀಶ್ ವರ್ಮ, ತಂಡ–ಕಲೆಕ್ಟೀವ್ ಮ್ಯಾಡ್ ನೆಸ್ ಸ್ಟುಡಿಯೋಸ್, ಮುಂಬೈ

ಕಿರುರಂಗ ಮಂದಿರದಲ್ಲಿ ಸಂಜೆ 6ಕ್ಕೆ
ಗ್ಲಾನಿ(ಕನ್ನಡ)
ರಚನೆ–ಜಿ.ಎಸ್.ಭಟ್ ಸಾಗರ, ನಿರ್ದೇಶನ–ಚಿಂದಬರರಾವ್ ಜಂಬೆ, ತಂಡ–ಉದಯ ಕಲಾವಿದರು, ಸಾಗರ

ಕಲಾಮಂದಿರದಲ್ಲಿ ರಾತ್ರಿ 7.30ಕ್ಕೆ
ಚಾವುಂಡರಾಯ(ಕನ್ನಡ)
ರಚನೆ–ಜಯರಾಂ ರಾಯಪುರದ, ನಿರ್ದೇಶನ–ಹೆಚ್.ಕೆ.ಶ್ವೇತಾರಾಣಿ, ತಂಡ–ಶ್ರೀ ಗಜಾನನ ಯುವಕ ಮಂಡಳಿ, ಶೇಷಗಿರಿ

ವನರಂಗದಲ್ಲಿ ರಾತಿ 7ಕ್ಕೆ
ಖಟಾರ (ಮರಾಠಿ)
ರಚನೆ ಮತ್ತು ನಿರ್ದೇಶನ–ಅಮೋಲ್ ದೇವಿದಾಸ್ ಸಾಲ್ವೆ, ತಂಡ–ಆಪ್ಲಘರ್, ಅಹಮದನಗರ, ಮಹಾರಾಷ್ಟ್ರ

■ **ಮಾರ್ಚ್ 10**

ಭೂಮಿಗೀತದಲ್ಲಿ ಸಂಜೆ 6.30ಕ್ಕೆ
ಕಿಟನ್ ಕೋಲಾ(ಬಂಗಾಳಿ)
ರಚನೆ–ಸೆಲಿಮ್ ಆಲ್ ದೀನ್, ನಿರ್ದೇಶನ–ಸೌರವ್ ಪಲೋಧಿ, ತಂಡ–ಠಾಕುರ್ಪುಕುರ್ ಇಟೆಮೊಟೊ, ಕೊಲ್ಕತ್ತಾ

ಕಿರುರಂಗಮಂದಿರದಲ್ಲಿ ಸಂಜೆ 6ಕ್ಕೆ
ಬ್ಲ್ಯಾಕ್ ಔಟ್(ಕನ್ನಡ)
ರಚನೆ–ಜಿ.ವಿ.ಶಿವಾನಂದ, ನಿರ್ದೇಶನ–ಸಂದೀಪ್ ಪೈ ಎಸ್., ತಂಡ–ರಂಗಸಿರಿ ಪ್ರೊಡಕ್ಷನ್, ಬೆಂಗಳೂರು

ಕಲಾಮಂದಿರದಲ್ಲಿ ರಾತ್ರಿ 7.30ಕ್ಕೆ
ಚಿಲ್ಲರ ಸಮರಂ(ಮಲಯಾಳಂ)
ರಚನೆ–ಎಂ.ಪಿ.ರಾಜೇಶ್, ನಿರ್ದೇಶನ–ಅರುಣ್ ಲಾಲ್, ತಂಡ–ಲಿಟಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್, ಕೇರಳ

ವನರಂಗದಲ್ಲಿ ರಾತ್ರಿ 7ಕ್ಕೆ
ಕರಿಯದೇವರ ಹುಡುಕಿ(ಕನ್ನಡ)
ಮೂಲ–ಪ್ರೊ.ಜಿ.ಶಂಕರ್ ಪಿಳ್ಳೈ, ಅನುವಾದ–ನಾ ದಾಮೋದರ ಶೆಟ್ಟಿ, ನಿರ್ದೇಶನ–ನಿರಂಜನ ಖಾಲಿಕೊಡ, ತಂಡ– ಸಮುದಾಯ, ಬೆಂಗಳೂರು

■ **ಮಾರ್ಚ್ 11 ರಂದು ಕೊನೆ ದಿನ**

ಭೂಮಿಗೀತದಲ್ಲಿ ಸಂಜೆ 6.30ಕ್ಕೆ
ಅಬೊರಿಜಿನಲ್ ಕ್ರೈ(ಮಣಿಪುರಿ)
ಪರಿಕಲ್ಪನೆ, ವಿನ್ಯಾಸ, ನಿರ್ದೇಶನ– ಥೌದಮ್ ವಿಕ್ಟರ್ ಸಿಂಗ್, ತಂಡ–ಅಕೋತಾ ಥಿಯೇಟರ್, ಇಂಫಾಲ್ ಮಣಿಪುರ

ಕಿರುರಂಗ ಮಂದಿರದಲ್ಲಿ ಸಂಜೆ 6ಕ್ಕೆ
ಪಾರ್ಶ್ವ ಸಂಗೀತ(ಕನ್ನಡ)
ರಂಗರೂಪ– ಅರುಣ್, ನಿರ್ದೇಶನ–ಪ್ರಶಾಂತ್ ಹಿರೇಮಠ್, ತಂಡ–ರಂಗವಲ್ಲಿ, ಮೈಸೂರು

ಕಲಾಮಂದಿರದಲ್ಲಿ ರಾತ್ರಿ 7.30ಕ್ಕೆ
ಕತೆ ಎಡ್ಡೇಂಡ(ತುಳು)
ರಚನೆ ಮತ್ತು ನಿರ್ದೇಶನ–ಜೆ.ಪಿ.ತೂಮಿನಾಡ, ತಂಡ– ಶಾರದಾ ಆರ್ಟ್ಸ್ ಕಲಾವಿದರು, ಮಂಜೇಶ್ವರ, ಕಾಸರಗೋಡು

ವನರಂಗದಲ್ಲಿ ರಾತ್ರಿ 7ಕ್ಕೆ
ಬೆರಳ್ಗೆ ಕೊರಳ್(ಕನ್ನಡ)
ರಚನೆ–ಕುವೆಂಪು, ನಿರ್ದೇಶನ– ದಿನೇಶ್ ಚಮ್ಮಾಳಿಗೆ, ತಂಡ–ನಾಲ್ವಡಿ ಸೋಶಿಯಲ್ ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್, ಮೈಸೂರು

ಮೂರನೇ ಪುಟದಿಂದ

'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವ

ಚಾರಿತ್ರಿಕ ದಾಖಲೆಗಳು ಹಾಗೂ ಹಸ್ತಪ್ರತಿಗಳ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ವಾಸ್ತವಿಕ ಚಿತ್ರಕಲಾ ಕೃತಿಗಳ ಪ್ರದರ್ಶನ ಕೂಡ ಆಯೋಜಿಸಲಾಗಿದೆ. ಈ ಮೂಲಕ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ರಂಗ ಪ್ರಿಯರು ಹಾಗೂ ಕಲಾ ಪ್ರಿಯರನ್ನು ಅತ್ಯಾಕರ್ಷಿಸಲಿದೆ ಎಂದು ಪ್ರೊ.ಉಮೇಶ್ ತಿಳಿಸಿದರು.

ಈ ವೇಳೆ ಮಾತನಾಡಿದ ರಂಗಾಯಣದ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ರಂಗಾಯಣಕ್ಕೆ ನಿರ್ದೇಶಕರು ಇಲ್ಲದಿದ್ದರೂ ಯಾವುದೇ ಲೋಪ ಇಲ್ಲದೆ ಅಚ್ಚುಕಟ್ಟಾಗಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಆಯೋಜನೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಮೂಲಕ ಬಹುರೂಪಿ ಆಶಯಕ್ಕೆ ತಕ್ಕಂತೆ ಕಾರ್ಯಕ್ರಮ ರೂಪಿಸಲಾಗಿದೆ. ಈ ಬಾರಿ ಬಹುರೂಪಿಗೆ ಸರ್ಕಾರ 25 ಲಕ್ಷ ರೂ. ಅನುದಾನ ನೀಡಿದೆ ಎಂದು ತಿಳಿಸಿದರು.

ಚಲನ ಚಿತ್ರೋತ್ಸವದಲ್ಲಿ ಭಾರತದ ಸಿನಿಮಾಗಳು ಮಾತ್ರವಲ್ಲದೆ ವಿದೇಶದ ಹಲವು ಚಿತ್ರಗಳು ಪ್ರದರ್ಶನವಾಗಲಿದೆ. ಹವ್ಯಾಸಿ ರಂಗ ಕಲಾವಿದರಿಗೂ ಬಹುರೂಪಿಯಲ್ಲಿ ಪ್ರಾಧ್ಯಾನತೆ ನೀಡಲಾಗಿದೆ ಎಂದರು. ಬಹುರೂಪಿ ಉದ್ಘಾಟನೆ ದಿನದಂದು ವನರಂಗದಲ್ಲಿ ನಡೆಯುವ ಕಾರ್ಯಕ್ರಮದ ವೀಕ್ಷಣೆ ಉಚಿತವಿದ್ದು, ನಾಟಕಗಳಿಗೆ 100 ರೂ. ಪ್ರವೇಶ ದರ ನಿಗದಿ ಮಾಡಲಾಗಿದೆ. ಪರೀಕ್ಷಾ ಸಮಯದಲ್ಲಿ ಬಹುರೂಪಿ ನಡೆಯುತ್ತಿದ್ದು, ಓದಿನ ಒತ್ತಡದಿಂದ ಸ್ವಲ್ಪ ಮಟ್ಟಿಗೆ ಹೊರ ಬರಲು ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಬಹುರೂಪಿ ನಾಟಕೋತ್ಸವಕ್ಕೆ ಆಗಮಿಸುತ್ತಾರೆ ಎಂದು ನಿರ್ಮಲಾ ಮಠಪತಿ ವಿಶ್ವಾಸ ವ್ಯಕ್ತಪಡಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ನಾಟಕಗಳ ಆಯ್ಕೆ ಸಮಿತಿ ಅಧ್ಯಕ್ಷ ಸುರೇಶ್ ಬಾಬು, ರಂಗಾಯಣ ಕಲಾವಿದ ಅಂಜಂ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ವಿಚಾರ ಮಂಥನ

ಮೈಸೂರು: ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಮಾರ್ಚ್ 9 ಮತ್ತು 10 ರಂದು ವಚನ ಚಳವಳಿಯ ಸಮಕಾಲೀನ ವ್ಯಾಖ್ಯಾನ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ.

ಇವ ನಮ್ಮವ, ಇವ ನಮ್ಮವ ವಿಷಯ ಕುರಿತ ವಿಚಾರ ಸಂಕೀರಣವನ್ನು ಹಿರಿಯ ಕವಿ, ಚಿಂತಕ ಹೆಚ್.ಎಸ್.ಶಿವ ಪ್ರಕಾಶ್ ಉದ್ಘಾಟಿಸಲಿದ್ದು, ಹಿರಿಯ ಲೇಖಕ ಓ.ಎಲ್. ನಾಗಭೂಷಣ ಸ್ವಾಮಿ ಅಧ್ಯಕ್ಷತೆ ವಹಿಸುವರು. ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಸಂಚಾಲಕ ಹೆಚ್.ಎಸ್.ಉಮೇಶ್ ಆಶಯ ನುಡಿಗಳನ್ನಾಡುವರು.

ಮಾರ್ಚ್ 9 ರಂದು ಬೆಳಿಗ್ಗೆ 11.45 ರಿಂದ ಮಧ್ಯಾಹ್ನ 1.15 ಗಂಟೆವರೆಗೆ ವಚನ ಸಾಹಿತ್ಯದಲ್ಲಿ ಆಧ್ಯಾತ್ಮಿಕತೆ ಮತ್ತು ಅಲೌಖಿಕತೆ ವಿಷಯವನ್ನು ತುಮಕೂರಿನ ಸಂಶೋಧಕ ಎಸ್.ನಟರಾಜ ಬೂದಾಳು ಮಂಡಿಸಲಿದ್ದು, ವಿಮರ್ಶಕ ಎಲ್.ಎನ್. ಮುಕುಂದರಾಜ್ ಹಾಗೂ ಬರಹಗಾರ್ತಿ ಮೈಸೂರಿನ ಲತಾ ಪ್ರತಿ ಸ್ಪಂದನೆ ನೀಡುವರು. ಹೊಸಪೇಟೆಯ ಸಂಶೋಧಕ ಡಾ.ರಹಮತ್ ತರೀಕೆರೆ ಅಧ್ಯಕ್ಷತೆ ವಹಿಸಲಿದ್ದಾರೆ.

ಅದೇ ದಿನ ಮಧ್ಯಾಹ್ನ 1.45 ರಿಂದ ಮಧ್ಯಾಹ್ನ 3.15 ಗಂಟೆ ತನಕ ವಚನ ಚಳವಳಿ ಮತ್ತು ಸ್ತ್ರೀ ಸಮಾನತೆ ಕುರಿತು ಧಾರವಾಡದ ಉಪನ್ಯಾಸಕರಾದ ಡಾ.ವಿನಯಾ ಒಕ್ಕುಂದ ವಿಷಯ ಮಂಡಿಸಲಿದ್ದು, ಬರಹಗಾರ್ತಿ ಕವಿತಾ ರೈ ಹಾಗೂ ರಂಗ ನಿರ್ದೇಶಕಿ ಕೆ.ಆರ್. ಸುಮತಿ ಪ್ರತಿಸ್ಪಂದನೆ ನೀಡವರು. ಸ್ತ್ರೀವಾದಿ ಲೇಖಕರಾದ ಹೆಚ್.ಎಸ್.ಶ್ರೀಮತಿ ಅಧ್ಯಕ್ಷತೆ ವಹಿಸುವರು. ತರುವಾಯ ಮಧ್ಯಾಹ್ನ 3.30 ರಿಂದ ಸಂಜೆ 5 ಗಂಟೆ ತನಕ ವಚನ ಚಳವಳಿ ಮತ್ತು ಕನ್ನಡ ರಂಗಭೂಮಿ ವಿಷಯ ಕುರಿತು ಬರಹಗಾರ ಡಾ.ರಾಜಪ್ಪ ದಳವಾಯಿ ವಿಷಯ ಮಂಡಿಸಲಿದ್ದು, ನಾಟಕಗಾರ ನಟರಾಜ್ ಹೊನ್ನವಳ್ಳಿ ಹಾಗೂ ರಂಗ ನಿರ್ದೇಶಕ ಮಹದೇವ ಹಡಪದ ಪ್ರತಿ ಸ್ಪಂದನೆ ನೀಡುವರು. ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಮಾರ್ಚ್ 10 ರಂದು ರಂಗಭೂಮಿ–ತಂತ್ರಜ್ಞಾನ ಮತ್ತು ಅವುಗಳ ಸಾಂಸ್ಕೃತಿಕ ಪ್ರಭಾವದ ಬಗ್ಗೆ ಮೂರು ವಿಚಾರ ಗೋಷ್ಠಿ ನಡೆಯಲಿದೆ.

ಬೆಳಿಗ್ಗೆ 10.30 ರಿಂದ ಮಧ್ಯಹ್ನ 12 ಗಂಟೆ ತನಕ ರಂಗಭೂಮಿ ಮತ್ತು ತತ್ವಜ್ಞಾನ ಕುರಿತು ತತ್ವಜ್ಞಾನಿ ಡಾ.ಸುಂದರ ಸುರಕ್ಕೈ ವಿಷಯ ಮಂಡಿಸಲಿದ್ದು, ರಂಗ ನಿರ್ದೇಶಕರಾದ ಡಾ.ಶ್ರೀಪಾದ ಭಟ್ ಮತ್ತು ವೆಂಕಟರಮಣ ಐತಾಳ್ ಪ್ರತಿ ಸ್ಪಂದನೆ ನೀಡುವರು. ರಂಗ ನಿರ್ದೇಶಕ ರಘುನಂದನ ಅಧ್ಯಕ್ಷತೆ ವಹಿಸಲಿದ್ದಾರೆ.

ಮಧ್ಯಾಹ್ನ 12.10 ರಿಂದ 1.40 ಗಂಟೆ ತನಕ ರಂಗಭೂಮಿ ಮತ್ತು ತಂತ್ರಜ್ಞಾನ ಕುರಿತು ಕೇರಳದ ರಂಗ ನಿರ್ದೇಶಕ ದೀಪನ್ ಶಿವರಾಮನ್ ವಿಷಯ ಮಂಡನೆ ಮಾಡಲಿದ್ದು, ವಿನ್ಯಾಸಕಾರ ಶಶಿಧರ ಅಡಪ, ನಟ ಶಕೀಲ್ ಅಹಮದ್ ಪ್ರತಿ ಸ್ಪಂದನೆ ನೀಡುವರು. ರಂಗ ನಿರ್ದೇಶಕ ಸುರೇಶ್ ಆನಗಳ್ಳಿ ಅಧ್ಯಕ್ಷತೆ ವಹಿಸುವರು.

ಕೊನೆಯಾದಾಗಿ ಮಧ್ಯಾಹ್ನ 2.30 ರಿಂದ ಸಂಜೆ 4 ಗಂಟೆ ತನಕ ಸಮುದಾಯದತ್ತ ಸಮಕಾಲೀನ ರಂಗಭೂಮಿ ವಿಷಯ ಕುರಿತು ನಾಟಕಗಾರ ಕೋಟಿಗಾನಹಳ್ಳಿ ರಾಮಯ್ಯ ವಿಷಯ ಮಂಡಿಸಲಿದ್ದು, ರಂಗ ನಿರ್ದೇಶಕರಾದ ಕೆ.ಪಿ.ಲಕ್ಷ್ಮಣ ಮತ್ತು ಶ್ರೀಜಿತ್ ಸುಂದರಮ್ ಪ್ರತಿಸ್ಪಂದನೆ ನೀಡುವರು. ಅಸ್ಸಾಂನ ರಂಗ ನಿರ್ದೇಶಕ ಬಾಗೀರಥಿ ಬಾಯಿ ಕದಂ ಅಧ್ಯಕ್ಷತೆ ವಹಿಸುವರು.

ಪಂಚಾಯತ್ ಬಜೆಟ್

ನಿಮ್ಮ ಗಮನಕ್ಕೆ ಮತ್ತು ಅನುಮೋದನೆಗೆ ಬರುತ್ತವೆ. ವಾರ್ಷಿಕ ಅನುದಾನದಲ್ಲಿ ನೀವು ಮುಂದೇನು ಮಾಡುತ್ತೀರಿ ಎಂಬ ಪಕ್ಷಿ ನೋಟ ನಿಮ್ಮ ಪಂಚಾಯತ್ ವ್ಯಾಪ್ತಿಯ ಜನರಿಗೂ ಮತ್ತು ಇಲಾಖೆಗೂ ತಿಳಿಯಬೇಕಿದೆ.

ಗುರಿಯಿಟ್ಟುಕೊಂಡು ಸಂಪನ್ಮೂಲವನ್ನು ಕ್ರೋಢೀಕರಿಸಿ ಮತ್ತು ಅದಕ್ಕೆ ತಕ್ಕಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ಹಣ ವೆಚ್ಚ ಮಾಡಿ. ಇದನ್ನು ಬಿಟ್ಟು ಒತ್ತಡ, ಬಲವಂತಕ್ಕೆ ಮಣಿದು ಹಣ ದುರುಪಯೋಗ ಆಗುವುದು ಬೇಡ, ನಿಮ್ಮ ಖಜಾನೆಯ ಮಾಹಿತಿ ಸಾರ್ವಜನಿಕರಿಗೆ ತಿಳಿದರೆ, ಅವರು ಸ್ಥಳೀಯ ಸಮಸ್ಯೆಗಳನ್ನು ಹೇಳಿಕೊಂಡು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ. ರಾಜ್ಯ ಸರ್ಕಾರ ಹೇಗೆ ತನ್ನ ಆರ್ಥಿಕ ಸ್ಥಿತಿಗತಿಗಳನ್ನು ಜನರ ಮುಂದಿಟ್ಟು ಖರ್ಚು–ವೆಚ್ಚಗಳನ್ನು ತೋರಿಸುತ್ತದೆಯೋ ಅದೇ ರೀತಿ ನೀವು ಇನ್ನು ಮುಂದೆ ಕಡ್ಡಾಯವಾಗಿ ಮಾಡಬೇಕು ಎಂದು ತಿಳಿಸಿದ್ದಾರೆ. ರಾಜ್ಯ ಸರ್ಕಾರ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮಾದರಿಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳೂ ಬಜೆಟ್ ಸಿದ್ಧಪಡಿಸಿ ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಬೇಕು.

ಮುಂದಿನ ಆರ್ಥಿಕ ವರ್ಷದಲ್ಲಿ ವಿವಿಧ ಬಾಬ್ತುಗಳಡಿ ಲಭ್ಯವಾಗುವ ಅನುದಾನ ಹಾಗೂ ಕೈಗೊಳ್ಳಬೇಕಾದ ಅಭಿವೃದ್ಧಿ ಯೋಜನೆ ಒಳಗೊಂಡಂತೆ ಗ್ರಾಮ ಪಂಚಾಯತ್ ಆಯವ್ಯಯ (ಪಂಚಾಯತ್ ಬಜೆಟ್) ಕಡ್ಡಾಯವಾಗಿ ತಯಾರಿಸಿ ಮಾರ್ಚ್ 10ರೊಳಗೆ ಗ್ರಾಮ ಪಂಚಾಯತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಬೇಕು, ಪಂಚಾಯತ್‌ಗಳು ಬಜೆಟ್ ಮಂಡಿಸುವುದು ಕಡ್ಡಾಯವಾಗಿರುತ್ತದೆ.

ಗ್ರಾಮ ಪಂಚಾಯತ್‌ಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ನೀಡುವ ಶಾಸನಬದ್ಧ ಅನುದಾನ, ವಿವಿಧ ಯೋಜನೆಗಳಡಿ ದೊರೆಯುವ ಅನುದಾನದ ಜೊತೆಗೆ ಸ್ವಂತ ಸಂಪನ್ಮೂಲ ಸಂಗ್ರಹಿಸಲು ಅವಕಾಶವಿ ರುವುದರಿಂದ ಎಲ್ಲ ಮೂಲಗಳನ್ನು ಕ್ರೋಢೀಕರಿಸಿ ಗ್ರಾಮ ಪಂಚಾಯತ್ ಸಭೆಯಲ್ಲಿ ಅನುಮೋದನೆ ಪಡೆದು ತಾಲೂಕು ಪಂಚಾಯತ್‌ಗೆ ಕಳುಹಿಸಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯರ ಬಜೆಟ್ ಗ್ರೇಟ್ ತಮಾಷಾ!!

ಬಜೆಟ್‌ನಲ್ಲಿ ಇದೇ ಯೋಜನೆಯನ್ನು ಮರು ಘೋಷಿಸಲಾಗಿದೆ. ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಹಾಗೂ ರನ್‌ವೇ ವಿಸ್ತರಣೆಗಾಗಿ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಬೊಮ್ಮಾಯಿಯವರ ಸರ್ಕಾರದ ಬಜೆಟ್‌ನಲ್ಲಿ 319.13 ಕೋಟಿ ರೂ. ಮಂಜೂರಾಗಿದ್ದು, ಅದಕ್ಕೆ ಅನುಗುಣವಾಗಿ ಈಗಾಗಲೇ 4 ಕಂತಿನಲ್ಲಿ ಒಟ್ಟು 276.13 ಕೋಟಿ ಬಿಡುಗಡೆಯಾಗಿದ್ದು, ಇನ್ನೂ 43 ಕೋಟಿ ರೂ. ಬಾಕಿ ಇದೆ. ಆದರೆ ಇದೇ ಯೋಜನೆಯನ್ನು ಸಿದ್ದರಾಮಯ್ಯ ಬಜೆಟ್‌ನಲ್ಲಿ ಮರು ಘೋಷಿಸಲಾಗಿದೆ. ಮೈಸೂರು ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಡಾ ಆಯುಕ್ತ ದಿನೇಶ್‌ಕುಮಾರ್ ಹಾಗೂ ತಾವು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಅವರ ಸಲಹೆಯಂತೆ ಡಿಪಿಆರ್ ತಯಾರಿಸಲು ಬೊಮ್ಮಾಯಿ ಸರ್ಕಾರದಿಂದ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿಸುವ ಮೂಲಕ ಕಾರ್ಯಪ್ರವೃತ್ತರಾಗಿದ್ದು, ಈ ಯೋಜನೆಯನ್ನು ಕೂಡ ಸಿದ್ದರಾಮಯ್ಯ ತಮ್ಮ ಬಜೆಟ್‌ನಲ್ಲಿ ಮರು ಘೋಷಣೆ ಮಾಡಿದ್ದಾರೆ ಎಂದು ಪ್ರತಾಪ್ ಸಿಂಹ ಪ್ರಕಟಣೆಯಲ್ಲಿ ಆರೋಪಿಸಿದ್ದಾರೆ.

ಫೆ.23ರಿಂದ 31 ಜಿಲ್ಲೆಯಲ್ಲಿ ಸಂವಿಧಾನ ಜಾಥಾ

ಘೋಷ್, ಪ್ರೊ. ಸುಖದೇವ್ ಥೋರಟ್, ಪ್ರೊ. ಕಾಂಚಾ, ಪ್ರಶಾಂತ್ ಭೂಷಣ್, ಬಿಜುವಾಡ ವಿಲ್ಸನ್, ಮೇಧಾ ಪಾಟ್ಕರ್ ಮುಂತಾದ ಅನೇಕ ಚಿಂತಕರು, ಮೇಧಾವಿಗಳು ಭಾಗವಹಿಸಲಿದ್ದಾರೆ, 24ರಂದು ಸಮಾವೇಶ ಉದ್ಘಾಟನೆಯಾಗಲಿದೆ. ಶಾಲಾ ಕಾಲೇಜುಗಳಲ್ಲಿ ಸಂವಿಧಾನದ ಪಿಠಿಕೆ ಓದಿಸಲಾಗುತ್ತಿದೆ. ಸಂವಿಧಾನ ರಚನೆಯಾದ ನಂತರ ಮೊದಲನೇ ಬಾರಿಗೆ ಬಜೆಟ್ ಪುಸ್ತಕದ ಮುಖಪುಟದಲ್ಲಿ ಪೀಠಿಕೆಯನ್ನು ಮುದ್ರಿಸಲಾಗಿದೆ ಎಂದರು. ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮಂತ್ರಗಳನ್ನು ನೀಡಿದ್ದಾರೆ, ಹೋರಾಟ ಇಲ್ಲದೇ ಸಂವಿಧಾನದಲ್ಲಿ ಹೇಳಿರುವ ಅನೇಕ ಹಕ್ಕುಗಳು ನಮಗೆ ದಕ್ಕುತ್ತಿರಲಿಲ್ಲ, ಸ್ವಾತಂತ್ರ್ಯ ಬಂದು 77 ವರ್ಷಗಳಾ ಯಿತು, ಸಂವಿಧಾನ ಜಾರಿಯಾಗಿ 75ನೇ ವರ್ಷ ವಾದರೂ ಎಲ್ಲರಿಗೂ ಎಲ್ಲ ಹಕ್ಕುಗಳು ಸಿಕ್ಕಿಲ್ಲ. ದೇಶದಲ್ಲಿ ಸಾಮಾಜಿಕ ಹಾಗೂ ರಾಜಕೀಯ ಅಸ ಮಾನತೆ ಇದೆ, ಇಷ್ಟು ವರ್ಷಗಳಾದರೂ ಅಸಮಾನತೆ ದೇಶದಿಂದ ಹೋಗಿಲ್ಲ, ಈ ಬಗ್ಗೆ ಎಲ್ಲರೂ ಎಚ್ಚೆತ್ತು ಕೊಳ್ಳಬೇಕು. ದೇಶದಲ್ಲಿ ಕಾನೂನಿನ ಅರಿವು ಕಡಿಮೆ ಯಿದೆ, ಬಹಳ ಜನರಿಗೆ ಸಂವಿಧಾನದ ಬಗ್ಗೆ ತಿಳಿದಿಲ್ಲ, ಪ್ರತಿ ನಾಗರಿಕನಿಗೂ ಸಂವಿಧಾನದ ಬಗ್ಗೆ ತಿಳಿದಿರಬೇಕು, ಸಂವಿಧಾನ ನೀಡಿರುವ ಹಕ್ಕುಗಳು, ಅವುಗಳ ಸರಿಯಾದ ಬಳಕೆ ಬಗ್ಗೆ ತಿಳಿಸಬೇಕಿದೆ, ಸಂವಿಧಾನದಲ್ಲಿ ಕೆಲವರಿಗೆ ನಂಬಿಕೆ, ಗೌರವವಿಲ್ಲ, ಆದ್ದರಿಂದ ಜನರ ದಾರಿ ತಪ್ಪಿಸುತ್ತಿದ್ದಾರೆ ಎಂದರು.

'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ನಿಜವಾಗಲೂ ಆಗುತ್ತಿದೆಯೇ, ಸಾಮಾಜಿಕ ನ್ಯಾಯ ಮತ್ತು ಅವಕಾಶಗಳನ್ನು ಪಡೆಯಲು ಜನರಲ್ಲಿ ಜಾಗೃತಿ ಮೂಡಿಸಲು ಫೆಬ್ರವರಿ 24 ಮತ್ತು 25ರಂದು ಭಾರತ ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶ ಆಯೋಜಿಸಲಾಗಿದೆ, ಸಂವಿಧಾನದ ಅರಿವು ಮೂಡಿಸುವಲ್ಲಿ ಬದ್ಧತೆ ಹಾಗೂ ಸ್ಪಷ್ಟತೆ ಇದ್ದರೆ, ಯಾರೂ ದಾರಿತಪ್ಪಿಸಲು ಸಾಧ್ಯವಿಲ್ಲ. ದೇಶದ ಸುಮಾರು ಶೇಕಡ 78 ರಷ್ಟು ಜನರು ಶಿಕ್ಷಣ ಪಡೆದಿದ್ದಾರೆ, ವಿದ್ಯಾವಂತರು ಇಂದಿಗೂ ಮೌಢ್ಯ, ಕಂದಾಚಾರ ನಂಬುತ್ತಿದ್ದಾರೆ, ವೈಚಾರಿಕತೆ ಬಗ್ಗೆ ಜ್ಞಾನವಿಲ್ಲ, ಸರಿತಪ್ಪುಗಳ ಬಗ್ಗೆ ತಿಳಿಯಲೆಂದೇ ಶಿಕ್ಷಣ ಪಡೆಯುವುದು ಎಂದರು.

ಫೆ.25ರಿಂದ 27ರವರೆಗೆ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ

ಮೈಸೂರು, ಫೆ.17–ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಸರ್ಕಾರಿ ಉತ್ತನಹಳ್ಳಿಯಲ್ಲಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವವನ್ನು ಫೆ.25 ರಿಂದ 27 ರವರೆಗೆ ಆಯೋಜಿಸಲಾಗಿದೆ.

ಮಹೋತ್ಸವಕ್ಕೆ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಾಲಯಗಳ ಆಡಳಿತಾಧಿಕಾರಿಗಳಾದ ಪಿ.ಶಿವರಾಜು, ಮೈಸೂರು ಜಿಲ್ಲಾಧಿಕಾರಿಗಳಾದ ಡಾ.ಕೆ.ವಿ ರಾಜೇಂದ್ರ, ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಿ.ಜಿ.ಕೃಷ್ಣ, ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ದೇವಸ್ಥಾನದ ಆಗಮಿಕರಾದ ಎಸ್.ಸಿ ಮಹದೇವ ಪ್ರಸಾದ್ ಹಾಗೂ ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ದೇವಸ್ಥಾನದ ಪಾರುಪತ್ತೇದಾರರಾದ ಸಂಜೀವ್.ಹೆಚ್.ಆರ್ ಅವರು ಆಗಮಿಸಲಿದ್ದಾರೆ.

ಹೋರಾಟದ ಫಲವಾಗಿ ನಾಳೆ ದಿವಂಗತ ದೇವರಾಜ ಅರಸರ ಪ್ರತಿಮೆಗೆ ಶಿಲಾನ್ಯಾಸ


ಸುದ್ದಿಗೋಷ್ಠಿಯಲ್ಲಿ ಜಾಕೀರ್ ಹುಸೇನ್ ಮಾತನಾಡಿದರು.

ಮೈಸೂರು, ಫೆ.17(ಜಿಎ)–ದೇವರಾಜ ಅರಸು ಪ್ರತಿಮೆ ಹೋರಾಟ ಸಮಿತಿ ನಡೆಸಿದ ಹೋರಾಟದ ಫಲವಾಗಿ ಫೆ.19ರ ಬೆಳಗ್ಗೆ 9.30ಕ್ಕೆ ನಗರದ ನೂತನ ಡಿಸಿ ಕಚೇರಿ ಆವರಣದಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಪ್ರತಿಮೆ ಸ್ಥಾಪನೆಗೆ ಶಿಲಾನ್ಯಾಸ ನೆರವೇರಿಸಲಾಗುತ್ತಿದೆ ಎಂದು ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವರಾಜ ಅರಸು ಅವರ ಕಾರ್ಯಕ್ರಮಗಳ ಪ್ರಯೋಜನ ಲಕ್ಷಾಂತರ ಮಂದಿ ಪಡೆದಿದ್ದಾರೆ. ಹೀಗಾಗಿ ಇವರ ಕಾರ್ಯಗಳು ಮುಂದಿನ ಪೀಳಿಗೆಗೂ ಉಳಿಯಬೇಕೆಂಬ ಹಿನ್ನೆಲೆಯಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಮೆ ನಿರ್ಮಿಸಬೇಕೆಂದು ಸಮಿತಿ ಹೋರಾಟ ನಡೆಸಿತ್ತು. ಇದರ ಫಲವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು. ಅಂದು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ ಶಿಲಾನ್ಯಾಸ ನೆರವೇರಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಎಂ.ಚಂದ್ರಶೇಖರ್, ಡಾ.ವೈ.ಡಿ.ರಾಜಣ್ಣ, ಪವನ್ ಸಿದ್ರಾಮು, ಡೈರಿ ವೆಂಕಟೇಶ್ ಉಪಸ್ಥಿತರಿದ್ದರು.

ಈಗಾಗಲೇ ಎಲ್ಲೆಲ್ಲಿ ದೇವರಾಜ ಅರಸರ ಪ್ರತಿಮೆ ಇದೆಯೋ ಅವನ್ನೆಲ್ಲ ಪರಿಶೀಲಿಸಿದ್ದು, ಸುಮಾರು 12 ಅಡಿ ಎತ್ತರದ ಕಲ್ಲಿನ ಪ್ರತಿಮೆಯನ್ನು ಈಗ ಸ್ಥಾಪಿಸಲಾಗುತ್ತಿದೆ. ಶೀಘ್ರದಲ್ಲೇ ಪ್ರತಿಮೆ ನಿರ್ಮಾಣ ಕಾರ್ಯ ಆರಂಭವಾಗಲಿದೆ. –ಜಾಕೀರ್ ಹುಸೇನ್.

ಪೌರಕಾರ್ಮಿಕರು, ಒಳಚರಂಡಿ ಸಹಾಯಕರ ಕಾಯಂಗೆ ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಕೃತಜ್ಞತೆ


ಸುದ್ದಿಗೋಷ್ಠಿಯಲ್ಲಿ ಆರ್ಟಿಸ್ಟ್ ನಾಗರಾಜು ಮಾತನಾಡಿದರು.

ಮೈಸೂರು, ಫೆ.17(ಜಿಎ)–ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛತಾ ಕೆಲಸದಲ್ಲಿ ನಿರತರಾಗಿರುವ ಪೌರಕಾರ್ಮಿಕರು ಹಾಗೂ ಒಳಚರಂಡಿ ಸಹಾಯಕರನ್ನು ಕಾಯಂಗೊಳಿಸಬೇಕೆಂಬ ಬೇಡಿಕೆ ಈಡೇರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘವು ಕೃತಜ್ಞತೆ ಸಲ್ಲಿಸಿದೆ.

ಈ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ನಾರಾಯಣ ಮಾತನಾಡಿ, ವಿಧಾನಸಭಾ ಚುನಾವಣೆಗೂ ಮೊದಲು ಕಾಂಗ್ರೆಸ್ ಪಕ್ಷವು ಇವರ ಬೇಡಿಕೆ ಈಡೇರಿಸುವುದಾಗಿ ಘೋಷಣೆ ಮಾಡಿತ್ತು. ಅದರಂತೆ ಈಗಿನ ಬಜೆಟ್‌ನಲ್ಲಿ 24,005 ಪೌರಕಾರ್ಮಿಕರ ಕಾಯಂಗೆ ಅನುಮೋದನೆ ನೀಡಲಾಗಿದೆ. ಜೊತೆಗೆ 10 ಮಹಾನಗರ ಪಾಲಿಕೆಗಳಲ್ಲಿರುವ 529 ಒಳಚರಂಡಿ ಸಹಾಯಕರನ್ನು ಸಹಾ ಕಾಯಂಗೊಳಿಸುವ ಪ್ರಕ್ರಿಯೆಗೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿರುವುದು ಸಂತಸದ ವಿಚಾರವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳು ಹಾಗೂ ಪೌರಕಾರ್ಮಿಕ ಮುಖಂಡರಾದ ಎಸ್.ಎಂ.ಪಳನಿಸ್ವಾಮಿ, ಆರ್ಟಿಸ್ಟ್ ನಾಗರಾಜು, ಆರ್.ದಾಸು, ಪಳನಿ, ಗುರುದತ್ ಉಪಸ್ಥಿತರಿದ್ದರು.

'ಕರ್ನಾಟಕಕ್ಕಾಗಿ ನಾವು': ನಾಳೆ ಕೆಆರ್‌ಎಸ್‌ದಿಂದ ಬೈಕ್ ಜಾಥಾ


ಸುದ್ದಿಗೋಷ್ಠಿಯಲ್ಲಿ ಮಾ.ಸ.ಪ್ರವೀಣ್ ಮಾತನಾಡಿದರು.

ಮೈಸೂರು, ಫೆ.17(ಜಿಎ)– ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್) ವತಿಯಿಂದ ರಾಜ್ಯ ವ್ಯಾಪಿ ಪಕ್ಷದ ಜನ ಜಾಗೃತಿ 'ಕರ್ನಾಟಕಕ್ಕಾಗಿ ನಾವು' ಬೈಕ್ ಜಾಥವನ್ನು ಫೆ.19ರಿಂದ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾ.ಸ.ಪ್ರವೀಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಥಾಕ್ಕೆ ಪಕ್ಷದ ಅಧ್ಯಕ್ಷರಾದ ರವಿಕೃಷ್ಣ ರೆಡ್ಡಿ ಬೆಂಗಳೂರಿನ ದೇವನಹಳ್ಳಿಯಲ್ಲಿ ಫೆ.19ರಂದು ಚಾಲನೆ ನೀಡಲಿದ್ದಾರೆ. ಈ ಜಾಥಾವು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಚರಿಸಿ ಫೆ.21ರಂದು ಮೈಸೂರಿನ ಕೋಟೆ ಆಂಜನೇಯ ದೇವಸ್ಥಾನ ತಲುಪಲಿದೆ ಎಂದರು. ಜಾಥಾದಲ್ಲಿ ಮೈಸೂರಿನ 200ಕ್ಕೂ ಅಧಿಕ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಇಲ್ಲಿಂದ ಮುಂದೆ ಹುಣಸೂರು, ಪಿರಿಯಾಪಟ್ಟಣ ಮತ್ತು ಕುಶಾಲನಗರ ಮಾರ್ಗವಾಗಿ ಮಾ.3ರಂದು ತುಮಕೂರಿನ ನೆಲಮಂಗಲ ತಲುಪಲಿದ್ದು, ಅಲ್ಲಿ ಮಧ್ಯಾಹ್ನ 12ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜೇಂದ್ರ, ಡಿ.ಪಿ.ಕೆ. ಪರಮೇಶ್, ರಾಜೇಗೌಡ, ರವಿ ಕೋಟೆ ಹುಂಡಿ, ಶಶಾಂಕ್ ಉಪಸ್ಥಿತರಿದ್ದರು.


ಜಯಲಕ್ಷ್ಮಿಪುರಂ ಪೊಲೀಸ್ ಠಾಣೆ ನಿರೀಕ್ಷಕ ಹೆಚ್.ಎನ್.ವಿಜಯ್ ಅವರನ್ನು ಬಡವರ ಬಂಧು ಕನ್ನಡ ಯುವಕರ ಸಂಘದಿಂದ ಅಭಿನಂದಿಸಲಾಯಿತು. ಲಕ್ಷ್ಮಿದೇವಮ್ಮ ಹೆರಿಗೆ ಆಸ್ಪತ್ರೆ ನಿರ್ದೇಶಕ ಪಡುವಾರಹಳ್ಳಿ ಪಾಪಣ್ಣ, ಕಾರ್ಯದರ್ಶಿ ಕೃಷ್ಣ, ಮದನ್ ಮಾದೇಶ, ಸುಣ್ಣದಕೇರಿ ರಮೇಶ್, ಪ್ರದೀಪ್, ಭರತ್, ನವೀನ್ ಇತರರಿದ್ದಾರೆ.

ನಾಳಿದ್ದು 'ಮಾಮರವೆಲ್ಲೋ ಕೋಗಿಲೆ ಎಲ್ಲೋ' ಗೀತ ಸಿಂಚನ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರೇವಣ್ಣ ಮಾತನಾಡಿದರು.

ಮೈಸೂರು,ಫೆ.17(ಜಿಎ)–ಹಳೆ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ವತಿಯಿಂದ ಟ್ರಸ್ಟ್‌ನ 9ನೇ ವಾರ್ಷಿಕೋತ್ಸವ ಅಂಗವಾಗಿ ಕನ್ನಡ, ಹಿಂದಿ ಹಳೆ ಗೀತೆಗಳ 'ಮಾಮರವೆಲ್ಲೋ ಕೋಗಿಲೆ ಎಲ್ಲೋ' ಗೀತ ಸಿಂಚನ ಕಾರ್ಯಕ್ರಮವನ್ನು ಫೆ.20ರಂದು ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ರೇವಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5ಗಂಟೆಗೆ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಉದ್ಘಾಟನೆ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ವಹಿಸಲಿದ್ದಾರೆ. ಈ ವೇಳೆ ಅಯೋಧ್ಯ ಬಾಲರಾಮನ ಮೂರ್ತಿ ಕೆತ್ತಿದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಅಭಿನಂದಿಸಲಾಗುವುದು ಎಂದರು.

ಅತಿಥಿಗಳಾಗಿ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಉದ್ಯಮಿಗಳಾದ ಡಾ.ಜಿ.ರವಿ, ರವಿಗೌಡ, ವಾದಿರಾಜ್ , ರಾಧಾಕೃಷ್ಣ, ಆನಂದ್ ಆಗಮಿಸಲಿದ್ದಾರೆ. ನುರಿತ ಏಳು ಗಾಯಕ, ಗಾಯಕಿಯರು 25ಕ್ಕೂ ಅಧಿಕ ಕನ್ನಡ, ಹಿಂದಿ ಗೀತೆಗಳನ್ನು ಹಾಡಿ ರಂಜಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಲಕ್ಷ್ಮಿ ಶ್ರೀಕಂಠರಾವ್, ವಾಣಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಬೃಹತ್ ಸೈಕಲ್ ಜಾಥಾ ಮೂಲಕ ಸಂವಿಧಾನ ಜಾಗೃತಿ



ಮೈಸೂರು,ಫೆ.17–ಭಾರತವು ತನ್ನ ಸಂವಿಧಾನವನ್ನು ಅಂಗೀಕರಿಸಿಕೊಂಡು 75ನೇ ವರ್ಷದ ಆಚರಣೆ ಪ್ರಯುಕ್ತ 'ಸಂವಿಧಾನ ಜಾಗೃತಿ ಜಾಥಾ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಸೈಕ್ಲಿಸ್ಟ್ ಅಸೋಸಿಯೇಷನ್ ಅವರ ಸಂಯುಕ್ತ ಆಶ್ರಯದಲ್ಲಿ ಬೃಹತ್ ಸೈಕಲ್ ಜಾಥಾಗೆ ಹಳೇ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಚಾಲನೆ ನೀಡಿದರು.

ಈ ಜಾಥಾಗೆ ನಗರದ ಸೈಕ್ಲಿಂಗ್ ಹಾಗೂ ಕ್ರೀಡಾ ಸಂಘಗಳಾದ ಮೈಸೂರು ಅಥ್ಲೀಟ್ಸ್ ಕ್ಲಬ್, ಸೈಕ್ಲೋಪೀಡಿಯಾ, ಮೈಸೂರು ಸೈಕ್ಲಿಂಗ್ ತರಬೇತಿ ಅಕಾಡೆಮಿ, ರಾಯಲ್ ರೈಡರ್ಸ್ ಹಾಗೂ ಯುವಜನ ಮತ್ತು ಸೇವಾ ಕ್ರೀಡಾ ಇಲಾಖೆ ಕೈ ಜೋಡಿಸಿದ್ದು 18 ಮಹಿಳೆಯರನ್ನು ಒಳಗೊಂಡ 75 ಸೈಕಲ್ ಸವಾರರ ತಂಡ ಹಳೆ ಡಿಸಿ ಆಫೀಸ್ ಕಚೇರಿಯ ಮುಂಭಾಗದಿಂದ ಹೊರಟು ಹುಣಸೂರು ರಸ್ತೆ ಮೂಲಕ, ಮೆಟ್ರೋಪೋಲ್ ಸರ್ಕಲ್, ರೈಲ್ವೆ ಸ್ಟೇಷನ್ ಸರ್ಕಲ್‌ನಿಂದ ಎಲ್‌ಐಸಿ ವೃತ್ತ ತಲುಪಿ, ಅಲ್ಲಿಂದ ಗಾಂಧಿನಗರ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸರ್ಕಾರಿ ಅತಿಥಿ ಗೃಹ ಸರ್ಕಲ್‌ನಿಂದ ಬೆಂಗಳೂರು ರಸ್ತೆಯ, ಮೂಲಕ ಅಶೋಕ ರಸ್ತೆ ತಲುಪಿ ಕೊನೆಗೆ ಟೌನ್‌ಹಾಲ್ ವೃತ್ತದಲ್ಲಿ ಸಮಾಪ್ತಿ ಮಾಡಲಾಯಿತು. ಸೈಕ್ಲಿಂಗ್ ಪಟುಗಳು ಜಾಥಾದಲ್ಲಿ ಸುಮಾರು 10 ಕಿಲೋಮೀಟರ್ ದೂರವನ್ನು ಕ್ರಮಿಸಿ ಮೈಸೂರು ನಗರ ಪ್ರದೇಶದಲ್ಲಿ ಸಂಚರಿಸಿ ಸಂವಿಧಾನ ಮಹತ್ವದ ಅರಿವನ್ನು ಮೂಡಿಸುವುದರೊಂದಿಗೆ ವಿವಿಧ ಘೋಷಣೆಗಳನ್ನು ಕೂಗುವುದರ ಮೂಲಕ ಸಾರ್ವಜನಿಕರಲ್ಲಿ ಸಂವಿಧಾನದ ಬಗ್ಗೆ ಜಾಗೃತಿ ಉಂಟು ಮಾಡಿದರು. ಸಂವಿಧಾನದ ಮಹತ್ವ ಸಾರುವ ಅರಿವು ಮೂಡಿ ಸುವ ಸಂದೇಶವನ್ನು ಸಾರಿದರು.

ಈ ಸಂದರ್ಭದಲ್ಲಿ ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ (ಆಡಳಿತ) ಜಿ.ಎಸ್. ಸೋಮಶೇಖರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, 2021ನೇ ಸಾಲಿನ 'ಮಿಸ್ ಗ್ಲಾಮರಸ್ ಕ್ವೀನ್ ಆಫ್ ಇಂಡಿಯಾ' ಗೌರವಕ್ಕೆ ಭಾಜನರಾದ ಕುಮಾರಿ ತನಿಷ್ಕಾ ಮೂರ್ತಿ, ಮೈಸೂರಿನ ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಉಪ ಆಯುಕ್ತ ಹಿರಿಯ ಸೈಕಲ್ ಪಟು ರಮೇಶ್ ನರಸಯ್ಯ ಹಾಗೂ ವೀಣಾ ಅಶೋಕ್ ಉಪಸ್ಥಿತರಿದ್ದರು.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಸ್ಥಗಿತದ ಗಡುವನ್ನು ಮಾ.15ಕ್ಕೆ ವಿಸ್ತರಿಸಿದ ಆರ್‌ಬಿಐ

ಹೊಸದಿಲ್ಲಿ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಕಾರ್ಯಚಟುವಟಿಕೆಗಳ ಸ್ಥಗಿತಕ್ಕೆ ಮುಂದಾಗಿರುವ ಬೆನ್ನಲ್ಲೇ ಪೇಮೆಂಟ್ಸ್ ಬ್ಯಾಂಕ್‌ನ ಕಾರ್ಯಚಟುವಟಿಕೆಗಳ ಸ್ಥಗಿತಕ್ಕೆ ವಿಧಿಸಲಾಗಿದ್ದ ಗಡುವನ್ನು ಮಾರ್ಚ್ 15ಕ್ಕೆ ವಿಸ್ತರಿಸಿದೆ.

ಇದಕ್ಕೂ ಮುನ್ನ ಫೆ. 29ರ ಒಳಗಾಗಿ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ಕಾರ್ಯಚಟುವಟಿಕೆಗಳನ್ನು ಸಂಪೂರ್ಣವಾಗಿ ಬಂದ್ ಮಾಡುವಂತೆ ಆರ್‌ಬಿಐ ಗಡುವು ವಿಧಿಸಿತ್ತು. ಇದೇ ವೇಳೆ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ತನ್ನ ಗ್ರಾಹಕರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಗಡುವು ವಿಸ್ತರಣೆಗೆ ಮನವಿ ಸಲ್ಲಿಸಿತ್ತು. ಅನೇಕ ಮಂದಿ ಗ್ರಾಹಕರು ಬ್ಯಾಂಕ್‌ನಲ್ಲಿ ಸ್ಯಾಲರಿ ಖಾತೆ ಹೊಂದಿದ್ದಾರೆ. ಅಲ್ಲದೆ ಸರಕಾರಿ ಸಬ್ಸಿಡಿಗಳಿಗೂ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಖಾತೆ ಸಂಪರ್ಕ ನೀಡಲಾಗಿದೆ. ಇವರೆಲ್ಲರೂ ಬದಲಿ ವ್ಯವಸ್ಥೆ ಮಾಡಿಕೊಡಲು ಗಡುವು ವಿಸ್ತರಣೆಯ ಅಗತ್ಯವಿದೆ ಎಂದು ಪೇಟಿಎಂ ಪ್ರತಿಪಾದಿಸಿತ್ತು

ಫಾಸ್ಟ್‌ಟ್ಯಾಗ್ ಗೊಂದಲ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ)ದ ಸಂಸ್ಥೆಯಾದ ಇಂಡಿಯನ್ ಹೈವೇ ಮ್ಯಾನೇಜ್‌ಮೆಂಟ್ ಕಂಪನಿ (ಐಎಚ್‌ಎಂಸಿಎಲ್) ತನ್ನ ನೋಂದಾಯಿತ ಬ್ಯಾಂಕ್‌ಗಳ ಪಟ್ಟಿಯಿಂದ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಅನ್ನು ತೆಗೆದುಹಾಕಿದೆ.

ಈ ಸಂಬಂಧ ಎಕ್ಸ್‌ನಲ್ಲಿ 32 ಬ್ಯಾಂಕ್‌ಗಳ ಪಟ್ಟಿಯನ್ನು ಬಿಡುಗಡೆ ಮಾಡಿರುವ ಐಎಚ್‌ಎಂಸಿಎಲ್, 'ಫಾಸ್ಟ್‌ಟ್ಯಾಗ್‌ನೊಂದಿಗೆ ತೊಂದರೆಯಿಲ್ಲದೆ ಪ್ರಯಾಣಿಸಿ, ಕೆಳಗೆ ನೀಡಲಾದ ಅಧಿಕೃತ ಬ್ಯಾಂಕ್‌ಗಳಿಂದ ಇಂದೇ ನಿಮ್ಮ ಫಾಸ್ಟ್‌ಟ್ಯಾಗ್ ಅನ್ನು ಖರೀದಿಸಿ' ಎಂದು ಸಲಹೆ ನೀಡಿದೆ.

ಅಲ್ಲದೆ ಆರ್‌ಬಿಐ ನಿರ್ಬಂಧದ ಹಿನ್ನೆಲೆಯಲ್ಲಿ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಜೊತೆ ಸಹಯೋಗ ಹೊಂದಿರುವ ಫಾಸ್ಟ್‌ಟ್ಯಾಗ್ ಮಾರ್ಚ್ 15ರ ನಂತರ ನಿಷ್ಕ್ರಿಯಗೊಳ್ಳಲಿದೆ. ಬಳಕೆದಾರರು ಇತರೆ ಬ್ಯಾಂಕ್‌ಗಳಿಂದ ಫಾಸ್ಟ್‌ಟ್ಯಾಗ್ ಪಡೆದುಕೊಳ್ಳಬಹುದಾಗಿದೆ. ಈಗಾಗಲೇ ಇತರೆ ಬ್ಯಾಂಕ್‌ಗಳ ಜೊತೆಗೆ ಸಹಯೋಗ ಹೊಂದಿರುವ ಫಾಸ್ಟ್‌ಟ್ಯಾಗ್‌ಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ.

ಆಕ್ಸಿಸ್ ಬ್ಯಾಂಕ್‌ನೊಂದಿಗೆ ಪೇಟಿಎಂ ಪಾಲುದಾರಿಕೆ

ವ್ಯಾಪಾರಿ ಪಾವತಿಗಳ ಇತ್ಯರ್ಥಕ್ಕಾಗಿ ಆಕ್ಸಿಸ್ ಬ್ಯಾಂಕ್‌ನೊಂದಿಗೆ ಪಾಲುದಾರಿಕೆ ಹೊಂದಿರುವುದಾಗಿ ಪೇಟಿಎಂ ಹೇಳಿದೆ. ಒನ್97 ಕಮ್ಯುನಿಕೇಷನ್ಸ್ ತನ್ನ ನೋಡಲ್ ಖಾತೆಯನ್ನು ಆಕ್ಸಿಸ್ ಬ್ಯಾಂಕ್‌ಗೆ ವರ್ಗಾಯಿಸಿದ್ದು, ಆ ಬ್ಯಾಂಕ್‌ನಲ್ಲಿ ಎಸ್ಕ್ರೊ ಖಾತೆಯನ್ನು ತೆರೆಯಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಪೇಟಿಎಂ ಹೇಳಿದೆ.

ಫೆ.21ರಿಂದ ಬೇವಿನಮರದ ಶ್ರೀ ಯಲ್ಲಮ್ಮನವರ ವಾರ್ಷಿಕ ಮಹೋತ್ಸವ



ಮೈಸೂರು,ಫೆ.17–ಮೈಸೂರಿನ ಕೃಷ್ಣರಾಜ ಮೊಹಲ್ಲಾ, ನಾಲಾ ಬೀದಿಯಲ್ಲಿರುವ ಕೆ.ಆರ್.ಯಲ್ಲಪ್ಪರಾಯರ ಬೇವಿನಮರದ ಶ್ರೀ ಯಲ್ಲಮ್ಮನವರ 76ನೇ ವರ್ಷದ ಮಹೋತ್ಸವ ಫೆ.21ರಿಂದ 25ರವರೆಗೆ ನಡೆಯಲಿದೆ.

ಫೆ.21ರಂದು ಬೆಳಗ್ಗೆ 11.30ರಿಂದ ಮೇಷ ಲಗ್ನದಲ್ಲಿ ದೇವಿಗೆ ಅರಿಶಿನ, ಕುಂಕುಮ ಲೇಪನ; ಫೆ.22ರಂದು ಬೆಳಗ್ಗೆ 10ರಿಂದ ಕಲಶ ಸ್ಥಾಪನಾ ಪೂರ್ವಕ ಆರಂಭವಾಗುವ ವಾರ್ಷಿಕ ಪೂಜೆಯಲ್ಲಿ ಅಭಿಷೇಕ, ಗಣಪತಿ ಹೋಮ, ನವಗ್ರಹ ಹೋಮ, ವಾಸ್ತು ಹೋಮ, ಮಹಾಮಂಗಳಾರತಿ, ಪ್ರಸಾದ ವಿನಿಯೋಗವಿದೆ. ಸಂಜೆ 5 ಗಂಟೆಗೆ ದುರ್ಗಾ ಸಪ್ತಶತಿ ಪಾರಾಯಣವಿದೆ.

ಫೆ.23ರಂದು ಬೆಳಗ್ಗೆ 7 ಗಂಟೆಗೆ ಕಲಶ ಸ್ಥಾಪನೆ, ಬೆ. 9 ಗಂಟೆಗೆ ಚಂಡಿಕಾಯೋಮ, ಮ. 12.30ರ ಗಂಟೆಗೆ ಪೂರ್ಣಾಹುತಿ ನಂತರ ಪ್ರಸಾದ ವಿನಿಯೋಗವಿದೆ. ಸಂಜೆ 5 ಗಂಟೆಗೆ ದೇವರನಾಮವಿದೆ.

ಫೆ.24ರಂದು ವ್ಯಾಸ ಹುಣ್ಣಿಮೆ ಅಂಗವಾಗಿ ಬೆಳಗ್ಗೆ ಪೂಜೆ, ಮಹಾಭಿಷೇಕ, ಮ. 12 ಗಂಟೆಗೆ ಮಹಾಮಂಗಳಾರತಿ, ಸಂಜೆ 7 ಗಂಟೆಗೆ ಶ್ರೀ ಯಲ್ಲಮ್ಮ ದೇವರ ಉತ್ಸವವು ನಾಲಾಬೀದಿಯಿಂದ ಹೊರಟು ಸುಣ್ಣದಕೇರಿ ಮಾರ್ಗವಾಗಿ ನೂರಡಿ ರಸ್ತೆ, ತ್ಯಾಗರಾಜ ರಸ್ತೆ, ವಾಣಿವಿಲಾಸ ವೃತ್ತದಿಂದ ಹಿಂತಿರುಗಿ ಸ್ವಸ್ಥಾನಕ್ಕೆ ಬಂದು ಸೇರುವುದು. ಅನಂತರ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಫೆ.25ರಂದು ಬೆಳಗ್ಗೆ 9.30 ಗಂಟೆಗೆ ಮಹಾಪೂಜೆ, ಕಲಶ ವಿಸರ್ಜನೆ, ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ನಡೆಯಲಿದೆ. ಮಾಹಿತಿಗೆ ಮೊ. 7760231551, 9738758142 ಸಂಪರ್ಕಿಸಬಹುದು.

ನಾನು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲ್ಲ; ಸಚಿವನಾಗೇ ಮುಂದುವರೆಯುತ್ತೇನೆ

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸ್ಪಷ್ಟನೆ



ಬೆಂಗಳೂರು, ಫೆ.17(ಕೆಎಂಶಿ)–ನಾನು ಲೋಕಸಭಾ ಚುನಾವಣೆಗೆ ಸ್ಪರ್ಧಿಸಲ್ಲ. ಸಚಿವನಾಗಿಯೇ ಮುಂದುವರೆಯುತ್ತೇನೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿದ್ದ ಭಾರತ ಸಂವಿಧಾನ ಹಾಗೂ ರಾಷ್ಟ್ರೀಯ ಐಕ್ಯತಾ ಸಮಾವೇಶಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೂಡಿ ಸುದ್ದಿಗೋಷ್ಠಿ ನಡೆಸಿದ ಸಂದರ್ಭದಲ್ಲಿ, ಕೇಂದ್ರ ರಾಜಕಾರಣದಿಂದ ತಾವು ದೂರ ಎಂದರು.

ಚುನಾವಣಾ ಕಣಕ್ಕಿಳಿಯುವುದಿಲ್ಲ, ಪಕ್ಷದ ವರಿಷ್ಠರು ಯಾರನ್ನೇ ಅಭ್ಯರ್ಥಿಯನ್ನಾಗಿ ಮಾಡಿದರೂ ಅವರ ಗೆಲುವಿಗೆ ಶ್ರಮಿಸುತ್ತೇನೆ. ವರಿಷ್ಠರು ಈ ಬಗ್ಗೆ ನನಗೇನೂ ಮಾಹಿತಿ ನೀಡಿಲ್ಲ. ಆದರೂ ನನ್ನ ನಿರ್ಧಾರವನ್ನು ಮೊದಲೇ ತಿಳಿಸುತ್ತಿದ್ದೇನೆ ಎಂದರು. ಮಹದೇವಪ್ಪ ಅವರ ಹೇಳಿಕೆಗೆ ಸ್ಥಳದಲ್ಲಿ ಉಪಸ್ಥಿತರಿದ್ದ ಮುಖ್ಯಮಂತ್ರಿ ಅವರು ಯಾವುದೇ ರೀತಿಯ ಪ್ರತಿಕ್ರಿಯೆ ತೋರಲಿಲ್ಲ.

ಇವರನ್ನು ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದಿಂದ ಕಣಕ್ಕಿಳಿಸಬೇಕೆಂದು ಕೆಪಿಸಿಸಿ ಆಸಕ್ತಿ ತೋರಿದೆ. ಇವರೂ ಸೇರಿದಂತೆ ಕೆಲವು ಸಚಿವರ ಬಗ್ಗೆ ಎಐಸಿಸಿಗೆ ಮಾಹಿತಿ ನೀಡಿರುವ ಕೆಪಿಸಿಸಿ, ಹೆಚ್ಚು ಸ್ಥಾನಗಳನ್ನು ಗೆಲ್ಲುವ ದೃಷ್ಟಿಯಿಂದ ಕೆಲವು ಸಚಿವರನ್ನು ಕಣಕ್ಕಿಳಿಸಬೇಕೆಂಬ ಅಭಿಪ್ರಾಯ ನೀಡಿದೆ

ಗ್ಯಾರಂಟಿಗಳಿಗೆ ಆದ್ಯತೆ ನೀಡಿರುವ ಬಜೆಟ್

ಭಾರತ ಕಮ್ಯೂನಿಸ್ಟ್ ಪಕ್ಷ(ಎಂ) ರಾಜ್ಯ ಸಮಿತಿ ಸದಸ್ಯ ವಾಗ್ದಾಳಿ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಸದಸ್ಯರಾದ ಡಾ.ಎಸ್.ವೈ. ಗುರುಶಾಂತ್.

ವಿರಾಜಪೇಟೆ, ಫೆ.17–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2024–25ನೇ ಸಾಲಿನ ಬಜೆಟ್‌ನಲ್ಲಿ ಕಾಂಗ್ರೆಸ್ ಪಕ್ಷ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜನತೆಗೆ ನೀಡಿದ ಭರವಸೆಯ ಐದು ಗ್ಯಾರಂಟಿಗಳ ಜಾರಿಗೆಗೆ ಆದ್ಯತೆ ನೀಡಿದಂತಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಸದಸ್ಯರಾದ ಡಾ.ಎಸ್.ವೈ. ಗುರುಶಾಂತ್ ತಿಳಿಸಿದರು.

ಜಿಲ್ಲಾ ಸಂಘಟನಾ ಸಮಿತಿ ಸಿಪಿಐ(ಎಂ) ಸಂಘಟನೆ ವತಿಯಿಂದ ಪಕ್ಷದ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಕೃಷಿಕರು ಬೇಯುತ್ತಿರುವ ಬರಗಾಲದಲ್ಲಿರುವಾಗ ಸರಕಾರ ಅಸಹಕಾರ ಮತ್ತು ತಾರತಮ್ಯ ನೀತಿ ಅನುಸರಿಸುತ್ತಿದೆ. ದುಡಿಯುವ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ನೀಡಬೇಕಾದ ಮಹತ್ವ ಮತ್ತು ಪಾಲು ನೀಡಿಲ್ಲ ಎಂದರು.

ಅನೇಕ ಮೂಲ ನಿವಾಸಿಗಳು ಮನೆ, ನಿವೇಶನ ಸೇರಿದಂತೆ ಮೂಲ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಅವರ ಅಭಿವೃದ್ಧಿಗೆ ಸರಕಾರ ಹೆಚ್ಚು ಗಮನಹರಿಸಬೇಕು, ಬಿಸಿಯೂಟ ನೌಕರರಿಗೆ ಅಂಗನವಾಡಿ, ಆಶಾ ಕಾರ್ಯಕರ್ತರಿಗೆ, ವಿದ್ಯಾರ್ಥಿನಿಲಯ ಮತ್ತು ಸಂಜೀವಿನಿ ನೌಕರರಿಗೆ ನೀಡಿದ ಭರವಸೆಯಂತೆ ವೇತನ ಹೆಚ್ಚಳಕ್ಕೆ ಬಜೆಟ್‌ನಲ್ಲಿ ಗಮನ ನೀಡದಿರುವುದು, ಮುನಿಸಿಪಲ್ ಗುತ್ತಿಗೆ ಕಾರ್ಮಿಕರ ನೇರಪಾವತಿ ಸಮಾನ ವೇತನದ ಬಗ್ಗೆ ನಿರ್ಲಕ್ಷಿಸಿರುವುದು ಸರಿಯಲ್ಲ ಎಂದರು.

ಸಿಪಿಐ(ಎಂ) ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ.ರಮೇಶ್ ಮಾತನಾಡಿ ಕೇಂದ್ರ ಸರಕಾರ ಉಳ್ಳವರ ಪಾಲಾಗಿದೆ. ಹೆಚ್ಚುತ್ತಿರುವ ದಿನೋಪಯೋಗಿ ಸಾಮಾಗ್ರಿಗಳ ಬೆಲೆ ನಿಯಂತ್ರಿಸಲು ಮುಂದಾಗಿಲ್ಲ. ಡೀಜಲ್, ಪೆಟ್ರೋಲ್, ಅಡಿಗೆ ಅನಿಲಗಳ ಬೆಲೆಯನ್ನು ಹೆಚ್ಚಿಸಿರುವುದರಿಂದ ಬಡ ಕಾರ್ಮಿಕ ಕುಟುಂಬಗಳು ಸಂಕಷ್ಟದಲ್ಲಿವೆ ಎಂದು ದೂರಿದರು. ಗೋಷ್ಠಿಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಎ.ಸಿ.ಸಾಬು, ಪದ್ಮಿನಿ ಶ್ರೀಧರ್ ಉಪಸ್ಥಿತರಿದ್ದರು.

ವಿದ್ಯುತ್ ಅವಘಡ; ಸಾರ್ವಜನಿಕರಲ್ಲಿ ಮನವಿ

ಮಡಿಕೇರಿ, ಫೆ.17– "ಕೊಡಗು ಜಿಲ್ಲೆಯಾದ್ಯಂತ ವಿದ್ಯುತ್ ವಿತರಣೆಗೆ ನಿರ್ಮಿಸಿರುವ ಮಾರ್ಗಗಳ ಬಹುಭಾಗ ತೋಟಗಳಲ್ಲಿಯ ಮರಗಿಡಗಳ ಮಧ್ಯದಲ್ಲಿ ಹಾದು ಹೋಗಿದ್ದು, ಮರಗಳ ರೆಂಬೆ ಕೊಂಬೆಗಳ ಬೀಳುವಿಕೆಯಿಂದಾಗಿ ಕಂಬಗಳು ಬಾಗಿ, ತಂತಿಗಳು ಕೆಳಮಟ್ಟಕ್ಕಿಳಿದು ಇದರಿಂದಾಗಿ ವಿದ್ಯುದಾಘಾತಗಳಾಗುವ ಸಂಭವವಿದೆ. ಆದ್ದರಿಂದ, ಅಪಾಯ ಮಟ್ಟದಲ್ಲಿರುವ ವಿದ್ಯುತ್ ತಂತಿಗಳು, ಶಿಥಿಲಗೊಂಡಿರುವ ಕಂಬಗಳು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾರ್ವಜನಿಕರು ದೂರು ನೀಡಲು ಕೋರಲಾಗಿದೆ.

ತೋಟಗಳಲ್ಲಿ ಕಾಳುಮೆಣಸು ಕೀಳಲು ಮತ್ತು ಮರದ ಕೊಂಬೆಗಳನ್ನು ಕಡಿಯಲು ಅಲ್ಯೂಮಿನಿಯಂ ಏಣಿಗಳನ್ನು ಮತ್ತು ನೀರು ಹಾಯಿಸಲು ಅಲ್ಯೂಮಿನಿಯಂ ಸ್ಪ್ರಿಂಕ್ಲರ್ ಪೈಪ್‌ಗಳನ್ನು ಉಪಯೋಗಿಸುತ್ತಿದ್ದು, ಇವುಗಳು ವಿದ್ಯುತ್ ಮಾರ್ಗಕ್ಕೆ ತಾಗಿ ಆಗಿಂದಾಗ್ಗೆ ವಿದ್ಯುತ್ ಅಪಘಾತಗಳು ಸಂಭವಿಸುತ್ತಿದೆ. ಅದ್ದರಿಂದ, ಅಲ್ಯೂಮಿನಿಯಂ/ ಕಬ್ಬಿಣದ ಏಣಿ ಬದಲು ಬಿದಿರು/ ಫೈಬರ್ ಏಣಿಗಳನ್ನೇ ಉಪಯೋಗಿಸಿ ವಿದ್ಯುತ್ ಅಪಘಾತಗಳನ್ನು ತಡೆಗಟ್ಟಲು ಇಲಾಖೆಯೊಂದಿಗೆ ಸಹಕರಿಸುವಂತೆ ಸಾರ್ವಜನಿಕರಲ್ಲಿ ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅನಿತಾ ಬಾಯಿ ಅವರು ಕೋರಿದ್ದಾರೆ.

ಜಿಲ್ಲಾಡಳಿತದಿಂದ 'ಕರ್ನಾಟಕ ಸಾಂಸ್ಕೃತಿಕ ನಾಯಕ' ಬಸವೇಶ್ವರರ ಭಾವಚಿತ್ರ ಅನಾವರಣ

ವಿಶ್ವಗುರು ಬಸವಣ್ಣ ಸಾಮಾಜಿಕ ಕ್ರಾಂತಿಯ ಹರಿಕಾರ: ಗಣ್ಯರ ಅಭಿಮತ



ಪುಷ್ಪಾರ್ಚನೆ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಡಿಸಿ ವೆಂಕಟ್ ರಾಜಾ.

ಮಡಿಕೇರಿ, ಫೆ.17– 'ಕರ್ನಾಟಕ ಸಾಂಸ್ಕೃತಿಕ ನಾಯಕ' ವಿಶ್ವಗುರು ಶ್ರೀ ಜಗಜ್ಯೋತಿ ಬಸವೇಶ್ವರರ ಭಾವಚಿತ್ರವನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ನಗರದ ಗಾಂಧಿ ಭವನದಲ್ಲಿ ಶನಿವಾರ ಅನಾವರಣ ಮಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಕಾರದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಬಸವೇಶ್ವರರ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿದ ಅವರು ಗೌತಮ ಬುದ್ಧ ನಂತರ ಬಸವೇಶ್ವರರು ರಾಷ್ಟ್ರದಲ್ಲಿ ಸಾಮಾಜಿಕ ಕ್ರಾಂತಿ ಉಂಟು ಮಾಡಿದರು ಎಂದರು.

12ನೇ ಶತಮಾನದಲ್ಲಿ ಕಾಯಕ ಜೀವಿಗಳ ಚಳುವಳಿಯ ಮೂಲಕ ಸಾಮಾಜಿಕ ಕ್ರಾಂತಿಯನ್ನೇ ನಡೆಸಿ ವಚನಗಳ ಮೂಲಕ ಜಾಗೃತಿ ಮೂಡಿಸಿದ ಬಸವೇಶ್ವರರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಸರ್ಕಾರ ಘೋಷಿಸಿರುವುದು ವಿಶೇಷವಾಗಿದೆ ಎಂದು ಹೇಳಿದರು.

ಕೊಪ್ಪ ಭಾರತ ಮಾತಾ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಜ್ಞಾನೇಶ್ ಅವರು ಮಾತನಾಡಿ ಬಸವ ಪಥಕ್ಕೆ ಅಗ್ರಸ್ಥಾನ ನೀಡಲು ಸರ್ಕಾರ ತೀರ್ಮಾನಿಸಿರುವುದು ವಿಶೇಷವಾಗಿದೆ. ಬಸವೇಶ್ವರರು ಕನ್ನಡ ನಾಡಿನ ಸಂಸ್ಕೃತಿ ಪ್ರತಿಪಾದಿಸಿದ ಮೌಲ್ಯಗಳ ರೂಪಕ. ಬಸವಣ್ಣನವರ ಕತೃತ್ವ ಶಕ್ತಿಯಿಂದ ರೂಪುಗೊಂಡ ವಚನಕಾರರ ಅನುಭವ ಮಂಟಪ ಇಂದಿನ ಪ್ರಜಾಪ್ರಭುತ್ವದ ಅಡಿಗಲ್ಲೇ ಆಗಿದೆ. ನಾಡಿನ ಸಾಂಸ್ಕೃತಿಕ, ಸಾಹಿತ್ಯಕ, ಪರಂಪರೆ ವಿಶ್ವಕ್ಕೆ ಕೊಡುಗೆ ನೀಡಿರುವ ವಿಶ್ವ ಮಾನವ ಪರಂಪರೆಯ ಬಹುಮುಖ್ಯವಾದ ಕೊಂಡಿಯಾಗಿದ್ದಾರೆ ಎಂದು ನುಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ.ವಿಶಾಲ್ ಕುಮಾರ್, ಸೆಸ್ಕ್ ಇಇ ಅನಿತಾ ಬಾಯಿ, ಐಟಿಡಿಪಿ ಅಧಿಕಾರಿ ಹೊನ್ನೇಗೌಡ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಶೇಖರ್, ಜಿಲ್ಲಾ ಖಜಾನಾಧಿಕಾರಿ ರಘುನಾಥ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ, ಲೋಕೋಪಯೋಗಿ ಇಲಾಖೆಯ ಇಇ ಸಿದ್ದೇಗೌಡ, ಸೈನಿಕ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಬಾಲಸುಬ್ರಹ್ಮಣ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಪುಟ್ಟರಾಜು, ಪೌರಾಯುಕ್ತರಾದ ವಿಜಯ್, ಜಿಲ್ಲಾ ಕಾರ್ಮಿಕ ಅಧಿಕಾರಿ ಹರ್ಷವರ್ಧನ್, ಎಂ.ಎಂ.ಯತ್ನಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಾದ ನಟರಾಜು, ಜಿ.ಪಂ.ಇಇ ಮುತ್ತುರಾಜ್, ಸುರೇಶ್ ಕುಮಾರ್, ಪಶು ವೈದ್ಯಕೀಯ ಇಲಾಖೆಯ ಸಹಾಯಕ ನಿರ್ದೇಶಕರಾದ ಪ್ರಸನ್ನ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ಅನಿತಾ ಭಾಸ್ಕರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಶಿಕ್ಷಣಾಧಿಕಾರಿ ಮಹದೇವಸ್ವಾಮಿ, ಕೃಷ್ಣಪ್ಪ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ನಾರಾಯಣ, ಇತರರು ಇದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಚಿನ್ನಸ್ವಾಮಿ ಸ್ವಾಗತಿಸಿದರು. ಮೈಸೂರಿನ ರಾಘವೇಂದ್ರ ತಂಡದವರು ವಚನ ಗಾಯನ ನಡೆಸಿಕೊಟ್ಟರು. ಮಣಜೂರು ಮಂಜುನಾಥ್ ನಿರೂಪಿಸಿ, ವಂದಿಸಿದರು.

ಫೆ.28, ನಗರಸಭೆ ಆಯವ್ಯಯ ಸಂಬಂಧ ಪೂರ್ವಭಾವಿ ಸಭೆ

ಮಡಿಕೇರಿ,ಫೆ.17– ನಗರಸಭೆಯ 2024–25ನೇ ಸಾಲಿನ ಆಯವ್ಯಯ ತಯಾರಿಸುವ ಸಲುವಾಗಿ ಆದಾಯ ಮತ್ತು ಖರ್ಚುಗಳ ಬಗ್ಗೆ ಸೂಕ್ತ ಸಲಹೆ ಸೂಚನೆ ಪಡೆಯಲು ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ ಅವರ ಅಧ್ಯಕ್ಷತೆಯಲ್ಲಿ ಫೆ.28 ರಂದು ಮಧ್ಯಾಹ್ನ 3.30 ಗಂಟೆಗೆ ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ.

ಸಭೆಗೆ ಹಿರಿಯ ನಾಗರಿಕರು, ನೋಂದಾಯಿತ ಸಂಘ ಸಂಸ್ಥೆಗಳು, ಎನ್‌ಜಿಒಗಳು ಮತ್ತು ಮಾಜಿ ಚುನಾಯಿತ ಸ್ಥಳೀಯ ಸಂಸ್ಥೆಯ ಜನಪ್ರತಿನಿಧಿಗಳು ಹಾಗೂ ಆಸಕ್ತಿಯುಳ್ಳ ಸಾರ್ವಜನಿಕರು ಹಾಜರಾಗಿ ತಮ್ಮ ಸೂಕ್ತ ಸಲಹೆ ಸೂಚನೆಗಳನ್ನು ನೀಡುವಂತೆ ಎಂದು ನಗರಸಭೆ ಪೌರಾಯುಕ್ತರಾದ ವಿಜಯ್ ಅವರು ಕೋರಿದ್ದಾರೆ.

ನಾಳೆ ಅಭಿನಂದನಾ ಕಾರ್ಯಕ್ರಮ

ಮಡಿಕೇರಿ,ಫೆ.17– ಇತ್ತೀಚೆಗೆ ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯಿ)ದಲ್ಲಿ ನಡೆದ ಆಲ್ ಇಂಡಿಯಾ ಇಂಟರ್ ಸಾಯಿ ಹಾಕಿ ಪಂದ್ಯಾವಳಿ–2024 ರಲ್ಲಿ ಮಡಿಕೇರಿ ನಗರದ ಭಾರತೀಯ ಕ್ರೀಡಾ ಪ್ರಾಧಿಕಾರ(ಸಾಯಿ)ದ 19 ವಿದ್ಯಾರ್ಥಿನಿಯರು ಪಾಲ್ಗೊಂಡು ಚಿನ್ನದ ಪದಕ ಪಡೆದಿದ್ದಾರೆ.

ಈ ವಿದ್ಯಾರ್ಥಿನಿಯರಿಗೆ ಅಭಿನಂದಿಸುವ ಕಾರ್ಯಕ್ರಮವು ಫೆ.19 ರಂದು ಸಂಜೆ 4.30 ಗಂಟೆಗೆ ನಗರದ ಭಾರತೀಯ ಕ್ರೀಡಾ ಪ್ರಾಧಿಕಾರದ(ಸಾಯಿ) ವಿದ್ಯಾರ್ಥಿ ನಿಲಯದಲ್ಲಿ ನಡೆಯಲಿದೆ. ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಇತರರು ಪಾಲ್ಗೊಳ್ಳಲಿದ್ದಾರೆ ಎಂದು ಸಾಯಿ ಮೇಲ್ವಿಚಾರಕರಾದ ಮಿನಿ ಉಣ್ಣಿರಾಜ್ ಅವರು ತಿಳಿಸಿದ್ದಾರೆ.

ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳ ಸಾಧನೆ



ಇತ್ತೀಚೆಗೆ ಧಾರವಾಡದಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಸಂತ ಮೈಕಲರ ಪ್ರೌಢಶಾಲೆಯ ವಿದ್ಯಾರ್ಥಿಗಳು ಕೊಡಗು ಜಿಲ್ಲೆಯನ್ನು ಪ್ರತಿನಿಧಿಸಿ ಪ್ರಶಂಸೆಗೆ ಪಾತ್ರರಾಗಿದ್ದು, ಅವರನ್ನು ಅಭಿನಂದಿಸಲಾಯಿತು.

ಮಡಿಕೇರಿ,ಫೆ.17– ಇತ್ತೀಚೆಗೆ ಧಾರವಾಡದಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಸಂತ ಮೈಕಲರ ಪ್ರೌಢಶಾಲೆಯ ವಿದ್ಯಾರ್ಥಿಗಳು ಕೊಡಗು ಜಿಲ್ಲೆಯನ್ನು ಪ್ರತಿನಿಧಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಸಾಮೂಹಿಕ ಜಾನಪದ ನೃತ್ಯ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಾದ ಮೌಲ್ಯ, ಗಾನ, ಸಂಜನಾ, ಅನುಷ್ಕ, ಶ್ರೇಯಸ್, ಹರ್ಷವರ್ಧನ್, ನೀಲ್, ಪೂವಯ್ಯ ಭಾಗವಹಿಸಿದ್ದರು. ಹಿಂದಿ ಭಾಷಣ ಸ್ಪರ್ಧೆಯಲ್ಲಿ ಸೌಮ್ಯ ಭಾಗವಹಿಸಿದ್ದರು.

ಅಲ್ಲದೆ, ಶಿವಮೊಗ್ಗದಲ್ಲಿ ನಡೆದ ರಾಜ್ಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಅಲೆನ್ ಥೋಮಸ್ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಈ ವಿದ್ಯಾರ್ಥಿಗಳಿಗೆ ಶಿಕ್ಷಕರಾದ ಪುನೀತ್, ಶಾರದ, ಸವರಿನ್ ಡಿಸೋಜ, ಸಂಕೇತ್ ತರಬೇತಿ ನೀಡಿದ್ದಾರೆ. ಅಧಿಕಾರಿ, ಶಿಕ್ಷಕರು, ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾದ ಈ ವಿದ್ಯಾರ್ಥಿಗಳನ್ನು ಸಂತ ಮೈಕಲರ ವಿದ್ಯಾ ಸಂಸ್ಥೆ ವತಿಯಿಂದ ಅಭಿನಂದಿಸಲಾಯಿತು.

ಫೆ.21ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ

ಮಡಿಕೇರಿ, ಫೆ.17– ಕೊಡವ ಭಾಷೆಯನ್ನು ಸಂವಿಧಾನದ 8ನೇ ಶೆಡ್ಯೂಲ್‌ಗೆ ಸೇರಿಸಬೇಕು ಎಂದು ಒತ್ತಾಯಿಸಿ ಅಂತಾರಾಷ್ಟ್ರೀಯ ಮಾತೃಭಾಷಾ ದಿನವಾದ ಫೆ.21ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ಕಚೇರಿ ಎದುರು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಧರಣಿ ನಡೆಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಕೊಡವ ಭಾಷೆ, ಪ್ರಕೃತಿಯ ಆರಾಧಕರಾಗಿರುವ ಆದಿಮ ಸಂಜಾತ ಕೊಡವರ ಮಾತೃಭಾಷೆಯಾಗಿದ್ದು, ಮಾತೃಭಾಷೆ ಕೊಡವ, ಮಾತೃ ಭೂಮಿ ಕೊಡವ ಲ್ಯಾಂಡ್, ಮಾತೆ ಕಾವೇರಿ ಮತ್ತು ಪ್ರಕೃತಿ ಮಾತೆಯಿಂದ ಕೊಡವ ಜನಜೀವನವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಮಡಿಕೇರಿಯಲ್ಲಿ ವಿಶ್ವ ಕೊಡವಾಲಜಿ ಅಧ್ಯಯನ ಕೇಂದ್ರ ಸ್ಥಾಪಿಸಬೇಕು. ಕೊಡವ ಭಾಷೆಯನ್ನು ವಿಶ್ವಸಂಸ್ಥೆಯ ಅಧಿಕೃತ ಭಾಷೆಗಳಲ್ಲಿ ಒಂದನ್ನಾಗಿ ಮಾಡಬೇಕು ಎಂದು ಧರಣಿ ನಡೆಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

20 ವರ್ಷದಿಂದ ತಲೆಮರೆಸಿಕೊಂಡಿದ್ದ ನಕ್ಸಲ್ ಸುರೇಶ್ ಬಂಧನ

ಚಿಕ್ಕಮಗಳೂರು: 20 ವರ್ಷದಿಂದ ತಲೆ ಮರೆಸಿಕೊಂಡಿದ್ದ ಮೂಡಿಗೆರೆಯ ಅಂಗಡಿ ಗ್ರಾಮದ ನಕ್ಸಲ್ ಸುರೇಶ್ ಎಂಬಾತನನ್ನು ಕೇರಳದ ಕಣ್ಣೂರಿನಲ್ಲಿ ಪೊಲೀಸರು ಬಂಧಿಸಿದ್ದಾರೆ. ಸುರೇಶ್ ಅಲಿಯಾಸ್ ಮಹದೇವ ಮಲೆನಾಡಿನ ನಕ್ಸಲ್ ಚಳುವಳಿಯ ಪ್ರಮುಖ ಪಾತ್ರವಹಿಸಿದ್ದನು. ನಂತರ ತಲೆ ಮರೆಸಿಕೊಂಡಿದ್ದ ಆತ ಕೇರಳದ ಕಣ್ಣೂರಿನ ಅರಣ್ಯದಲ್ಲಿ ಸಿಕ್ಕಿ ಬಿದ್ದಿದ್ದಾನೆ. ಕಾಡಾನೆ ದಾಳಿಯಲ್ಲಿ ಗಾಯಗೊಂಡಿದ್ದ ಸುರೇಶ್‌ನನ್ನು ಮೊದಲು ಚಿಕಿತ್ಸೆ ಕೊಡಿಸಿದ ಅಲ್ಲಿನ ಪೊಲೀಸರು ನಂತರ ವಿಳಾಸ ವಿಚಾರಣೆ ವೇಳೆ ಈತ ನಕ್ಸಲ್ ಎಂದು ತಿಳಿದುಬಂದಿದೆ.

ಕೊಳ್ಳೇಗಾಲ ನಗರಸಭೆಗೆ 89.75 ಲಕ್ಷ ರೂ. ಉಳಿತಾಯ ಬಜೆಟ್

51.74 ಲಕ್ಷ ಆದಾಯ, 50.84 ಲಕ್ಷ ಖರ್ಚಿನಿಂದ ಕೂಡಿದ 89 ಲಕ್ಷ ಉಳಿತಾಯ ಬಜೆಟ್



ಕೊಳ್ಳೇಗಾಲ ನಗರಸಭೆಯ 2024–25ನೇ ಸಾಲಿನ ಬಜೆಟ್‌ಅನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ಮಂಡಿಸಿದರು. ಶಾಸಕ ಎ.ಆರ್.ಕೃಷ್ಣಮೂರ್ತಿ, ಆಯುಕ್ತ ರಮೇಶ್ ಇದ್ದರು

> ನಗರಸಭೆ ಆದಾಯ ಮೂಲ ಹೆಚ್ಚು ಮಾಡುವ ಸಲುವಾಗಿ ಪಟ್ಟಣದಲ್ಲಿ ಮಾರ್ಚ್ ತಿಂಗಳಲ್ಲಿ ಆಸ್ತಿ ಸಮೀಕ್ಷೆ ಕಾರ್ಯ ಮಾಡುವಂತೆ ಪೌರಾಯುಕ್ತರಿಗೆ ಸೂಚಿಸಿದ್ದೇನೆ, ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆಯಾಗಿರುವ ಕಟ್ಟಡಗಳು ಶೆಡ್‌ಗಳಿಗೆ ತೆರಿಗೆ ನಿಗದಿ ಪಡಿಸುವ ಕಾರ್ಯ ಆಗಬೇಕಿದೆ. ಡಾ.ರಾಜ್‌ಕುಮಾರ್ ಮತ್ತು ಅಂಬೇಡ್ಕರ್ ರಸ್ತೆ ಅಗಲೀಕರಣದ ಬಗ್ಗೆ ತಿಳಿಸಿದ್ದು ಈ ಬಗ್ಗೆ ಗಮನ ಹರಿಸುತ್ತೇನೆ, ಉತ್ತಮ ಸಲಹೆ ನೀಡಿದ್ದೀರಿ, ಎಲ್ಲರು ಒಟ್ಟಾಗಿ ಸೇರಿ ಪಟ್ಟಣವನ್ನು ಅಭಿವೃದ್ಧಿ ಪಡಿಸೋಣ, ಕೊಳ್ಳೇಗಾಲ ಪಟ್ಟಣವನ್ನು ಸ್ವಚ್ಛ ಭಾರತ್ ಮಿಷನ್‌ನಿಂದ ನ್ಯಾಷನಲ್ ಅವಾರ್ಡ್ ಪಡೆಯುವ ನಿಟ್ಟಿನಲ್ಲಿ ಸ್ವಚ್ಛತಾ ಕಾರ್ಯಗಳು ಹಾಗೂ ಘನ ತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ಮಾಡೋಣ. ಮಲೆ ಮಹದೇಶ್ವರ ಬೆಟ್ಟದಿಂದ ಬರುವ ಯಾತ್ರಿಕರಿಗೆ ತಂಗುದಾಣ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇನೆ
>
> – ಶಿಲ್ಪನಾಗ್, ಜಿಲ್ಲಾಧಿಕಾರಿ.
>
> ---
>
> ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ರಸ್ತೆ ಹಾಗೂ ಡಾ.ರಾಜ್‌ಕುಮಾರ್ ರಸ್ತೆ ಅಗಲೀಕರಣ ಮಾಡುವ ಅಗತ್ಯವಿದೆ ಎಂಬುದು ಎಲ್ಲಾ ಸದಸ್ಯರ ಒಕ್ಕೊರಲ ಅಭಿಪ್ರಾಯವಾಗಿದೆ. ಹಾಗಾಗಿ ಅಗಲೀಕರಣಕ್ಕೆ ಅಗತ್ಯವಿರುವ ವಿಶೇಷ ಅನುದಾನ ತರಲು ಸರಕಾರದ ಗಮನ ಸೆಳೆಯುವ ಕೆಲಸ ಮಾಡುತ್ತೇನೆ, ಈ ನಿಟ್ಟಿನಲ್ಲಿ ಸರ್ಕಾರವೂ ಕೂಡ ಅನುದಾನ ನೀಡಲು ಬದ್ಧವಾಗಿದೆ. ಸಿ.ಎಂ. ಸಿದ್ದರಾಮಯ್ಯನವರು ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವುದಾಗಿ ಹೇಳಿದ್ದಾರೆ, ಆದಾಯ ಮೂಲವನ್ನು ಹೆಚ್ಚಿಸಿಕೊಳ್ಳಲು ಇರುವ ತೊಡಕುಗಳನ್ನು ನಿವಾರಣೆ ಮಾಡಿಕೊಳ್ಳಿ, ಆಡಳಿತಾಧಿಕಾರಿಗಳು ಉತ್ತಮ ಬಜೆಟ್ ಮಂಡಿಸಿದ್ದಾರೆ ಅದನ್ನು ಎಲ್ಲರು ಒಪ್ಪಿರುವುದು ಸಮಾಧಾನ ತಂದಿದೆ.
>
> – ಎ.ಆರ್.ಕೃಷ್ಣಮೂರ್ತಿ, ಶಾಸಕ.

ಕೊಳ್ಳೇಗಾಲ, ಫೆ,17– ಜಿಲ್ಲಾಧಿಕಾರಿಗಳು, ನಗರಸಭೆ ಆಡಳಿತಾಧಿಕಾರಿಗಳು ಆದ ಸಿ.ಟಿ.ಶಿಲ್ಪನಾಗ್ ಅವರು ನಗರಸಭೆ ಸಭಾಂಗಣದಲ್ಲಿ ಶನಿವಾರ ಪ್ರಾರಂಭಿಕ ಶಿಲ್ಕು 17,39,94,529 ಕೋಟಿ ರೂ ಜಮೆಗಳು, 34.34 ಕೋಟಿ ಒಳಗೊಂಡಂತೆ 51,74,27,529 ಕೋಟಿ ರೂ.ಗಳ ಆದಾಯ, 50,84,52 ಕೋಟಿ ರೂ.ಗಳ ಖರ್ಚುನ್ನೊಳಗೊಂಡ 89,75,229 ರೂ. ಗಳ ಉಳಿತಾಯ ಬಜೆಟ್ ಮಂಡಿಸಿ ಗಮನ ಸೆಳೆದರು.

ಜಿಲ್ಲಾಧಿಕಾರಿಗಳು ಬಜೆಟ್ ಮಂಡಿಸುತ್ತಿದ್ದಂತೆ ಕಾಂಗ್ರೆಸ್, ಬಿಜೆಪಿ, ಬಿಎಸ್ಪಿ ಸದಸ್ಯರು ಪಕ್ಷಭೇದ ಮರೆತು ಮೇಜು ಕುಟ್ಟಿ ಬಜೆಟ್‌ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಆಸ್ತಿತೆರಿಗೆಗಳಿಂದ 2,75 ಕೋಟಿ ರೂ, ಕರವಸೂಲಿಯಿಂದ 1 ಕೋಟಿ, ಅಭಿವೃದ್ಧಿ ಶುಲ್ಕ 35 ಲಕ್ಷ, ಉದ್ದಿಮೆ ಪರವಾನಗಿಗಳಿಂದ 20 ಲಕ್ಷ, ಆರೋ ಪ್ಲಾಂಟ್‌ಗಳಿಂದ 30 ಲಕ್ಷ, ಆಸ್ತಿ ತೆರಿಗೆ ಮೇಲಿನ ದಂಡಗಳಿಂದ 1 ಕೋಟಿ ಸೇರಿದಂತೆ ಇತರೆ ಮೂಲಗಳಿಂದ ಒಟ್ಟು 10,26,13,000 ರೂ. ಆದಾಯ ನಿರೀಕ್ಷಿಸಲಾಗಿದೆ.

ಎಸ್‌ಎಫ್‌ಸಿ ವೇತನ ಅನುದಾನ 6.81 ಕೋಟಿ, ಮುಕ್ತ ಅನುದಾನ 1.85ಕೋಟಿ, ಎಸ್‌ಎಫ್‌ಸಿ ವಿದ್ಯುತ್ ಅನುದಾನ 5.62 ಕೋಟಿ, ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ 10 ಲಕ್ಷ ಸ್ವಚ್ಛ ಭಾರತ್ ಮಿಷನ್ ನಿಂದ 90.20 ಲಕ್ಷ, 15ನೇ ಹಣಕಾಸು ಅನುದಾನ 3.85 ಕೋಟಿ, ನಲ್ಮ್ ಅನುದಾನ 20 ಲಕ್ಷ ಎಸ್‌ಎಫ್‌ಸಿ ವಿಶೇಷ ಅನುದಾನ 4 ಕೋಟಿ, ಗೃಹ ಭಾಗ್ಯ ಯೋಜನೆ ಅನುದಾನ 15 ಲಕ್ಷ, ಎಲ್‌ಪಿಎಸ್ ಅನುದಾನ 40 ಲಕ್ಷ, 24/7 ಕುಡಿಯುವ ನೀರು ಯೋಜನೆ ನೌಕವರ ವೇತನ ಅನುದಾನ 20 ಲಕ್ಷ ಸೇರಿದಂತೆ ಒಟ್ಟು 24,80, 20,00 ಅನುದಾನವನ್ನು ನಿರೀಕ್ಷಿಸಲಾಗಿದೆ.

ಅದೇ ರೀತಿಯಲ್ಲಿ ರಸ್ತೆ ಮತ್ತು ಪಾದಚಾರಿ ಮಾರ್ಗಗಳಿಗೆ 2.10 ಕೋಟಿ, ರಸ್ತೆ ಬದಿಯ ಚರಂಡಿಗಳಿಗೆ 1.60 ಕೋಟಿ, ಘನತ್ಯಾಜ್ಯ ವಿಲೇವಾರಿ ಘಟಕ, ಯಂತ್ರೋಪಕರಣಗಳು ಮತ್ತು ವಾಹನ ಖರೀದಿ ಹಾಗು ಇತರೆ ಕಾಮಗಾರಿಗಳು 3.40 ಕೋಟಿ, ಕ್ರೀಡಾಂಗಣ ನಿರ್ಮಾಣಕ್ಕೆ 3.50 ಕೋಟಿ, ನೀರು ಸರಬರಾಜು ಕಾಮಗಾರಿ ಹಾಗೂ ಯಂತ್ರೋಪಕರಣಗಳ ಖರೀದಿಗೆ 3.66 ಕೋಟಿ, ನೌಕರರ ವೇತನಕ್ಕೆ 6.81 ಕೋಟಿ, ಬೀದಿದೀಪ ಮತ್ತು ನೀರು ಸರಬರಾಜು ವಿದ್ಯುತ್ ಬಿಲ್‌ಗೆ 6.62 ಕೋಟಿ, ಘನತ್ಯಾಜ್ಯಕ್ಕೆ ಸಂಬಂಧಿಸಿದಂತೆ ದುರಸ್ತಿ ಮತ್ತು ನಿರ್ವಹಣೆಗೆ 5.01 ಕೋಟಿ, ನೀರು ಸರಬರಾಜು ದುರಸ್ತಿ ಮತ್ತು ನಿರ್ವಹಣೆಗೆ 2.48 ಕೋಟಿ, ವಿದ್ಯುತ್ ಠೇವಣಿ, ಕಡಿತಗಳ ಪಾವತಿ ಹಾಗೂ ಠೇವಣಿಗಳ ಮರುಪಾವತಿಗೆ 3.04 ಕೋಟಿ ರೂ. ಸೇರಿದಂತೆ ಇತರೆ ವೆಚ್ಚಗಳಿಗೆ 50,84,52,000 ಕೋಟಿ ನಿಗದಿ ಮಾಡಲಾಗಿದೆ.

ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ಆದ ಸಿ.ಟಿ. ಶಿಲ್ಪನಾಗ್ ಮಂಡಿಸಿದ ನಗರಸಭೆ 2024–25ನೇ ಬಜೆಟ್‌ಅನ್ನು ಹಿರಿಯ ಸದಸ್ಯ ಬಸ್ತೀಪುರ ಶಾಂತರಾಜು ಅಂಗೀಕರಿಸಿದರು. ಸದಸ್ಯರುಗಳಾದ ಧರಣೇಶ್, ಶಂಕನಪುರ ಪ್ರಕಾಶ್, ಪ್ರಶಾಂತ್, ಜಯಮೇರಿ, ಜಿ.ಪಿ.ಶಿವಕುಮಾರ್ ಇನ್ನಿತರರು ಅನುಮೋದಿಸಿದರು.

ಎಲ್ಲ ಸದಸ್ಯರು ಮೇಜು ಕುಟ್ಟಿ ಬಜೆಟ್‌ಗೆ ಅಂಗೀಕಾರ ನೀಡಿದರು. ಶಾಸಕ ಎ.ಆರ್.ಕೃಷ್ಣಮೂರ್ತಿ, ಪೌರಾಯುಕ್ತ ರಮೇಶ್ ಇನ್ನಿತರಿದ್ದರು

ಬಸವಣ್ಣನವರ ಸ್ಮರಣೆ ಸರ್ವಕಾಲಕ್ಕೂ ಅವಶ್ಯಕ



ಚಾಮರಾಜನಗರ, ಫೆ.17– ಸಮಾಜ ತಿದ್ದುವಂತಹ ವಚನಗಳನ್ನು ರಚಿಸುವ ಮೂಲಕ ಸಮಸಮಾಜ ನಿರ್ಮಾಣಕ್ಕೆ ಮುಂದಾದ ಬಸವಣ್ಣನವರಂತಹ ಪುಣ್ಯ ಪುರುಷರ ಸ್ಮರಣೆ ಸರ್ವಕಾಲಕ್ಕೂ ಅವಶ್ಯವಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಸರ್ಕಾರವು ಜಗಜ್ಯೋತಿ ಬಸವೇಶ್ವರರನ್ನು 'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ರೆಂದು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕರೆಂಬ ಬರಹ ಉಳ್ಳ ಬಸವಣ್ಣನವರ ಭಾವಚಿತ್ರ ಅನಾವರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಾಜದಲ್ಲಿದ್ದ ಮೂಢನಂಬಿಕೆ, ತಾರತಮ್ಯ, ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿ ಕಾಯಕದ ಮಹತ್ವವನ್ನು ತಿಳಿಸಿದ ಬಸವಣ್ಣನವರ ಸ್ಮರಣೆ ಎಲ್ಲೆಡೆ ಆಗಬೇಕು ಎಂದು ಶಾಸಕರಾದ ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು, ಬಸವಣ್ಣನವರು ರಚಿಸಿದ ವಚನಗಳ ಸಾರ್ವತ್ರಿಕ ಮೌಲ್ಯಗಳು ಸರ್ವಕಾಲಕ್ಕೂ ದಾರಿದೀಪವಾಗಿದೆ. ವಿಶ್ವಸಂಸ್ಕೃತಿ, ಉದಾರ ತತ್ವಗಳನ್ನು ಪ್ರತಿಪಾದಿಸಿದ ಬಸವಣ್ಣನವರು ವಿಶ್ವಗುರು ಸಾಂಸ್ಕೃತಿಕ ನಾಯಕರಾಗಿದ್ದಾರೆ. ಮಹಿಳಾ ಅಸಮಾನತೆ, ಮೂಢನಂಬಿಕೆ ವಿರೋಧಿಸಿ, ನಡೆ–ನುಡಿ ಒಂದೇ ಆಗಿರಬೇಕೆಂದ ಬಸವಣ್ಣನವರು ನುಡಿದಂತೆ ನಡೆದರು ಎಂದರು. ಬಸವಣ್ಣನವರ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿದ ಹರವೆ ವಿರಕ್ತ ಮಠದ ಸರ್ಪಭೂಷಣಸ್ವಾಮೀಜಿ, ಸರ್ಕಾರವು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸಿರುವುದು ಸಂತಸದ ವಿಚಾರ. ಅನುಭವ ಮಂಟಪ ನಿರ್ಮಿಸಿ ಸಮಾನತೆ ಹಂಚಿದ ಬಸವಣ್ಣನವರು ಎಲ್ಲಾ ವರ್ಗಗಳಿಗೂ ಸಮಾನ ಗೌರವ ದೊರೆಯುವಂತೆ ಮಾಡಿದರು. ವಚನಗಳಲ್ಲಿನ ಸಾರವನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡರೆ ಸಾಮಾಜಿಕ ಸಮಸ್ಯೆಗಳು ದೂರವಾಗಲಿವೆ ಎಂದರು.

ನಗರದ ವಿರಕ್ತ ಮಠದ ಚೆನ್ನಬಸವ ಸ್ವಾಮೀಜಿ ಮಾತನಾಡಿ, ಬಸವಣ್ಣನವರು ಇಡೀ ಸಮಾಜಕ್ಕೆ ಸಮಾನತೆಯ ತತ್ವ ಬೋಧಿಸಿದರು. ಅವರ ವಚನಗಳು. ಸಪ್ತ ಸೂತ್ರಗಳು ಎಲ್ಲರ ಜೀವನಕ್ಕೆ ದಾರಿ ದೀಪವಾಗಿವೆ. ಬಸವಣ್ಣನವರ ವಚನಗಳ ಅನುಸರಣೆಯಿಂದ ಜೀವನವನ್ನು ಸಾರ್ಥಕಪಡಿಸಿಕೊಳ್ಳಬಹುದು ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪಿ. ಲಕ್ಷ್ಮಿ, ಭೂ ದಾಖಲೆ ಇಲಾಖೆಯ ವಿದ್ಯಾಯಿನಿ, ಮುಖಂಡರಾದ ಮೂಡ್ಲುಪುರ ನಂದೀಶ್, ಡಿ. ನಾಗೇಂದ್ರ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಾಂಬಳ್ಳಿಯಲ್ಲಿ ಸಂವಿಧಾನ ಜಾಗೃತಿ ಜಾಥಾಗೆ ಅದ್ಧೂರಿ ಸ್ವಾಗತ



ಮಾಂಬಳ್ಳಿ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾದ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಶಾಸಕ ಎ.ಆರ್.ಕೃಷ್ಣಮೂರ್ತಿ ಸ್ವಾಗತಿಸಿದರು.

ಚಾಮರಾಜನಗರ, ಫೆ.17– ಯಳಂದೂರು ತಾಲೂಕಿನ ಮಾಂಬಳ್ಳಿ ಗ್ರಾಮಕ್ಕೆ ಇಂದು ಆಗಮಿಸಿದ ಸಂವಿಧಾನ ಜಾಗೃತಿ ಜಾಥಾಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಹಾಗೂ ಗ್ರಾಮಸ್ಥರು ಅದ್ಧೂರಿ ಸ್ವಾಗತ ಕೋರಿದರು.

ಅಲಂಕೃತ ಎತ್ತಿನಗಾಡಿಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಸಂವಿಧಾನದ ಭಾವಚಿತ್ರಗಳನ್ನು ಇರಿಸಿ ಹೂವಿನಿಂದ ಅಲಂಕರಿಸಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಅದ್ಧೂರಿಯಾಗಿ ಬರಮಾಡಿಕೊಂಡರು.

ಬಿಸಿಲಿನ ಬೇಗೆಯನ್ನು ಲೆಕ್ಕಿಸದೆ ಸಾವಿರಾರು ಸಂಖ್ಯೆಯಲ್ಲಿ ಗ್ರಾಮಸ್ಥರು ಜಾಥಾದಲ್ಲಿ ಭಾಗವಹಿಸಿದ್ದರು. ಕೆಲವು ಯುವಕರು ತಮ್ಮ ಬೈಕ್‌ಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಇರುವ ನೀಲಿ ಧ್ವಜವನ್ನು ಹಾಕಿಕೊಂಡು ರ‍್ಯಾಲಿಯನ್ನು ನಡೆಸಿದರು. ದಣಿದಿದ್ದವರಿಗೆ ನೀರು, ಮಜ್ಜಿಗೆ, ಪಾನಕ ವಿತರಿಸಲಾಯಿತು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪಾರ್ಚನೆ ನೆರವೇರಿಸಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿದರು. ಮಾಂಬಳ್ಳಿ ಗ್ರಾಮದ ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಶ್ವೇತಾ ಸಂವಿಧಾನ ಕುರಿತು ಉಪನ್ಯಾಸ ನೀಡಿದರು. ಮಾಂಬಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಲ್ಲೇಶ್, ಉಪಾಧ್ಯಕ್ಷರಾದ ಮುಬಾರಕ್ ಉನ್ನೀಸಾ, ಸದಸ್ಯರಾದ ಲಕ್ಷ್ಮಿ, ಮುಜಾಹಿದ್ ಉಲ್ಲಾ, ಇಂದ್ರಮ್ಮ, ರಾಜೇಶ್ವರಿ, ರತ್ನಮ್ಮ, ಶಿವಣ್ಣ, ಜ್ಯೋತಿ ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷರಾದ ಜೆ. ಯೋಗೇಶ್, ತಹಶೀಲ್ದಾರ್ ಜಯಪ್ರಕಾಶ್, ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕಾಧಿಕಾರಿ ಶ್ರೀನಿವಾಸ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜೇಶ್, ಬಿಇಒ ಕೆ. ಕಾಂತರಾಜು, ಮಾಂಬಳ್ಳಿ ನಂಜುಂಡಸ್ವಾಮಿ, ಮಾಂಬಳ್ಳಿ ಶಿವಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಉಷಾರಾಣಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಗರ ಗ್ರಾಮ ಪಂಚಾಯಿತಿಯಲ್ಲೂ ಜಾಗೃತಿ ಜಾಥಾವನ್ನು ಸಂಭ್ರಮದಿಂದ ಬರಮಾಡಿಕೊಳ್ಳಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಮುದ್ದನಾಯಕ, ಉಪಾಧ್ಯಕ್ಷರಾದ ನಿರ್ಮಲ ಶ್ರೀನಿವಾಸ್, ಇನ್ನಿತರ ಸದಸ್ಯರು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜೇಶ್, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಶ್ರೀನಿವಾಸ್ ಭಾಗವಹಿಸಿದ್ದರು.

ಸಂವಿಧಾನದ ಪೀಠಿಕೆ ಬೋಧಿಸಲಾಯಿತು. ಪುಸ್ತಕ ಜೋಳಿಗೆ ಮೂಲಕ ಅತ್ಯುತ್ತಮ ಪುಸ್ತಕಗಳನ್ನು ಸಂಗ್ರಹಿಸಲಾಯಿತು. ಸಣ್ಣ ಮಕ್ಕಳು ಡಾ. ಬಿ.ಆರ್. ಅಂಬೇಡ್ಕರ್, ಇನ್ನಿತರ ರಾಷ್ಟ್ರ ನಾಯಕರ ವೇಷಧಾರಿಗಳಾಗಿ ಗಮನ ಸೆಳೆದರು.

ಸಿದ್ದಶೆಟ್ಟಿ ನಿಧನ



ಬೇಗೂರು(ಗುಂಡ್ಲುಪೇಟೆ),ಫೆ.17– ಗುಂಡ್ಲುಪೇಟೆ ಪಟ್ಟಣದ ನಿವಾಸಿ ಸಿದ್ದಶೆಟ್ಟಿ (63) ಶನಿವಾರ ಬೆಳಗ್ಗೆ ನಿಧನರಾದರು

ಇವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗುಂಡ್ಲುಪೇಟೆ ಪಟ್ಟಣದ ರುದ್ರಭೂಮಿಯಲ್ಲಿ ನಡೆಯಿತು.

ವಿವಿಧ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ

ಚಾಮರಾಜನಗರ, ಫೆ.17– ಮಲೆನಾಡು ಪ್ರದೇಶ ಅಭಿವೃದ್ಧಿ ಯೋಜನೆಯಡಿ ಮಂಗಲ ಹೊಸೂರು ಪರಿಶಿಷ್ಟ ಜಾತಿ ಬಡಾವಣೆಗೆ 10 ಲಕ್ಷ ರೂ. ಚಿಕ್ಕ ಕೆಂಪಿಹುಂಡಿ ಗ್ರಾಮದ ಕುರುಬ ಸಮುದಾಯದವರ ಬೀದಿಯಲ್ಲಿ 20 ಲಕ್ಷ ರೂ. ಸೇರಿದಂತೆ 30 ಲಕ್ಷ ರೂ.ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಮಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಿಗೆ ಬೇಕಾದ ರಸ್ತೆ, ಚರಂಡಿ ಸಮುದಾಯಭವನ, ಕುಡಿಯುವ ನೀರು ಸೌಲಭ್ಯ, ಗಂಗಾ ಕಲ್ಯಾಣಯೋಜನೆಯಡಿ ಸಾಲಸೌಲಭ್ಯ, ಅರ್ಹ ಫಲಾನುಭವಿಗಳಿಗೆ ಆಶ್ರಯ ಮನೆ, ನಿವೇಶನ, ಸೇರಿದಂತೆ ಸರಕಾರದಿಂದ ನೀಡಲಾಗುವ ಸೌಲಭ್ಯಗಳನ್ನು ಸಮಗ್ರವಾಗಿ ಒದಗಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಕ್ರಮವಹಿಸಲಾಗುತ್ತಿದ್ದು, ರಸ್ತೆ, ಚರಂಡಿಯಿಲ್ಲದಿರುವ ಗ್ರಾಮಗಳನ್ನು ಗುರುತಿಸಿ, ಸರಕಾರದಿಂದ ಸೂಕ್ತ ಅನುದಾನ ಬಿಡುಗಡೆ ಮಾಡಿಸಿ, ಅಭಿವೃದ್ಧಿಪಡಿಸಲಾಗುವುದು ಎಂದರು.

ಕಾಮಗಾರಿ ನಿರ್ವಹಣೆಗೆ ಸಂಬಂಧಪಟ್ಟ ಗುತ್ತಿಗೆದಾರರು, ಎಂಜಿನಿಯರ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕರು ಸೂಚಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷೆ ಮಹದೇವಮ್ಮ, ಸದಸ್ಯೆ ಮುದ್ದಮ್ಮ, ಮುಖಂಡರಾದ ಉಡಿಗಾಲ ನಂಜಪ್ಪ, ಮಹದೇವ, ಮಂಗಲ ಗ್ರಾ.ಪಂ ಅಧ್ಯಕ್ಷ ಅಣ್ಣಪ್ಪಸ್ವಾಮಿಸೇರಿದಂತೆ ಗ್ರಾ.ಪಂ ಸದಸ್ಯರು ಕೆಆರ್‌ಐಡಿಎಲ್‌ಎಂಜಿನಿಯರ್ ಮಧು, ಗ್ರಾಮಸ್ಥರು ಹಾಜರಿದ್ದರು.

ಮೂರನೇ ಪುಟದಿಂದ

6.88 ಕೋಟಿ ಉಳಿತಾಯ ಲೆಕ್ಕ

ನಾಗರಿಕರಿಗೆ ಮೂಲಸೌಕರ್ಯಗಳನ್ನು ವ್ಯವಸ್ಥಿತ ಹಾಗೂ ಪರಿಣಾಮಕಾರಿಯಾಗಿ ಕಲ್ಪಿಸಲು ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಆದಾಯ ಮೂಲಗಳು: ಆಸ್ತಿ ತೆರಿಗೆ, ಖಾತಾ ವರ್ಗಾವಣೆ ಶುಲ್ಕ, ಖಾತಾ ಪ್ರತಿಗಳ ಶುಲ್ಕ ಹಾಗೂ ಜಾಹಿರಾತು ಶುಲ್ಕ ಸೇರಿದಂತೆ ಕಂದಾಯ ಖಾತೆಯಿಂದ 2024–25ನೇ ಸಾಲಿಗೆ 20480.83 ಲಕ್ಷ(204.80 ಕೋಟಿ) ರೂ., ನೀರಿನ ತೆರಿಗೆ ಹಾಗೂ ಒಳಚರಂಡಿ ನಿರ್ವಹಣಾ ದರದಿಂದ 7985 ಲಕ್ಷ (79.85 ಕೋಟಿ) ರೂ., ಕಟ್ಟಡ ಪರವಾನಗಿ, ನೆಲಬಾಡಿಗೆ, ರಸ್ತೆ ಅಗೆದ ಶುಲ್ಕ, ನೀರಿನ ಸಂಪರ್ಕ, ಕಟ್ಟಡ ಪೂರ್ಣಗೊಂಡ ವರದಿ, ದಂಡ ಮತ್ತು ಜುಲ್ಮಾನೆ ಸೇರಿದಂತೆ ನಗರ ಮತ್ತು ಪಟ್ಟಣ ಯೋಜನೆ ಮೂಲದಿಂದ 1329.50 ಲಕ್ಷ (13.29 ಕೋಟಿ) ರೂ., ಉದ್ದಿಮೆ ಪರವಾನಗಿ ಶುಲ್ಕದಿಂದ 635 ಲಕ್ಷ (6.35 ಕೋಟಿ) ರೂ., ನಗರ ಪಾಲಿಕೆ ಆಸ್ತಿಗಳಿಂದ ಬರುವ ಬಾಡಿಗೆಯಿಂದ 309.17 ಲಕ್ಷ (3.09 ಕೋಟಿ) ರೂ. ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

ಸರ್ಕಾರಗಳಿಂದ ನಿರೀಕ್ಷೆ: ರಾಜ್ಯ ಹಣಕಾಸು ಆಯೋಗದ ಮುಕ್ತನಿಧಿಯಿಂದ 2500 ಲಕ್ಷ (25 ಕೋಟಿ) ರೂ., ಬೀದಿದೀಪ ಹಾಗೂ ನೀರು ಸರಬರಾಜು ಸ್ಥಾವರಗಳ ವಿದ್ಯುಚ್ಛಕ್ತಿ ಬಿಲ್ಲುಗಳ ಪಾವತಿಗೆ 9600 ಲಕ್ಷ (96 ಕೋಟಿ) ರೂ., ರಾಜ್ಯ ಹಣಕಾಸು ಆಯೋಗದಿಂದ ಪಾಲಿಕೆಯ ಖಾಯಂ ಅಧಿಕಾರಿ ಹಾಗೂ ನೌಕರರ ವೇತನ, ನಿವೃತ್ತರಿಗೆ ಪಿಂಚಣಿ ವಂತಿಕೆ ಅನುದಾನವಾಗಿ 8000 ಲಕ್ಷ (80 ಕೋಟಿ) ರೂ., 15ನೇ ಹಣಕಾಸು ಆಯೋಗದ ಅನುದಾನದಿಂದ 5500 ಲಕ್ಷ (55 ಕೋಟಿ) ರೂ., ಲೋಕಸಭೆ, ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಿಂದ 45 ಲಕ್ಷ ರೂ. ನಿರೀಕ್ಷಿಸಲಾಗಿದೆ ಎಂದರು.

ವಿಶೇಷ ಅನುದಾನ: ಮೈಸೂರಿನ ಅಭಿವೃದ್ಧಿ ಬಗ್ಗೆ ಮುಖ್ಯಮಂತ್ರಿಗಳು ವಿಶೇಷ ಕಾಳಜಿ ಹೊಂದಿದ್ದು, ಎಸ್‌ಎಫ್‌ಸಿ ವಿಶೇಷ ಅನುದಾನದಡಿ ಮಳೆಯಿಂದ ಹಾನಿಗೊಳಗಾದ ರಸ್ತೆಗಳ ಅಭಿವೃದ್ಧಿಗೆ 12 ಕೋಟಿ., ಕೃಷ್ಣರಾಜ ಕ್ಷೇತ್ರದಲ್ಲಿ ಮಳೆಯಿಂದ ಹಾನಿಗೊಳಗಾದ ಚರಂಡಿ ಅಭಿವೃದ್ಧಿಗೆ 26 ಕೋಟಿ, ರಸ್ತೆ ಅಭಿವೃದ್ಧಿಗೆ 25 ಕೋಟಿ, ಚಾಮರಾಜ ಕ್ಷೇತ್ರದ ಚರಂಡಿ ಅಭಿವೃದ್ಧಿಗೆ 10 ಕೋಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ 28 ಕೋಟಿ ನಿರೀಕ್ಷಿಸಲಾಗಿದೆ. ಹಾಗೆಯೇ ಮಹಾತ್ಮಗಾಂಧಿ ವಿಕಾಸ ಯೋಜನೆಯಡಿ 35 ಕೋಟಿ, ಪೌರ ಕಾರ್ಮಿಕರ ಗೃಹಭಾಗ್ಯ ಯೋಜನೆಯಡಿ ಜಿ+3 ಮಾದರಿ ವಸತಿ ಸಮುಚ್ಚಯ ನಿರ್ಮಾಣಕ್ಕೆ 1.50 ಕೋಟಿ, ಅಮೃತ್–2 ಯೋಜನೆ ಅನುದಾನದಡಿ ಕೇಂದ್ರ ಸರ್ಕಾರದಿಂದ 10 ಕೋಟಿ ಹಾಗೂ ಸ್ವಚ್ಛ ಭಾರತ್ ಅನುದಾನದಡಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ 9.50 ಕೋಟಿ ರೂ. ನಿರೀಕ್ಷಿಸಲಾಗುವುದಾಗಿ ವಿವರಿಸಿದರು.

ಕಳೆದ ಬಜೆಟ್‌ನ ಸದ್ಯದ ಚಿತ್ರಣ: ಆಡಳಿತಾಧಿಕಾರಿ ಡಾ.ಜಿ.ಸಿ.ಪ್ರಕಾಶ್, ಕಳೆದ 2023–24ನೇ ಸಾಲಿನ ಬಜೆಟ್‌ನ ಸದ್ಯದ ಚಿತ್ರಣವನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಒಟ್ಟು 106696.64 ಲಕ್ಷ (1066.96 ಕೋಟಿ) ರೂಗಳ 634.14 ಲಕ್ಷ (6.34 ಕೋಟಿ) ರೂ. ಉಳಿತಾಯ ಬಜೆಟ್ ಮಂಡಿಸಲಾಗಿತ್ತು 106062.50 ಲಕ್ಷ(1060.62 ಕೋಟಿ) ರೂ. ವೆಚ್ಚ ಅಂದಾಜಿಸಲಾಗಿತ್ತು. ಕಳೆದ ಆಯವ್ಯಯದಲ್ಲಿ ಜಮೆಗಳಿಂದ ನಿರೀಕ್ಷಿಸಲಾಗಿದ್ದ 70173.17 ಲಕ್ಷ (701.73 ಕೋಟಿ) ರೂಗಳಲ್ಲಿ ಕಳೆದ ಡಿಸೆಂಬರ್ ಅಂತ್ಯದವರೆಗೆ 46656.89 ಲಕ್ಷ (466.56 ಕೋಟಿ) ರೂ. ಸಂಗ್ರಹವಾಗಿದೆ. ಹಾಗೆಯೇ ಸ್ವಂತ ಸಂಪನ್ಮೂಲಗಳ ಹಾಗೂ ಅನುದಾನಗಳ ಲಭ್ಯತೆ ಅನುಸಾರ 48941.70 ಲಕ್ಷ (489.41 ಕೋಟಿ) ರೂ. ಪಾವತಿಸಲಾಗಿದೆ ಎಂದು ತಿಳಿಸಿದರು.

ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ವೇದಿಕೆಯಲ್ಲಿದ್ದರು. ಮುಖ್ಯ ಹಣಕಾಸು ಅಧಿಕಾರಿ, ಉಪ ಆಯುಕ್ತರುಗಳು ಸೇರಿದಂತೆ ವಿವಿಧ ವಿಭಾಗದ

ಮೈಸೂರಲ್ಲಿ ಮೂಲ ಸೌಲಭ್ಯಕ್ಕೆ ಆದ್ಯತೆ
ಕೆಲವೊಂದು ಅವಶ್ಯ ಅಭಿವೃದ್ಧಿ ಕಾರ್ಯಕ್ಕೂ ಒತ್ತು



ಮೈಸೂರು, ಫೆ.17(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ಬಜೆಟ್‌ನಲ್ಲಿ ಸ್ವಚ್ಛತೆ, ತ್ಯಾಜ್ಯ ವಿಲೇವಾರಿ ಸೇರಿದಂತೆ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸುವುದು ಸೇರಿದಂತೆ ಅತ್ಯಾವಶ್ಯಕ ಕಾರ್ಯಕ್ರಮಗಳಿಗಷ್ಟೇ ಆದ್ಯತೆ ನೀಡಲಾಗಿದೆ.

ಅತೀ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದಲ್ಲಿ ಜನಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದ್ದು, ಪ್ರವಾಸಿಗರೂ ಹೆಚ್ಚಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾಗರಿಕರಿಗೆ ಸಮರ್ಪಕವಾಗಿ ಮೂಲ ಸೌಕರ್ಯ ಕಲ್ಪಿಸುವುದು ಪಾಲಿಕೆ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಹಿಂದಿನ ಆಯವ್ಯಯದ ಬಾಕಿ ಇರುವ ಯೋಜನೆಗಳೊಂದಿಗೆ ಕೆಲವು ಹೊಸ ಕಾರ್ಯಕ್ರಮಗಳನ್ನೂ ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಪಾಲಿಕೆ ಆಡಳಿತಾಧಿಕಾರಿ ಡಾ.ಜಿ.ಸಿ.ಪ್ರಕಾಶ್ ತಿಳಿಸಿದರು.

ಪುರಭವನ ಅಭಿವೃದ್ಧಿ, ವಲಯ ಕಚೇರಿಗೆ ಕಟ್ಟಡ

ಪುರಭವನ ಆವರಣದಲ್ಲಿನ ಬೇಸ್‌ಮೆಂಟ್ ಪಾರ್ಕಿಂಗ್ ಸೇರಿದಂತೆ ಪುರಭವನ ಕಟ್ಟಡದ ಆವರಣದಲ್ಲಿ ಹೆಚ್ಚಿನ ಸುರಕ್ಷತಾ ಕ್ರಮ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ. ಸದ್ಯ ತಾತ್ಕಾಲಿಕವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಟ್ಟಡದಲ್ಲಿರುವ ನಗರ ಪಾಲಿಕೆ ವಲಯ ಕಚೇರಿ–9ಕ್ಕೆ ವಾರ್ಡ್ ನಂ.39 ಗಾಯಿತ್ರಿಪುರಂ ಮುಖ್ಯರಸ್ತೆಯ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ಕ್ರಮ.

ಮಳೆ ನೀರು ಕೊಯ್ಲು ಥೀಮ್ ಪಾರ್ಕ್, ಕೆರೆ–ಕಲ್ಯಾಣಿಗಳ ಅಭಿವೃದ್ಧಿ

ಮಳೆ ನೀರು ಕೊಯ್ಲು ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಂಬಂಧ ಚೆಲುವಾಂಬ ಉದ್ಯಾನವನ್ನು ಮಳೆ ನೀರು ಕೊಯ್ಲು ಥೀಮ್ ಪಾರ್ಕ್ ಆಗಿ ಅಭಿವೃದ್ಧಿಪಡಿಸುವ ಉದ್ದೇಶ. ಕೇಂದ್ರದ ಅಮೃತ್ 2.0 ಯೋಜನೆಯಡಿ ಬೋಗಾದಿ ಕೆರೆ, ಅಯ್ಯಜಯ್ಯನ ಹುಂಡಿ ಕೆರೆ, ತಿಪ್ಪಯ್ಯನ ಕೆರೆ ಹಾಗೂ ಸರಸ್ವತಿಪುರಂನಲ್ಲಿರುವ ಕಲ್ಯಾಣಿಗಳ ಸಮಗ್ರ ಅಭಿವೃದ್ಧಿ. ದಟ್ಟಗಳ್ಳಿಯ ಸೈನಿಕ ಉದ್ಯಾನವನ, ಹಳೇ ಡಿಸಿ ಆಫೀಸ್ ಆವರಣದ ಉದ್ಯಾನ, ಕಲ್ಯಾಣಗಿರಿ ಉದ್ಯಾನ, ಕದಲೀವನ ಉದ್ಯಾನ ಹಾಗೂ ಸಕ್ಬರ್ ಅಲಿ ಉದ್ಯಾನಗಳ ಅಭಿವೃದ್ಧಿ.

ದೇವನೂರು ಕೆರೆ ಪುನರುಜ್ಜೀವನ

ಕೆಸರೆ ಘಟಕದಲ್ಲಿ ಸಂಸ್ಕರಿಸಲಾಗುತ್ತಿರುವ ನೀರನ್ನು ದೇವನೂರು ಕೆರೆಗೆ ತುಂಬಿಸಿ, ಪುನರುಜ್ಜೀವನಗೊಳಿಸುವ ಕಾಮಗಾರಿಯನ್ನು 15ನೇ ಹಣಕಾಸು ಅನುದಾನದಡಿ ಕೈಗೆತ್ತಿಕೊಳ್ಳಲು ಕ್ರಮ.

ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ

ನಗರದ ಹೃದಯ ಭಾಗದಲ್ಲಿನ ವಾಹನ ದಟ್ಟಣೆ ನಿಯಂತ್ರಿಸುವ ನಿಟ್ಟಿನಲ್ಲಿ ದೇವರಾಜ ಅರಸ್ ರಸ್ತೆ, ಪುರಭವನದ ಬೇಸ್‌ಮೆಂಟ್ ಹಾಗೂ ನಂಜರಾಜ್ ಬಹದ್ದೂರ್ ಛತ್ರದ ಆವರಣದಲ್ಲಿ ಪೇ ಅಂಡ್ ಪಾಕಿಂಗ್ ಸೌಲಭ್ಯ.

ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ

ಕಬಿನಿ ಕೆಂಬಾಳು ಜಲ ಶುದ್ಧೀಕರಣ ಘಟಕವನ್ನು 60 ಎಂಎಲ್‌ಡಿಯಿಂದ 120 ಎಂಎಲ್‌ಡಿ ಸಾಮರ್ಥ್ಯ ಘಟಕವಾಗಿ ಉನ್ನತೀಕರಿಸುವ ಯೋಜನೆ ಶೀಘ್ರದಲ್ಲೇ ಅನುಷ್ಠಾನಕ್ಕೆ ಕ್ರಮ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ಅನುದಾನದಲ್ಲಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ(ಕೆಯುಐಡಿಎಫ್‌ಸಿ) ವತಿಯಿಂದ 80 ಕೋಟಿ ಅನುದಾನದಲ್ಲಿ ಸುಮಾರು 35 ಕಿ.ಮೀ. ಮುಖ್ಯ ಒಳಚರಂಡಿ ಕೊಳವೆ ಮಾರ್ಗ ಅಭಿವೃದ್ಧಿಪಡಿಸಿ, ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿಗೆ ಸಂಪರ್ಕ ಕಲ್ಪಿಸುವುದರ ಭಾಗವಾಗಿ ಪಾಲಿಕೆ ವತಿಯಿಂದ 15ನೇ ಹಣಕಾಸು ಯೋಜನೆಯಡಿ 15 ಕಿ.ಮೀ. ಕಾಮಗಾರಿಗೆ ಕ್ರಮ.

ಸಿಎಸ್‌ಆರ್ ಅಡಿ ವಿವಿಧ ಅಭಿವೃದ್ಧಿ ಕಾರ್ಯ

ಸಿಎಸ್‌ಆರ್ ಅನುದಾನದಿಂದ ವೃತ್ತಗಳ ಅಭಿವೃದ್ಧಿ ಹಾಗೂ ಮೂರು ಘನ ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಸೋಲಾರ್ ಪ್ಯಾನಲ್ ಅಳವಡಿಸುವ ಮೂಲಕ ವಿದ್ಯುಚ್ಛಕ್ತಿ ಉಳಿತಾಯಕ್ಕೆ ಯೋಜನೆ.

ಇ–ಆಫೀಸ್, ದಾಖಲೆಗಳ ಗಣಕೀಕರಣ

ಸುಗಮ ಆಡಳಿತ ಹಾಗೂ ತ್ವರಿತ ಸೇವೆಗೆ ಪಾಲಿಕೆಯ ಕೇಂದ್ರ ಕಚೇರಿ ಸೇರಿದಂತೆ ಎಲ್ಲಾ ವಲಯ ಕಚೇರಿಗಳಲ್ಲೂ ಇ–ಆಫೀಸ್ ತಂತ್ರಾಂಶ ಅಳವಡಿಕೆಗೆ ಕ್ರಮ. ಕೇಂದ್ರ ಕಚೇರಿಯ ವಿವಿಧ ವಿಭಾಗಗಳು ಹಾಗೂ ವಲಯ ಕಚೇರಿಗಳಲ್ಲಿನ ಎಲ್ಲಾ ದಾಖಲೆಗಳನ್ನು ತಂತ್ರಾಂಶದ ಮೂಲಕ ಗಣಕೀಕರಣಗೊಳಿಸುವುದು. ಚಾಲ್ತಿಯಲ್ಲಿರುವ ಟ್ರಿಣ್ ಟ್ರಿಣ್ ಸೈಕಲ್–2.0 ಅಡಿಯಲ್ಲಿ ನಗರದ ಬಹುತೇಕ ಕಡೆ ಡಾಕ್‌ಲೆಸ್ ಹಬ್‌ಗಳ ನಿರ್ಮಾಣಕ್ಕೆ ಕ್ರಮ.

ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೂ ಗಮನ

ಪ್ರಸಕ್ತ ಸಾಲಿನಲ್ಲಿ ಪ್ರಾಯೋಗಿಕವಾಗಿ ಪೌರ ಕಾರ್ಮಿಕರಿಗೆ ಇ–ಬೈಕ್‌ಗಳ ವಿತರಣೆ. ಪಾಲಿಕೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬಡವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ಬ್ಯಾಟರಿ ಚಾಲಿತ ಇ–ತಳ್ಳುವ ಗಾಡಿ ನೀಡುವುದು. ಈ ವರ್ಗಗಳ ಆಸಕ್ತ ಮಹಿಳಾ ಆಟೋ ಚಾಲಕರಿಗೆ ಇ–ಆಟೋ ಅಥವಾ ಪಿಂಕ್ ಆಟೋ ವಿತರಿಸಲು ಕ್ರಮ. ಶೇ.7.25 ಅನುದಾನದಡಿಯಲ್ಲೂ ಈ ಕಾರ್ಯಕ್ರಮಗಳಿಗೆ ಕ್ರಮ. ವಿಶೇಷಚೇತನರ ಕ್ಷೇಮಾಭಿವೃದ್ಧಿಗಾಗಿ ಶೇ.5 ರ ಅನುದಾನದಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಹಲವು ಕಾರ್ಯಕ್ರಮಗಳನ್ನು ಮುಂದುವರೆಸಲು ನಿರ್ಧಾರ.

ಮೈಸೂರು ಮಿನಿ ವಿಧಾನಸೌಧದ ಹಿಂಭಾಗವೇ ಸರ್ಕಾರಿ ಭೂಮಿಯಲ್ಲಿ ಅಕ್ರಮ ನಿರ್ಮಾಣ; ಲಕ್ಷ ಲಕ್ಷ ಸಂಪಾದನೆ

ತಹಸೀಲ್ದಾರ್ ಮಹೇಶ್‌ಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ; ಅಕ್ರಮ ನಿರ್ಮಾಣ ನೆಲಸಮ

● ಅಕ್ರಮ ಕಟ್ಟಡಗಳಿಗೂ 'ಚೆಸ್ಕಾಂ' ಕರೆಂಟ್ ● ಅತಿಕ್ರಮ ಪ್ರವೇಶ ಸಂಬಂಧ ಪ್ರಕರಣ ದಾಖಲಿಸಲು ಚಿಂತನೆ



ಮೈಸೂರು, ಫೆ. 17– ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನ ಸೌಧ ಹಿಂಭಾಗದ ಸರ್ಕಾರಿ ಜಾಗ ಕಬಳಿಸಿ ನಿರ್ಮಾಣವಾಗಿದ್ದ ಅಕ್ರಮ ನಿರ್ಮಾಣಗಳನ್ನು ಶನಿವಾರ ಸಂಜೆ ತಹಸೀಲ್ದಾರ್ ಮಹೇಶ್‌ಕುಮಾರ್ ನೇತೃತ್ವದಲ್ಲಿ ಕಂದಾಯ ಇಲಾಖಾ ಅಧಿಕಾರಿಗಳು ನೆಲಸಮಗೊಳಿಸಿ, ಭೂಮಿಯನ್ನು ತಮ್ಮ ವಶಕ್ಕೆ ಪಡೆದರು.

ತಹಸೀಲ್ದಾರ್ ಕಚೇರಿ (ಮಿನಿ ವಿಧಾನ ಸೌಧ), ಲೋಕೋಪಯೋಗಿ ಇಲಾಖಾ ಕಚೇರಿ, ಭೂ ಮಾಪನಾಧಿಕಾರಿಗಳ ಕಚೇರಿ ಸೇರಿದಂತೆ ಸರ್ಕಾರದ ವಿವಿಧ ಕಚೇರಿಗಳ ಮಧ್ಯೆಯೇ ಕೆಲ ವರ್ಷಗಳಿಂದ ಅಕ್ರಮವಾಗಿ ನಿರ್ಮಿಸಿ ವಾಣಿಜ್ಯ ಉದ್ದೇಶಕ್ಕಾಗಿ ಈ ಕಟ್ಟಡವನ್ನು ಬಳಸಲಾಗುತ್ತಿತ್ತು. ಒಂದೇ ಸೂರಿನಡಿ 5 ಮಳಿಗೆಗಳನ್ನು ನಿರ್ಮಿಸಿ, ಅದನ್ನು ಪತ್ರ ಬರಹಗಾರರ ಕಚೇರಿ, ಜೆರಾಕ್ಸ್ ಅಂಗಡಿ ಸೇರಿದಂತೆ ಕೆಲ ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆಗೆ ನೀಡಲಾಗಿತ್ತು. ವಿಚಿತ್ರವೆಂದರೆ ಈ ಅಕ್ರಮ ಮಳಿಗೆಗಳಿಗೆ ಚೆಸ್ಕಾಂನಿಂದ ವಿದ್ಯುತ್ ಸಂಪರ್ಕವನ್ನೂ ನೀಡಲಾಗಿತ್ತು.

ಕೆಲ ವರ್ಷಗಳ ಹಿಂದೆ ಹೆಂಚಿನ ಮನೆಯಂತಿದ್ದ ಕಟ್ಟಡದಲ್ಲಿ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆ ಕಾರ್ಯ ನಿರ್ವಹಿಸುತ್ತಿತ್ತು. ಆ ನಂತರ ಪೊಲೀಸ್ ಠಾಣೆಯನ್ನು ಸ್ಥಳಾಂತರಿಸಿ, ಆ ಸ್ಥಳದಲ್ಲಿ ಮಿನಿ ವಿಧಾನಸೌಧ ನಿರ್ಮಿಸಿ ಅಲ್ಲಿಗೆ ತಹಸೀಲ್ದಾರ್ ಕಚೇರಿ, ಸಬ್ ರಿಜಿಸ್ಟ್ರಾರ್ ಕಚೇರಿ ಸೇರಿದಂತೆ ತಾಲೂಕು ಕಚೇರಿಗಳನ್ನು ಸ್ಥಳಾಂತರಿಸಲಾಗಿತ್ತು. ಮಿನಿ ವಿಧಾನ ಸೌಧ ನಿರ್ಮಾಣವಾಗಿ ತಹಸೀಲ್ದಾರ್ ಕಚೇರಿ ಕಾರ್ಯಾರಂಭವಾಗುವವರೆಗೂ ಈ ಸ್ಥಳದಲ್ಲಿ ಯಾವುದೇ ರೀತಿಯ ವಾಣಿಜ್ಯ ಕಟ್ಟಡಗಳಿರಲಿಲ್ಲ ಎಂದು ಹೇಳಲಾಗಿದೆ. ಆ ನಂತರ ತಹಸೀಲ್ದಾರ್ ಕಚೇರಿಗೆ ಬರುವ ಸಾರ್ವಜನಿಕರಿಗೆ ಅವಶ್ಯವಿರುವ ಜೆರಾಕ್ಸ್ ಅಂಗಡಿ, ಪತ್ರ ಬರಹಗಾರರ ಕಚೇರಿಗಳು ಸೇರಿದಂತೆ 5 ಅಂಗಡಿಗಳನ್ನು ಒಂದೇ ಸೂರಿನಡಿ ನಿರ್ಮಿಸಿ, ಅದಕ್ಕೆ ಚೆಸ್ಕಾಂನಿಂದ ವಿದ್ಯುತ್ ಸಂಪರ್ಕವನ್ನೂ ಪಡೆದು ಬಾಡಿಗೆಗೆ ನೀಡಲಾಗಿತ್ತು.

ಸರ್ಕಾರಕ್ಕೆ ಸೇರಿದ ಜಾಗದಲ್ಲಿ ಅಕ್ರಮ ಕಟ್ಟಡ ನಿರ್ಮಿಸಿರುವುದು ಗೊತ್ತಿದ್ದರೂ ಕೂಡ ಈವರೆಗೆ ಯಾವುದೇ ಅಧಿಕಾರಿ ಇದರತ್ತ ಗಮನಹರಿಸದೇ ತೆಪ್ಪಗಿದ್ದರು ಎಂದು ಆರೋಪಿಸಲಾಗಿದ್ದು, ಮಹೇಶ್ ಕುಮಾರ್ ಅವರು ತಹಸೀಲ್ದಾರರಾಗಿ ಬಂದ ನಂತರ ದಾಖಲೆಗಳನ್ನು ಪರಿಶೀಲಿಸಿ, ಇಂದು ಸಂಜೆ ಪೊಲೀಸರ ಭದ್ರತೆಯೊಂದಿಗೆ ಈ ಅಂಗಡಿಗಳನ್ನು ಜೆಸಿಬಿ ಮೂಲಕ ನೆಲಸಮ ಮಾಡಿದ್ದಾರೆ. ಈ ಕಾರ್ಯಾಚರಣೆಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ರಾಘವೇಂದ್ರ, ನಾಯಕ್, ಗ್ರಾಮ ಆಡಳಿತಾಧಿಕಾರಿ ಮಹೇಶ್, ನಾಗೇಶ್ ಕುಮಾರ್, ಅಜೀಂ ಖಾನ್, ಸರ್ವೆ ಸೂಪರ್‌ವೈಸರ್ ಸುರೇಶ್ ಇನ್ನಿತರರಿದ್ದರು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ತಹಸೀಲ್ದಾರ್ ಮಹೇಶ್ ಕುಮಾರ್, ಮಿನಿ ವಿಧಾನಸೌಧ ಹಿಂಭಾಗ ಒಂದೇ ಸೂರಿನಡಿ 5 ಮಳಿಗೆಗಳನ್ನು ನಿರ್ಮಿಸಿ ವಾಣಿಜ್ಯ ಉದ್ದೇಶಕ್ಕಾಗಿ ಬಾಡಿಗೆಗೆ ನೀಡಿರುವುದು ನನ್ನ ಗಮನಕ್ಕೆ ಬಂದಿತ್ತು. ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಹೇಳಿ ಮಳಿಗೆಗಳನ್ನು ಖಾಲಿ ಮಾಡುವಂತೆ ಕಳೆದ ಒಂದು ವಾರದಿಂದಲೂ ಮಳಿಗೆಯಲ್ಲಿದ್ದವರಿಗೆ ಹೇಳುತ್ತಿದ್ದೆವು. ಆದರೆ, ಅವರು ಮಳಿಗೆಗಳನ್ನು ಖಾಲಿ ಮಾಡದ ಕಾರಣ ಇಂದು ಕಾನೂನುಬದ್ಧವಾಗಿ ಅವುಗಳನ್ನು ನೆಲಸಮಗೊಳಿಸಲಾಗಿದೆ. ಇದೇ ಜಾಗದಲ್ಲಿ ಪಿಎಲ್‌ಡಿ ಬ್ಯಾಂಕ್ ಕಟ್ಟಡವಿದ್ದು, ಅದಕ್ಕೆ ಸಂಬಂಧಿಸಿದಂತೆ ಬ್ಯಾಂಕ್‌ನವರ ಬಳಿ ದಾಖಲೆಗಳಿವೆ ಎಂದು ಗೊತ್ತಾಗಿದೆ. ಕೈಗಾರಿಕಾ ಸಹಕಾರ ಸಂಘದ ಕಟ್ಟಡವೂ ಇದ್ದು, ಅದಕ್ಕೆ ಸಂಬಂಧಿಸಿದ ದಾಖಲೆಗಳು ಇರುವುದಾಗಿ ಸಂಘದವರು ತಿಳಿಸಿದ್ದಾರೆ. ದಾಖಲೆಗಳನ್ನು ಹಾಜರುಪಡಿಸುವಂತೆ ಅವರಿಗೆ ಹೇಳಲಾಗಿದೆ. ಅವರು ಹಾಜರುಪಡಿಸುವ ದಾಖಲೆಗಳನ್ನು ಪರಿಶೀಲಿಸಲಾಗುವುದು. ಅಲ್ಲದೇ, 15x20 ವಿಸ್ತೀರ್ಣದ ಕಟ್ಟಡವೊಂದಿದ್ದು, ಅದಕ್ಕೆ 1985ರಲ್ಲಿ ನಕ್ಷೆ ಮಂಜೂರು ಮಾಡಲಾಗಿದೆ ಎಂಬುದಕ್ಕೆ ಸಂಬಂಧಿಸಿದ ದಾಖಲೆಯನ್ನು ಅವರು ನೀಡಿದ್ದಾರೆ ಎಂದು ತಿಳಿಸಿದರು. ಈ ಅಕ್ರಮ ಮಳಿಗೆಗಳಿಗೆ ಚೆಸ್ಕಾಂನವರು ಯಾವ ಆಧಾರದಲ್ಲಿ ವಿದ್ಯುತ್ ಸಂಪರ್ಕ ನೀಡಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ ಎಂದ ಮಹೇಶ್‌ಕುಮಾರ್, ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಮಳಿಗೆ ನಿರ್ಮಿಸಿ ವಾಣಿಜ್ಯ ಉದ್ದೇಶಕ್ಕೆ ಬಾಡಿಗೆಗೆ ನೀಡಿರುವವರ ವಿರುದ್ಧ ಸರ್ಕಾರಿ ಜಾಗದ ಅತಿಕ್ರಮ ಪ್ರವೇಶ ಆರೋಪದಡಿ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಬಜೆಟ್‌ನಲ್ಲಿ ಮೈಸೂರಿಗೆ ಯಾವುದೇ ದೊಡ್ಡ ಅನುದಾನ ನೀಡಿಲ್ಲ

ಮೈಸೂರಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಪ್ರತಿಕ್ರಿಯೆ



ಮೈಸೂರು, ಫೆ.17(ಜಿಎ)–ರಾಜ್ಯ ಬಜೆಟ್ ಬಗ್ಗೆ ಮೈಸೂರಿಗೆ ಬಹಳ ನಿರೀಕ್ಷೆ ಇತ್ತು. ಆದರೆ, ಏನೂ ನೀಡಿಲ್ಲ. ಯಾವುದೇ ದೊಡ್ಡ ಅನುದಾನ ಸಿಕ್ಕಿಲ್ಲ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಮತ್ತು ಬಿಜೆಪಿ ಮುಖಂಡರಾದ ಭಾಸ್ಕರ್ ರಾವ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಬಿಜೆಪಿ ಕಚೇರಿಗೆ ಶನಿವಾರ ಭೇಟಿ ನೀಡಿದ್ದ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ನಗರ ಅಧ್ಯಕ್ಷ ಎಲ್.ನಾಗೇಂದ್ರ ಮತ್ತು ಬಿಜೆಪಿ ಪದಾಧಿಕಾರಿಗಳೊಂದಿಗೆ ಔಪಚಾರಿಕ ಮಾತುಕತೆ ನಡೆಸಿ, ನಂತರ ಮಾಧ್ಯಮಗಳೊಂದಿಗೆ ಮಾತನಾಡಿದರು.

ಲೋಕಸಭಾ ಚುನಾವಣಾ ದೃಷ್ಟಿಯಿಂದ ಮುಖ್ಯಮಂತ್ರಿಗಳ ತವರು ಜಿಲ್ಲೆಯಾಗಿರುವ ಮೈಸೂರಿಗೆ ಬಜೆಟ್‌ನಲ್ಲಿ ಸಾಕಷ್ಟು ಯೋಜನೆ ಮತ್ತು ಅನುದಾನ ನೀಡುತ್ತಾರೆ ಎಂಬ ನಿರೀಕ್ಷೆ ಇತ್ತು. ಆ ಮಟ್ಟದ ಯೋಜನೆಗಳನ್ನು ಕೊಟ್ಟಿಲ್ಲ. ಮುಖ್ಯವಾಗಿ ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಫ್ಲೈಓವರ್, ಪ್ರವಾಸೋದ್ಯಮಕ್ಕೂ ಹೆಚ್ಚು ಅನುದಾನ ಕೊಡಬೇಕಿತ್ತು ಎಂದರು.

ಬಜೆಟ್‌ನಲ್ಲಿ ಬಂಡವಾಳಕ್ಕೆ ಹೆಚ್ಚು ಸಾಲ ಮಾಡಬೇಕಿತ್ತು. ಆದರೆ ಅವರು ಮಾಡಿಲ್ಲ. 55 ಸಾವಿರ ಕೋಟಿ ಇರುವುದು ಅಭಿವೃದ್ಧಿಗೆ ಎಂದು ಹೇಳಿದ್ದಾರೆ. ಉಳಿದ ಹಣದ ಬಗ್ಗೆ ನಾವು ಹೆಚ್ಚಿನ ಚಿಂತನೆ ಮಾಡಬಾರದು. ಅದು ತ್ರಿಕೋನದಲ್ಲಿದ್ದು, ಅವರ ಗ್ಯಾರಂಟಿ, ಸಾಲ ತೀರಿಸಲು ಮತ್ತು ಸಂಬಳ ನೀಡಲು ಇಟ್ಟುಕೊಂಡಿದ್ದಾರೆ. ನಾಲ್ಕು ಲಕ್ಷಕ್ಕೂ ಹೆಚ್ಚು ಕೋಟಿ ಮೇಲೆ ಬಜೆಟ್ ಇಡಬಹುದಾಗಿತ್ತು. ಆದರೆ, ಇವರು ಇನ್ನೂ ಚಿಲ್ಲರೆ ಹುಡುಕಾಟದಲ್ಲಿರುವವರು, ನೋಟಿನ ಬಗ್ಗೆ ಗಮನ ಹರಿಸಿಲ್ಲ. ನಾನು ಆ ಸ್ಥಾನದಲ್ಲಿ ಇದ್ದಿದ್ರೆ 4 ಲಕ್ಷ ಕೋಟಿ ಬಜೆಟ್ ಗಾತ್ರ ಇಡುತ್ತಿದ್ದೆ ಎಂದು ತಿಳಿಸಿದರು.

ಮೈಸೂರಿನಲ್ಲಿ ಓಡಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ. ಮೈಸೂರು ಮೂಲದವನಾಗಿದ್ದು, ವೃತ್ತಿ ಜೀವನದಲ್ಲಿ ಮೈಸೂರು, ಕೊಡಗು ಭಾಗದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದೇನೆ. ಈ ಭಾಗದ ಜನರ ನಾಡಿ ಮಿಡಿತ ಬಲ್ಲೆ. ಆದ್ದರಿಂದ ನಾನು ಆಕಾಂಕ್ಷಿ ಆಗಿದ್ದೇನೆ. ಜೊತೆಗೆ ಟಿಕೆಟ್ ಪಡೆಯುವ ವಿಶ್ವಾಸ ಇದೆ. ಈಗಾಗಲೇ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಿದ್ದೇನೆ ಎಂದರು.

ಈಗಾಗಲೇ ಕ್ಷೇತ್ರದ ಮತದಾರರು, ಪಕ್ಷದ ಮುಖಂಡರನ್ನು ಭೇಟಿ ಮಾಡುವ ಕೆಲಸ ಮಾಡುತ್ತಿದ್ದೇನೆ. ಟಿಕೆಟ್ ಸಿಗಲಿ ಬಿಡಲಿ ಪಕ್ಷದಲ್ಲಿರುತ್ತೇನೆ. ಪಕ್ಷೇತರ ಸ್ಪರ್ಧೆ ಮಾತೇ ಇಲ್ಲ. ಪಕ್ಷ ಎನ್ನುವುದು ತಾಯಿ ಇದ್ದ ಹಾಗೆ.ಹಾಗಾಗಿ ಪಕ್ಷ ಯಾರನ್ನೇ ಅಭ್ಯರ್ಥಿ ಮಾಡಿದರು, ಅವರ ಪರ ಕೆಲಸ ಮಾಡುತ್ತೇನೆ ಎಂದರು.

ಮೈಸೂರಿನಲ್ಲಿ ಮಾದರಿ ವಿಧಾನಸಭಾ, ಕರಡು ರಚನಾ ಸ್ಪರ್ಧೆ



ಮೈಸೂರು ನಗರಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಶನಿವಾರ ಜೆಎಸ್‌ಎಸ್ ಕಾನೂನು ಕಾಲೇಜು ರಾಜ್ಯ ಮಟ್ಟದ ಮಾದರಿ ವಿಧಾನಸಭಾ ಮತ್ತು ಶಾಸನಗಳ ಕರಡು ರಚನಾ ಸ್ಪರ್ಧೆ ಏರ್ಪಡಿಸಿತ್ತು.

ಮೈಸೂರು, ಫೆ.17(ಬಿಎಲ್‌ಯು)– ಮೈಸೂರು ನಗರಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಪ್ರಥಮ ರಾಜ್ಯ ಮಟ್ಟದ ಮಾದರಿ ವಿಧಾನಸಭಾ ಮತ್ತು ಶಾಸನಗಳ ಕರಡು ರಚನಾ ಸ್ಪರ್ಧೆ ನಡೆಯಿತು.

ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜು ಆಯೋಜಿಸಿದ್ದ ಸ್ಪರ್ಧೆಯಲ್ಲಿ ಕರ್ನಾಟಕದ ಹಲವು ಕಾನೂನು ಕಾಲೇಜುಗಳ 70 ಸ್ಪರ್ಧಿಗಳು ಭಾಗವಹಿಸಿದ್ದರು.

ವಿಧಾನಸಭಾ ಅಧಿವೇಶನದಂತೆ ಕಾನೂನು ವಿದ್ಯಾರ್ಥಿಗಳು ಆಡಳಿತ ಹಾಗೂ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಕಾಯ್ದೆ, ತಿದ್ದುಪಡಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು.

ಆಡಳಿತ ಮತ್ತು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ವಿದ್ಯಾರ್ಥಿಗಳು ನಡೆಸಿದ ಚರ್ಚೆ ನೈಜವಾಗಿತ್ತು. ಅಷ್ಟೇ ಅಲ್ಲದೆ ಹಾಲಿ ಮುಖ್ಯಮಂತ್ರಿ, ಮಂತ್ರಿ ಹಾಗೂ ಶಾಸಕರು ನಡೆಸುವ ಚರ್ಚೆಯನ್ನು ಮೀರಿಸುವಂತಿತ್ತು.

ಜನಪರ ಯೋಜನೆಗಳ ಕುರಿತಂತೆ ವಿರೋಧ ಪಕ್ಷ ನಾಯಕರ ಪ್ರಶ್ನೆಗೆ ಆಡಳಿತ ಪಕ್ಷದವರು ತಕ್ಕ ಉತ್ತರ ನೀಡಿದರು. ಹಾಗೆಯೇ ವಿರೋಧ ಪಕ್ಷದ ನಾಯಕರು ಆಡಳಿತ ಪಕ್ಷದವರನ್ನು ಇಕ್ಕಟ್ಟಿಗೆ ಸಿಲುಕಿಸುವ ಹಲವು ಪ್ರಶ್ನೆಗಳನ್ನು ಕೇಳುತ್ತಿದ್ದರು.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ನಿನ್ನೆಯೇ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದ್ದರು. ಇಂದು ಇಡೀ ದಿನ ಸ್ಪರ್ಧೆ ನಡೆಯಿತು.

ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಸವಿತಾ, ಕಾನೂನು ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಹೇಮಚಂದ್ರ ವಿದ್ಯಾರ್ಥಿಗಳ ಚರ್ಚೆಯನ್ನು ಆಲಿಸಿದರು.

ಕನ್ನಡ ನಾಡಿನ ಐಕ್ಯತೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ರಾಜ್ಯ ಪತ್ರಾಗಾರ ಇಲಾಖೆ ಆಯೋಜಿಸಿದ್ದ ಕರ್ನಾಟಕ ಏಕೀಕರಣ ಮತ್ತು ಕನ್ನಡ ಅಸ್ಮಿತೆ ಕುರಿತ ಎರಡು ದಿನಗಳ ವಿಚಾರ ಸಂಕಿರಣವನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿದರು.

ಮೈಸೂರು, ಫೆ17(ಬಿಎಲ್‌ಯು)– ಕರ್ನಾಟಕ ಏಕೀಕರಣ ಕಾರ್ಯಕ್ರಮವನ್ನು ಪ್ರತಿ ವರ್ಷ ಆಯೋಜಿಸಿ ವಿದ್ಯಾರ್ಥಿಗಳಿಗೆ ಕನ್ನಡ ನಾಡಿನ ಐಕ್ಯತೆ ಬಗ್ಗೆ ಅರಿವು ಮೂಡಿಸಬೇಕು ಎಂದು ಶಾಸಕ ಕೆ.ಹರೀಶ್ ಗೌಡ ರಾಜ್ಯ ಪತ್ರಾಗಾರ ಇಲಾಖೆಗೆ ಸಲಹೆ ನೀಡಿದರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ–50 ಹಾಗೂ ಕರ್ನಾಟಕ ನಾಮಕರಣ–50ರ ಸಂಭ್ರಮಾಚರಣೆ ಮಹೋತ್ಸವ ಅಂಗವಾಗಿ ನಡೆದ ಕರ್ನಾಟಕ ಏಕೀಕರಣ ಮತ್ತು ಕನ್ನಡ ಅಸ್ಮಿತೆ ಕುರಿತ ಎರಡು ದಿನಗಳ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಏಕೀಕರಣ ಕುರಿತಂತೆ ಪತ್ರಾಗಾರ ಇಲಾಖೆ ಆಯೋಜಿಸುವ ಕಾರ್ಯಕ್ರಮ ಈ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗದೆ ವಿವಿಧ ವಿಚಾರ ಇಟ್ಟುಕೊಂಡು ಪ್ರತಿ ವರ್ಷ ನಡೆಸಬೇಕು ಎಂದು ಹೇಳಿದರು.

ಪತ್ರಾಗಾರ ಇಲಾಖೆಯು ದೇಶದ, ರಾಜ್ಯದ ಹಾಗೂ ನಗರದ ಎಲ್ಲಾ ರೀತಿಯ ದಾಖಲಾತಿಗಳನ್ನು ಸಂರಕ್ಷಣೆ ಮಾಡುವುದರ ಜೊತೆಗೆ ಅವಶ್ಯವಿರುವ ಹಲವು ಮಾಹಿತಿ ನೀಡುತ್ತಾ ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ಪ್ರಶಂಸಿಸಿದರು.

ಯಾವುದೇ ಒಬ್ಬ ಸಂಶೋಧಕ ಸಂಶೋಧನೆ ಮಾಡಲು ಪತ್ರಾಗಾರ ಇಲಾಖೆ ಕಲೆ ಹಾಕಿರುವ ಮಾಹಿತಿಗಳು ಪೂರಕ ಸಹಕಾರ ನೀಡುತ್ತದೆ. ಇಲ್ಲಿರುವ ದಾಖಲೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಜ್ಞಾನ ವಿಕಾಸವಾಗುತ್ತದೆ. ಈ ಮೂಲಕ ಪತ್ರಾಗಾರ ಇಲಾಖೆಯ ಮಾಹಿತಿಯನ್ನು ಪ್ರತಿಯೊಬ್ಬರು ಪಡೆಯಬೇಕು ಎಂದು ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಸಲಹೆ ನೀಡಿದರು.

ಇತಿಹಾಸಕ್ಕೆ ಸಂಬಂಧಿಸಿದ ಹಲವು ದಾಖಲೆಗಳನ್ನು ಅದರಲ್ಲೂ ವಿಶೇಷವಾಗಿ ಮೈಸೂರಿನ ಇತಿಹಾಸದ ಬಗ್ಗೆ ತಿಳಿಸುವ ದಾಖಲೆಗಳನ್ನು ಸಂಗ್ರಹಿಸಲಾಗಿದ್ದು, ಸಾರ್ವಜನಿಕರು ಅದರಲ್ಲೂ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕ ಡಾ.ಗವಿಸಿದ್ದಯ್ಯ ತಿಳಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನಮ್ಮ ಹಿರಿಯರು, ಹಲವು ದಿಗ್ಗಜರು ಈಗಾಗಲೇ ಕನ್ನಡ ದೀಪವನ್ನು ಹಚ್ಚುವ ಕೆಲಸ ಮಾಡಿದ್ದಾರೆ. ಅದನ್ನು ದ್ವಿಗುಣಗೊಳಿಸಿ ಉಳಿಸುವುದು ನಮ್ಮ ಕರ್ತವ್ಯ ಎಂದು ಅಭಿಪ್ರಾಯಪಟ್ಟರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಅಧ್ಯಕ್ಷ ಟಿ.ನಾಗರಾಜು, ಪ್ರಿನ್ಸಿಪಾಲ್ ಡಾ.ಎಸ್.ಮರಿಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಮಗಾರಿಗಳ ಪರಿವೀಕ್ಷಣೆ

ಮೈಸೂರು, ಫೆ.17– ರಾಷ್ಟ್ರೀಯ ಗುಣ ನಿಯಂತ್ರಣ ನಿರ್ವಾಹಕರಾದ ಪ್ರಕಾಶ್ ರಮಿನಿ ರವಿ ರವರು ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ ಮತ್ತು ಟಿ.ನರಸೀಪುರ ತಾಲೂಕುಗಳ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–2 ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–3 ರ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಫೆ. 18 ರಿಂದ ಫೆ. 20 ರವರೆಗೆ ಪರಿವೀಕ್ಷಿಸಲಿದ್ದಾರೆ ಎಂದು ಆರ್.ಡಿ.ಪಿ.ಆರ್ ಯೋಜನಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕರು, ವಿದ್ಯಾರ್ಥಿಗಳು ಬಸವಣ್ಣನವರ ವಚನ ಅನುಸರಿಸಬೇಕು

ಶಾಸಕ ಕೆ.ಹರೀಶ್‌ಗೌಡ ಕರೆ



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಶಾಸಕ ಕೆ.ಹರೀಶ್ ಗೌಡ ಅನಾವರಣ ಮಾಡಿದರು.

ಮೈಸೂರು, ಫೆ17(ಬಿಎಲ್‌ಯು)– ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ವಚನಗಳನ್ನು ಯುವಕರು ಹಾಗೂ ವಿದ್ಯಾರ್ಥಿಗಳು ಅನುಸರಿಸಬೇಕು ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಕರೆ ನೀಡಿದರು.

ಮೈಸೂರಿನ ಕಲಾಮಂದಿರದಲ್ಲಿ ಇಂದು ವಿಶ್ವಗುರು ಬಸವಣ್ಣನವರ ಭಾವಚಿತ್ರ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ವಚನಗಳ ಮೂಲಕ ಸಮ ಸಮಾಜ ನಿರ್ಮಾಣ ಮಾಡಲು ಮುಂದಾದ ಬಸವಣ್ಣನವರ ವಚನಗಳನ್ನು ಎಲ್ಲರೂ ಅಳವಡಿಸಿಕೊಂಡು, ಅನುಸರಿಸಬೇಕು ಎಂದು ಸಲಹೆ ನೀಡಿದರು.

ಯಾವುದೇ ಒಂದು ಜಾತಿ ಪಂಥಕ್ಕೆ ಸೀಮಿತವಾಗದೆ ಸರ್ವರ ಶ್ರೇಯೋಭಿವೃದ್ಧಿಗೆ ಹೋರಾಟ ಮಾಡಿದ ಬಸವಣ್ಣ 800 ವರ್ಷವಾದರೂ ಇನ್ನು ಕೂಡ ಪ್ರಸ್ತುತ. ಇಂತಹ ಮಹಾನುಭಾವರಿಗೆ ಸಿದ್ದರಾಮಯ್ಯ ಸರ್ಕಾರ ವಿಶ್ವಗುರು ಎಂಬ ಬಿರುದು ನೀಡಿದೆ ಎಂದು ಹೇಳಿದರು.

ಮೈಸೂರಿನ ಪ್ರತಿಯೊಂದು ಸರ್ಕಾರಿ ಕಚೇರಿಯಲ್ಲಿ ಇಂದಿನಿಂದ ಬಸವಣ್ಣನವರ ಭಾವಚಿತ್ರ ಅಳವಡಿಸಬೇಕು ಎಂದು ಅಧಿಕಾರಿಗಳಿಗೆ ಇದೇ ವೇಳೆ ಹರೀಶ್‌ಗೌಡ ಸೂಚನೆ ನೀಡಿದರು.

ಈ ವೇಳೆ ಮಾತನಾಡಿದ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿ ಎಲ್ಲಾ ಸಮಾಜವನ್ನು ಒಂದುಗೂಡಿಸಲು ಬಸವಣ್ಣ ತಮ್ಮ ಬದುಕನ್ನೆ ಮುಡುಪಾಗಿಟ್ಟರು. ಇಂತಹ ಮಹಾನುಭಾವನಿಗೆ ವಿಶ್ವಗುರು ಎಂದು ಸರ್ಕಾರ ಘೋಷಣೆ ಮಾಡಿರುವುದು ಒಳ್ಳೆಯ ಕ್ರಮ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಬಸವಣ್ಣನವರಿಗೆ ವಿಶ್ವಗುರು ಎಂದು ಸರ್ಕಾರ ಘೋಷಣೆ ಮಾಡಿದೆ. ಬಸವಣ್ಣನವರು ಸಮಾಜಕ್ಕೆ ನೀಡಿರುವ ಕೊಡುಗೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ಪ್ರತಿಯೊಬ್ಬ ವ್ಯಕ್ತಿ ಬಸವಣ್ಣನವರ ಆದರ್ಶಗಳನ್ನು ಅಳವಡಿಸಿಕೊಂಡು ಮಾದರಿ ಜೀವನ ನಡೆಸಲು ಮುಂದಾಗಬೇಕು ಎಂದು ಸಲಹೆ ನೀಡಿದ ಡಾ.ರಾಜೇಂದ್ರ, ಮೈಸೂರಿನ ಪ್ರತಿಯೊಂದು ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಅಳವಡಿಸಲಾಗುವುದು ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ.ಎಂ. ಗಾಯತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಡಿ.ಎಂ. ಸುದರ್ಶನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಪರೀಕ್ಷೆ... ತಲ್ಲಣಿಸದಿರು ಮನವೇ...

ಎಸ್.ಎಸ್.ಎಲ್.ಸಿ., ಪಿ.ಯು.ಸಿ ಪರೀಕ್ಷೆಗಳು ಇನ್ನೇನು ಪ್ರಾರಂಭವಾಗುತ್ತಿವೆ. ವಿದ್ಯಾರ್ಥಿಗಳು ಪರೀಕ್ಷಾ ಸಿದ್ಧತೆಯಲ್ಲಿ ತಲ್ಲೀನರಾಗಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಉತ್ತಮ ಫಲಿತಾಂಶ ಪಡೆಯಬೇಕೆಂಬ ನಿರೀಕ್ಷೆ ಇರುತ್ತದೆ. ಏಕಾಗ್ರತೆಯ ಅಧ್ಯಯನ, ಧಾರಣೆ ಮತ್ತು ಸ್ಮರಣೆಯಿಂದ ನಿರೀಕ್ಷೆಯಂತೆ ಫಲಿತಾಂಶ ಪಡೆಯುವುದು ವಿದ್ಯಾರ್ಥಿಗಳಿಗೆ ಸಾಧ್ಯವಿದೆ. ವಿದ್ಯಾರ್ಥಿಗಳು ಪರೀಕ್ಷೆಯ ದಿನ ಕೆಲವೊಂದು ಪ್ರಮುಖ ಅಂಶಗಳನ್ನು ಪರಿಣಾಮಕಾರಿಯಾಗಿ ಪಾಲಿಸುವುದರಿಂದ ಉತ್ತಮ ಫಲಿತಾಂಶವನ್ನು ಪಡೆಯಬಹುದು

- ಪರೀಕ್ಷೆ ದಿನ ಜೀರ್ಣವಾಗುವಂತಹ ಸಮತೋಲನ ಆಹಾರವನ್ನು ಸೇವಿಸಬೇಕು. ಜಿಡ್ಡು ಮತ್ತು ಎಣ್ಣೆ ಪದಾರ್ಥಗಳ ಆಹಾರ ಸೇವನೆಗಳಿಂದ ದೂರವಿರಬೇಕು.



- ಪ್ರತಿನಿತ್ಯ ಸಮರ್ಪಕ ರೀತಿ ನಿದ್ರೆಯನ್ನು ಮಾಡಿ, ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು.




- ಪರೀಕ್ಷೆ ಪ್ರಾರಂಭವಾಗುವ 30 ನಿಮಿಷಗಳು ಮುಂಚಿತವಾಗಿ ಹಾಜರಾಗಿ ತಮ್ಮ ನೋಂದಣಿ ಸಂಖ್ಯೆ, ನಮೂದಾಗಿರುವ ಕೊಠಡಿಯನ್ನು ಮೊದಲು ಗುರುತಿಸಿಕೊಂಡು ತಮಗೆ ನಿಗದಿಪಡಿಸಿರುವ ಸ್ಥಳದಲ್ಲಿ ವಿಶ್ರಾಂತ ಮನಸ್ಸಿನಿಂದ ಕುಳಿತುಕೊಳ್ಳಬೇಕು.



- ಪರೀಕ್ಷೆಗೆ ಅಗತ್ಯವಿರುವ ಪ್ರವೇಶಾತಿ ಪತ್ರ, ವಿದ್ಯಾರ್ಥಿಗುರುತಿನ ಚೀಟಿ, ಪೆನ್ನುಗಳು, ಪೆನ್ಸಿಲ್, ರಬ್ಬರ್, ಸ್ಕೇಲ್ ಮುಂತಾದ ಪರೀಕ್ಷಾ ಸಲಕರಣೆಗಳನ್ನು ತೆಗೆದುಕೊಂಡು ಹೋಗಬೇಕು.



- ಪರೀಕ್ಷೆಯ ದಿನ ಗೊಂದಲವನ್ನುಂಟು ಮಾಡುವ ಸ್ನೇಹಿತರೊಂದಿಗೆ ಯಾವ ಕಾರಣಕ್ಕೂ ಚರ್ಚಿಸಬಾರದು.



- ಪರೀಕ್ಷೆಯನ್ನು ಉತ್ತಮವಾಗಿ ಬರೆಯಬಲ್ಲೆ, ಉತ್ತಮ ಫಲಿತಾಂಶ ಪಡೆಯಬಲ್ಲೇ ಎನ್ನುವ ಸಕಾರಾತ್ಮಕ ಮನೋಭಾವವನ್ನು ರೂಢಿಸಿಕೊಳ್ಳಿ. ಈ ಮನೋಭಾವವನ್ನು ಪೋಷಕರೊಂದಿಗೆ ಹಂಚಿಕೊಳ್ಳಿ.



- ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನೆಪತ್ರಿಕೆಯನ್ನು ಆವೇಗ ಮತ್ತು ಆತಂಕದಿಂದ ಓದಲೇಬಾರದು. ತಾಳ್ಮೆ ಮತ್ತು ಪ್ರಜ್ಞಾವಸ್ಥೆಯಿಂದ ಪ್ರಶ್ನೆಗಳನ್ನು ಓದಿ ಅರ್ಥಮಾಡಿಕೊಂಡು ಉತ್ತರ ಬರೆಯಲು ಪ್ರಾರಂಭಿಸಿ.




- ಪ್ರಶ್ನೆ ಪತ್ರಿಕೆಯ ಪ್ರಾರಂಭದಲ್ಲಿ ಕಠಿಣ ಪ್ರಶ್ನೆಗಳು ಕಂಡು ಬಂದಾಗ ಗಾಬರಿಯಾಗಬೇಡಿ, ಯೋಚನೆಯಲ್ಲಿ ಕಾಲ ಕಳೆಯಬೇಡಿ. ಮೊದಲು ಚೆನ್ನಾಗಿ ಉತ್ತರ ಗೊತ್ತಿರುವ ಪ್ರಶ್ನೆಗಳಿಗೆ ಉತ್ತರ ಬರೆಯಲು ಪ್ರಾರಂಭಿಸಿ. ಕಠಿಣ ಪ್ರಶ್ನೆಗಳಿಗೆ ನೆನಪು ಮಾಡಿಕೊಂಡು ಉತ್ತರಿಸಿ.



- ಪ್ರಶ್ನೆಪತ್ರಿಕೆಯಲ್ಲಿರುವ ಪ್ರತಿ ಹಂತದ ಎಲ್ಲಾ ಸೂಚನೆಗಳನ್ನು ಜಾಗರೂಕತೆಯಿಂದ ಓದಿ ನಿರ್ದಿಷ್ಟ ಅಂಕದ ಪ್ರಶ್ನೆಗಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಸಮರ್ಪಕ ಉತ್ತರಗಳನ್ನು ಬರೆಯಿರಿ.



- ಪರೀಕ್ಷಾ ಸಮಯ ನಿರ್ವಹಣೆ ಬಗೆಗೆ ಗಮನವಿಡಿ. ಪರೀಕ್ಷೆ ಮುಗಿಯುವ 10 ನಿಮಿಷದ ಮೊದಲು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಿ.



- ಪರೀಕ್ಷಾ ಕೊಠಡಿಗೆ ಮೊಬೈಲ್, ಸ್ಮಾರ್ಟ್ ವಾಚ್, ಅನಗತ್ಯ ವಸ್ತುಗಳನ್ನು ತೆಗೆದುಕೊಂಡು ಹೋಗಲೇಬೇಡಿ.



- ಪ್ರತಿಯೊಂದು ವಿಷಯದ ಪರೀಕ್ಷೆ ಮುಗಿದ ನಂತರ ಅದರ ಬಗ್ಗೆ ಇತರರೊಂದಿಗೆ ಸರಿ ತಪ್ಪುಗಳನ್ನು ಚರ್ಚಿಸುವ ಬದಲು ಮುಂದಿನ ವಿಷಯದ ಪರೀಕ್ಷೆಗೆ ಏಕಾಗ್ರತೆಯಿಂದ ಸಿದ್ಧತೆ ಮಾಡಿಕೊಳ್ಳಲು ಪ್ರಾರಂಭಿಸಿ.



ಈ ಅಂಶಗಳನ್ನು ಅಳವಡಿಸಿಕೊಂಡು ಆತ್ಮವಿಶ್ವಾಸ ಮತ್ತು ದೃಢಮನಸ್ಸಿನಿಂದ ಪರೀಕ್ಷೆಯನ್ನು ಬರೆಯುವುದರಿಂದ ಯಶಸ್ಸು ನಿಮ್ಮದಾಗಲಿದೆ.



ಡಾ.ಪಿ.ಮಂಜುನಾಥ
ಮುಖ್ಯಸ್ಥರು, ಮನೋವಿಜ್ಞಾನ ಅಧ್ಯಯನ ವಿಭಾಗ
ಕರಾಮುವಿ, ಮೈಸೂರು
ಮೊ:9110873218

ಮಕ್ಕಳ ಚಿತ್ರಕಥೆ

ಹಿರಿಯ ಅನುಭವಸ್ಥರು ಹೇಳಿದ ಮಾತಿದು...!

-ಹೆಚ್.ಜಿ.ಎನ್.ಪ್ರಸಾದ್, ಮೊ:9845376199




"ಹಣ" ಮನುಷ್ಯನನ್ನು ಬದಲಿಸುವುದಿಲ್ಲ. ಮನುಷ್ಯನ "ನಿಜ ಸ್ವರೂಪ"ವನ್ನು ಹೊರ ಹಾಕುತ್ತದೆ.




ನಮ್ಮ ಪುಣ್ಯಕ್ಕೆ "ಮರಣ" ಎಲ್ಲರಿಗೂ ಇದೆ. ಇಲ್ಲದಿದ್ದರೆ ಶ್ರೀಮಂತರು ಇದನ್ನೂ ಗೇಲಿ ಮಾಡುತ್ತಿದ್ದರು, "ಅವನು ಬಡವನಾಗಿದ್ದ, ಅದಕ್ಕೆ ಸತ್ತು ಹೋದ ಅಂತ..!".




ನನ್ನ ಅಮ್ಮ ಹೇಳಿದ ಮಾತಿದು, "ತಟ್ಟೆಯಲ್ಲಿ ಅನ್ನವಿಲ್ಲದಷ್ಟು ಬಡವನಾಗ ಬೇಡ....! ತಟ್ಟೆಯಲ್ಲಿ ಅನ್ನ ಬಿಡುವಷ್ಟು, ಶ್ರೀಮಂತನಾಗಬೇಡ...!".



"ದೋಣಿ" ಮುಳುಗುವುದು ಖಚಿತವಾದಾಗ, ಬಂಧುಗಳೆಲ್ಲಾ ಹೊರ ಜಿಗಿದರು. ಭಾರ ಕಡಿಮೆಯಾಗಿ ದೋಣಿ ಮುಳುಗಲೇ ಇಲ್ಲ...!



ಹುಡುಕುತ್ತಾ ಹೋದ ಧರ್ಮರಾಯನಿಗೆ, "ಕೆಟ್ಟವರು" ಸಿಗಲಿಲ್ಲ, ಎಷ್ಟು ಹುಡುಕಿದರೂ ದುರ್ಯೋಧನನಿಗೆ "ಒಳ್ಳೆಯವರ" ದರ್ಶನವಾಗಲಿಲ್ಲ. "ನೋಡುವ ದೃಷ್ಟಿ", ನಮ್ಮ "ವ್ಯಕ್ತಿತ್ವ"ವನ್ನ ರೂಪಿಸುತ್ತದೆ...!



"ತಂದೆ-ತಾಯಿ" ಸ್ಥಾನ ತುಂಬಬಲ್ಲ ಜಗತ್ತಿನ ಏಕೈಕ ವ್ಯಕ್ತಿ, "ಮಗಳು" ಮಾತ್ರ...!



ವಾರಭವಿಷ್ಯ

18.02.2024 ರಿಂದ 24.02.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಕುಂಭ, ಚಂದ್ರ-ವೃಷಭ, ಮಿಥುನ, ಕಟಕ, ಸಿಂಹ, ಕುಜ-ಮಕರ, ಬುಧ-ಮಕರ, ಕುಂಭ, ಗುರು-ಮೇಷ, ಶುಕ್ರ-ಮಕರ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ವಸ್ತ್ರ ತಯಾರಿಕಾ ಕಂಪನಿಗಳಿಗೆ, ಜವಳಿ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವೂ, ಹೆಚ್ಚಿನ ಧನಲಾಭವೂ ಉಂಟಾಗುವುದು. ಸಮಾಜದಲ್ಲಿ ಒಳ್ಳೆಯ ಹೆಸರನ್ನು ಗಳಿಸುವಿರಿ. ವನಿತಾಮಣಿಯರು ಪ್ರಸಾದನ, ಅಲಂಕಾರಿಕ ವಸ್ತುಗಳಿಗೆ ಅಧಿಕ ಹಣ ವ್ಯಯಿಸುವರು. ವಯಸ್ಸಾದವರಿಗೆ ಅನೇಕ ರೀತಿಯ ಶರೀರ ಬಾಧೆಗಳು ಪೀಡಿಸುತ್ತವೆ.

ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ-6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಕುಟುಂಬ ಸದಸ್ಯರಲ್ಲಿ ಉಂಟಾಗಿದ್ದ ಸಂಘರ್ಷಗಳು ಸುಖಾಂತ್ಯವಾಗುವುದು. ನಿಮ್ಮ ಸ್ವಸಾಮರ್ಥ್ಯದಿಂದ ಕ್ಲಿಷ್ಟ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಸಹೋದರ, ಸಹೋದರಿಯರು ಸಮಯಕ್ಕೆ ಒದಗುವರು. ದೇಹಾರೋಗ್ಯ ಮರುಕಳಿಸುವುದು. ಉಚ್ಚ ಚಂದ್ರನಿಂದ ಹೋಟೆಲ್, ಕೇಟರಿಂಗ್ ಉದ್ಯಮಿಗಳಿಗೆ ಕೈತುಂಬಾ ಕೆಲಸವೂ ವರಮಾನವೂ ಉಂಟಾಗಲಿದೆ. ವಾರದ ಕಡೆಗೆ ಶಾಪಿಂಗ್ ಜೋರು.

ಶ್ರೀ ಚಾಮುಂಡೇಶ್ವರಿ ಉಪಾಸನೆ. ಶುಭ ಸಂಖ್ಯೆ-5

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಪ್ರಮುಖ ವಿಷಯಗಳನ್ನು ನಿಮ್ಮ ಹಿತೈಷಿಗಳಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಿ. ಕೌಟುಂಬಿಕ ಸಮಸ್ಯೆಗಳು ರಾಜಿ ಸೂತ್ರದಿಂದ ಬಗೆಹರಿಯುತ್ತವೆ. ಭೂಮಿಗೆ ಸಂಬಂಧಿಸಿದ ಕ್ರಯ-ವಿಕ್ರಯಗಳು ಲಾಭದಾಯಕವಾಗಿರುತ್ತದೆ. ಸರ್ಕಾರಿ ನೌಕರರಿಗೆ ಬಡ್ತಿ ಯೋಗವಿದೆ. ಅಗತ್ಯ ಸಮಯಕ್ಕೆ ಸರಿಯಾಗಿ ಆರ್ಥಿಕ ನೆರವು ದೊರೆಯುತ್ತದೆ. ಸಹೋದರರೊಂದಿಗಿನ ಭಿನ್ನಾಭಿಪ್ರಾಯಗಳು ಮುಂದುವರೆಯಲಿವೆ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-9

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವೃತ್ತಿಪರ ವ್ಯವಹಾರಗಳಲ್ಲಿ ಕೆಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಿರಿ. ಸ್ಥಿರಾಸ್ತಿ ವಿವಾದಗಳಿಗೆ ಮುಕ್ತಿ ದೊರೆಯಲಿದೆ. ಎಲೆಕ್ಟ್ರಿಕ್ ಹಾಗೂ ತಾಮ್ರ ಪದಾರ್ಥ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭವಾಗುವುದು. ಕ್ರೀಡಾಪಟುಗಳಿಗೆ ಸರ್ಕಾರದಿಂದ ಗೌರವ ಮನ್ನಣೆ ದೊರಕುವುದು. ಕಾರ್ಖಾನೆ ಮಿಷನ್ ವಸ್ತುಗಳೊಡನೆ ಕೆಲಸ ಮಾಡುವಾಗ ಅತ್ಯಂತ ಜಾಗ್ರತರಾಗಿರಬೇಕು. ಉಷ್ಣ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ರಾಜರಾಜೇಶ್ವರಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

'ಕಬ್ಬಿಣ ಕಾದಾಗ ತಟ್ಟಿಕೋ' ಎಂಬ ನಾಣ್ನುಡಿಯಂತೆ ಮುಖ್ಯ ಕೆಲಸ ಕಾರ್ಯಗಳನ್ನು ಅರ್ಜೆಂಟಾಗಿ ಮುಗಿಸಿಕೊಳ್ಳಿ. ಚಿನ್ನ, ಬೆಳ್ಳಿ ವ್ಯಾಪಾರಿಗಳಿಗೆ ಅಧಿಕ ಲಾಭವಾಗುವುದು. ಪ್ರಿಂಟಿಂಗ್ ಉದ್ಯಮ ನಡೆಸುವವರಿಗೆ, ಪ್ರಕಾಶಕರಿಗೆ ಸುಸಮಯವಿದೆ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ವಾರದ ಕಡೆಗೆ ಪುಣ್ಯಕ್ಷೇತ್ರ ಸಂದರ್ಶನ.

ಶ್ರೀ ಸತ್ಯನಾರಾಯಣ ಆರಾಧನೆ. ಶುಭ ಸಂಖ್ಯೆ-7

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನಿಮ್ಮ ಬುದ್ಧಿವಂತಿಕೆಯಿಂದ ದೀರ್ಘಾವಧಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಿರಿ. ಹಳೆಯ ಗೆಳೆಯರ ಭೇಟಿಯಿಂದ ಮನಃಸಂತೋಷ. ಉದ್ಯೋಗದಲ್ಲಿ ಬದಲಾವಣೆ ಆಗುವ ಸಂಭವವಿದೆ. ವಾರಮಧ್ಯೆ ಖರ್ಚು-ವೆಚ್ಚಗಳು ಹೆಚ್ಚಾಗುತ್ತದೆ. ಸ್ಥಿರಾಸ್ತಿ ಖರೀದಿಯ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆಯನ್ನು ಇಡಬೇಕಾಗುತ್ತದೆ. ವಿವಾಹದ ಮಾತುಕತೆಗಳು ಮುಂದೂಡಲ್ಪಡುತ್ತವೆ.

ಶ್ರೀ ಶ್ರೀನಿವಾಸನಿಗೆ ತುಳಸಿ ಸಮರ್ಪಣೆ. ಶುಭ ಸಂಖ್ಯೆ-2.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ಮನೋಇಚ್ಛಿತ ಕಾರ್ಯಗಳು ನೆರವೇರುತ್ತವೆ. ಮನೆಯಲ್ಲಿ ಸಂತಸದ ವಾತಾವರಣ. ಹೊಸ ಬೆಲೆ ಬಾಳುವ ವಸ್ತ್ರ, ಪದಾರ್ಥಗಳನ್ನು ಕೊಳ್ಳುವಿರಿ. ಉದ್ಯೋಗಾರ್ಥಿಗಳಿಗೆ ಖುಷಿ ನೀಡುವ ಸುದ್ದಿ ಬರುವುದು. ಪ್ರಮುಖ ವ್ಯಕ್ತಿಗಳ ಸಂಪರ್ಕದಿಂದ ಧನಾತ್ಮಕ ಪರಿಣಾಮಗಳು ಉಂಟಾಗಲಿದೆ. ಸಾಲ ಕೊಟ್ಟು ಕೈಸುಟ್ಟುಕೊಳ್ಳಬೇಡಿ. ವಾರಾಂತ್ಯಕ್ಕೆ ಪುಣ್ಯ ನದಿ ಸ್ನಾನ.

ಶ್ರೀದೇವೀ ಖಡ್ಗಮೂಲ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ಸಪ್ತಾಹದ ಆದಿಗೆ ಉಚ್ಚ ಚಂದ್ರನ ಕೃಪಾದೃಷ್ಟಿಯ ಫಲವಾಗಿ ಧನ-ಕನಕ, ವಸ್ತ್ರ ಪ್ರಾಪ್ತಿ. ನಿಮ್ಮ ಉತ್ತಮ ನಡತೆಯಿಂದ ಜನ ಮನ್ನಣೆಯನ್ನು ಗಳಿಸುವಿರಿ. ವೃತ್ತಿ ಸ್ಥಳದಲ್ಲಿ ಸೌಹಾರ್ದಯುತ ವಾತಾವರಣ ಇರುತ್ತದೆ. ಸಾಧು, ಸತ್ಪುರುಷರ ಭೇಟಿ ಹಾಗೂ ಆಶೀರ್ವಾದ ದೊರಕುವುದು. ವಿದ್ಯುತ್ ಉಪಕರಣ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರ ಹಾಗೂ ಲಾಭವಾಗುವುದು. ಸಣ್ಣಪುಟ್ಟ ಅನಾರೋಗ್ಯ ಕಾಡಬಹುದು.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-1.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಮನೋಇಚ್ಛಿತ ಕೆಲಸಗಳು ಸರಾಗವಾಗಿ ಸಾಗುವುದು. ಸ್ಥಿರಾಸ್ತಿ ಕ್ರಯ-ವಿಕ್ರಯಗಳಲ್ಲಿ ಉಂಟಾಗಿದ್ದ ಅಡಚಣೆಗಳು ನಿವಾರಣೆ ಆಗುವುದು. ವಕೀಲಿ ವೃತ್ತಿಯವರಿಗೆ ನ್ಯಾಯಾಧೀಶರಾಗಿ ಬಡ್ತಿ ಹೊಂದುವ ಅವಕಾಶವಿದೆ. ಕಾರ್ಮಿಕ ವೃತ್ತಿಯವರಿಗೆ ಸರ್ಕಾರದಿಂದ ಆರ್ಥಿಕ ನೆರವು ದೊರೆಯಲಿದೆ. ಕೃಷಿಕರಿಗೆ ಅವರ ಕಠಿಣ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಆರೋಗ್ಯದಲ್ಲಿ ವ್ಯತ್ಯಯವಾದೀತು.

ಶ್ರೀ ಗುರುರಾಯರ ಅರ್ಚನೆ. ಶುಭ ಸಂಖ್ಯೆ-8

ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)

ಈ ವಾರದಲ್ಲಿ ಸಂಸಾರದಲ್ಲೂ, ಸಾಮಾಜಿಕವಾಗಿಯೂ ಅನೇಕ ಸವಾಲುಗಳು ಎದುರಾದರೂ ಸಮರ್ಥ ರೀತಿಯಿಂದ ಎದುರಿಸಿ ಜಯಶೀಲರಾಗುವಿರಿ. ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬರುವುದು. ಕ್ಷೀರ ಜನ್ಯ ವಸ್ತು ವ್ಯಾಪಾರಿಗಳಿಗೆ ಹೆಚ್ಚಿನ ಆದಾಯವಿದೆ. ಪಶು ಮಾರಾಟದಿಂದಲೂ ಉತ್ತಮ ಲಾಭವಿದೆ. ಸತಿ-ಪತಿಯರು ಪರಸ್ಪರ ಸೋತು ನಡೆದರೆ ಬಾಳು ಸುಖಮಯ.

ಶ್ರೀ ಶನಿಸ್ತೋತ್ರ. ಶುಭ ಸಂಖ್ಯೆ-5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆದಿಗೆ ಹಣಕಾಸಿನ ನಿರ್ವಹಣೆಯಲ್ಲಿ ಎಚ್ಚರಿಕೆಯ ನಡೆ ಇರಲಿ. ಹಿರಿಯರನ್ನು ಗೌರವಿಸಿ. ಅವರ ಅಭಿಪ್ರಾಯಗಳಿಗೂ ಮನ್ನಣೆ ನೀಡಿದರೆ ಒಳಿತಾಗುವುದು. ಖಯಾಲಿ ತಿರುಗಾಟಗಳನ್ನು ತ್ಯಜಿಸಿದರೆ ನಿಮ್ಮ ರಕ್ಷಣೆ ನೀವೇ ಮಾಡಿಕೊಂಡಂತೆ. ಜನ್ಮಸ್ಥಿತ ಶನಿದೇವನಿಂದ ಕೆಲವೊಂದು ಯೋಜನೆಗಳು ಅರ್ಧಕ್ಕೆ ಸ್ಥಗಿತಗೊಳ್ಳುವುದು. ಮನೆ ಮಂದಿಯಲ್ಲಿ ಒಗ್ಗಟ್ಟು ಇದ್ದರೆ ಅದೇ 'ಒಬ್ಬಟ್ಟು'.


ಶ್ರೀ ವೆಂಕಟೇಶ್ವರಸ್ವಾಮಿ ದರ್ಶನ. ಶುಭ ಸಂಖ್ಯೆ-3.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಗುರು ಹಿರಿಯರ ಆಶೀರ್ವಾದದಿಂದ ನಿಮ್ಮ ಮನೋಕಾಮನೆಗಳು ಈಡೇರುವುದು. ಪ್ರೇಮಿಗಳಿಗೆ ಇದು ಶುಭ ವಾರ. ಕುಟುಂಬದ ಹಿರಿಯರಿಗೆ ಆರೋಗ್ಯದಲ್ಲಿ ವ್ಯತ್ಯಯವಾಗಬಹುದು. ವಾರದ ಉತ್ತರಾರ್ಧದಲ್ಲಿ ಮನೆಯಲ್ಲಿ ಶುಭ ಕಾರ್ಯಗಳು ಜರುಗುವ ಸಾಧ್ಯತೆ ಇದೆ. ಮಂಗಳವಾದ್ಯ ಮೊಳಗೀತು. ವಿದ್ಯಾರ್ಥಿಗಳಿಗೆ ಸಾಧನೆಯ ಗರಿಮೆ. ವಾರಾಂತ್ಯಕ್ಕೆ ಪೂಜೆ, ಪುನಸ್ಕಾರಗಳಲ್ಲಿ ಭಾಗವಹಿಸಿ ಧನ್ಯತಾಭಾವ.

ಶ್ರೀ ದಕ್ಷಿಣಾಮೂರ್ತಿ ದರ್ಶನ. ಶುಭ ಸಂಖ್ಯೆ-7

ಕೆ.ಆರ್.ನಗರ ಪುರಸಭೆಗೆ 26.13 ಲಕ್ಷ ಉಳಿತಾಯ ಬಜೆಟ್



ಕೆ.ಆರ್.ನಗರ, ಫೆ.17– ಪಟ್ಟಣದ ಪುರಸಭೆಯ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ಆಡಳಿತಾಧಿಕಾರಿಗಳೂ ಆದ ಹುಣಸೂರು ಎಸಿ ಮೊಹಮದ್ ಹಾರಿಸ್ ಸುಮೈರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 2024–25ನೇ ಸಾಲಿನ 26,13,500 ಲಕ್ಷ ರೂ.ಗಳ ಉಳಿತಾಯ ಬಜೆಟ್ ಅನ್ನು ಮುಖ್ಯಾಧಿಕಾರಿ ಡಾ.ಜಯಣ್ಣ ಮಂಡಿಸಿದರು.

ಪ್ರಸಕ್ತ ಸಾಲಿನಲ್ಲಿ ಪುರಸಭೆಗೆ ಸಾಕಷ್ಟು ಆದಾಯ ನಿರೀಕ್ಷಿಸಲಾಗಿದ್ದು, ಆ ಪೈಕಿ ಆಸ್ತಿ ತೆರಿಗೆ 280 ಲಕ್ಷ, ನೀರಿನ ತೆರಿಗೆ 92 ಲಕ್ಷ, ಪುರಸಭೆಗೆ ಸೇರಿದ ಮಳಿಗೆಗಳ ಬಾಡಿಗೆ 95 ಲಕ್ಷ, ಉದಿಮೆ ಪರವಾನಿಗೆ 15.8 ಲಕ್ಷ ಮತ್ತು ಕಟ್ಟಡ ಪರವಾನಿಗೆ, ಮೇಲ್ವಿಚಾರಣೆ ಹಾಗೂ ಖಾತೆ ಬದಲಾವಣೆಯಿಂದ 180 ಲಕ್ಷ ರೂ. ನಿರೀಕ್ಷಿಸಲಾಗಿದೆ.

ಸರ್ಕಾರದ 15ನೇ ಹಣಕಾಸು ಅನುದಾನದಿಂದ 160 ಲಕ್ಷ, ಎಸ್‌ಎಫ್‌ಸಿ ಅನುದಾನದಿಂದ 70 ಲಕ್ಷ ಎಸ್‌ಎಫ್‌ಸಿ ವಿದ್ಯುತ್ ಅನುದಾನದಿಂದ 150 ಲಕ್ಷ, ಎಸ್‌ಎಫ್‌ಸಿ ವೇತನ ಅನುದಾನದಿಂದ 325 ಲಕ್ಷ, ಎಸ್‌ಎಫ್‌ಸಿ ವಿಶೇಷ ಅನುದಾನದಿಂದ 405 ಲಕ್ಷ, ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ ದಿಂದ 3 ಲಕ್ಷ ಮತ್ತು ಸ್ವಚ್ಛ ಭಾರತ್ ಮಿಷನ್ ಅನುದಾನದಿಂದ 130 ಲಕ್ಷ ರೂ.ಗಳನ್ನು ನಿರೀಕ್ಷಿಸಲಾಗಿದೆ ಎಂದರು.

ಜೊತೆಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪುರಸಭೆಯಿಂದ ವಿವಿಧ ಯೋಜನೆ, ಕಾಮಗಾರಿ, ಅಭಿವೃದ್ಧಿ, ವೇತನ ಸೇರಿದಂತೆ ಇತರೆ ಬಾಬ್ತುಗಳಿಗೆ ಭರಿಸಬೇಕಾದ ಅಂದಾಜು ವ್ಯಯದ ಪಟ್ಟಿ ಮಂಡಿಸಿದ ಮುಖ್ಯಾಧಿಕಾರಿಗಳು ಆ ಸಂಬಂಧ ಪೂರ್ಣ ಮಾಹಿತಿ ನೀಡಿದರು.

ಕಚೇರಿ ನಿರ್ವಹಣೆಗೆ 65.25 ಲಕ್ಷ, ಕಟ್ಟಡ ರಸ್ತೆ, ಚರಂಡಿ, ಕಲ್ವರ್ಟ್ ಮ್ಯಾನ್ ಹೋಲ್ ದುರಸ್ಥಿ ಹಾಗೂ ನಿರ್ವಹಣೆಗೆ 70 ಲಕ್ಷ ರೂ., ಬೀದಿ ದೀಪ ನಿರ್ವಹಣೆಗೆ 35 ಲಕ್ಷ, ಪುರಸಭೆ ಸದಸ್ಯರ ಅಧ್ಯಯನ ಪ್ರವಾಸಕ್ಕೆ 10 ಲಕ್ಷ, ವಾಹನಗಳ ಇಂಧನ, ದುರಸ್ಥಿ ಮತ್ತು ನಿರ್ವಹಣೆಗೆ 25 ಲಕ್ಷ, ಹೊರಗುತ್ತಿಗೆ ನೌಕರರ ನೇರ ಪಾವತಿಗೆ 58 ಲಕ್ಷ, ಪೌರ ಕಾರ್ಮಿಕರ ಆರೋಗ್ಯ ತಪಾಸಣೆಗೆ 3 ಲಕ್ಷ, ಬೆಳಗ್ಗಿನ ಉಪಾಹಾರಕ್ಕೆ 10 ಲಕ್ಷ, ವಿಮೆಗೆ 6 ಲಕ್ಷ, ನೀರು ಸರಬರಾಜಿಗೆ 94 ಲಕ್ಷ ರೂ. ವೆಚ್ಚವಾಗಲಿದೆ ಎಂದರು.

ಜೊತೆಗೆ ಕಚೇರಿ ಯಂತ್ರೋಪಕರಣ ಖರೀದಿಗೆ 11 ಲಕ್ಷ, ರಸ್ತೆ ನಿರ್ಮಾಣಕ್ಕೆ 200 ಲಕ್ಷ, ಚರಂಡಿ ನಿರ್ಮಾಣಕ್ಕೆ 100 ಲಕ್ಷ, ಮಳೆ ನೀರು ಚರಂಡಿ ನಿರ್ಮಾಣಕ್ಕೆ 18 ಲಕ್ಷ, ಸ್ಮಶಾನ ಅಭಿವೃದ್ಧಿಗೆ 30 ಲಕ್ಷ, ಘನತ್ಯಾಜ್ಯ ವಸ್ತು ವಿಲೇವಾರಿ ಘಟಕ ಅಭಿವೃದ್ಧಿಗೆ 138 ಲಕ್ಷ, ನೀರು ಸರಬರಾಜು ವಿಭಾಗಕ್ಕೆ 50 ಲಕ್ಷ, ಯುಜಿಡಿ ಸಂಪರ್ಕ ಕಲ್ಪಿಸಲು 20 ಲಕ್ಷ, ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ 100 ಲಕ್ಷ ಮತ್ತು ಉದ್ಯಾನವನಗಳ ಅಭಿವೃದ್ಧಿಗೆ 50 ಲಕ್ಷ ಖರ್ಚು ಮಾಡಲಾಗುತ್ತದೆ ಎಂದರು.

ಸಮರ್ಪಕ ಕುಡಿಯುವ ನೀರು ಸರಬರಾಜಿಗೆ ಕ್ರಮ ವಹಿಸಿ

ಸದಸ್ಯರ ಒಕ್ಕೊರಲ ಒತ್ತಾಯ

ಕೆ.ಆರ್.ನಗರ: ಬೇಸಿಗೆ ಸಮೀಪಿಸುತ್ತಿರುವುದರಿಂದ ಪಟ್ಟಣದ 23 ವಾರ್ಡ್‌ಗಳಿಗೂ ಸಮರ್ಪಕ ಕುಡಿಯುವ ನೀರು ಸರಬರಾಜು ಮಾಡಲು ಪುರಸಭೆ ಅಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳು ಗಮನ ಹರಿಸಬೇಕು ಎಂದು ಸದಸ್ಯರು ಒಕ್ಕೊರಲಿನಿಂದ ಒತ್ತಾಯಿಸಿದರು.

ಪಟ್ಟಣದ ಪುರಸಭೆಯಲ್ಲಿ ಎಸಿ ಮೊಹಮದ್ ಹಾರಿಸ್ ಸುಮೈರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಜೆಟ್ ಮಂಡನೆ ನಂತರ ನಡೆದ ಚರ್ಚೆಯಲ್ಲಿ ಸದಸ್ಯರು ಹಲವು ಸಮಸ್ಯೆ, ಅವುಗಳಿಗೆ ಪರಿಹಾರದ ದಾರಿ ತೆರೆದಿಟ್ಟರು.

ಸದಸ್ಯ ನಟರಾಜು 17ನೇ ವಾರ್ಡ್‌ನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿಂದೆ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡಿ 2 ವರ್ಷಗಳಾಗಿದ್ದರೂ ಈವರೆಗೆ ಅದನ್ನು ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ನೀರಿನ ಅಭಾವ ತೀವ್ರವಾಗಿದ್ದು ಈ ಬಗ್ಗೆ ಆಡಳಿತಾಧಿಕಾರಿಗಳು ಮತ್ತು ಮುಖ್ಯಾಧಿಕಾರಿಗಳು ಗಂಭೀರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪಟ್ಟಣದಲ್ಲಿ ಒಂದೇ ಒಂದು ಸಾರ್ವಜನಿಕ ಸ್ಮಶಾನವಿದ್ದು, ಶವ ಸಂಸ್ಕಾರ ಮಾಡಲು ತೊಂದರೆಯಾಗುತ್ತಿದೆ ಎಂದು ಸಭೆಯ ಗಮನ ಸೆಳೆದಾಗ ಇದಕ್ಕುತ್ತರಿಸಿದ ಆಡಳಿತಾಧಿಕಾರಿಗಳು ಕೂಡಲೇ ಮತ್ತೊಂದು ಸ್ಮಶಾನಕ್ಕೆ ಜಾಗ ಗುರುತಿಸಲು ತಹಸೀಲ್ದಾರ್‌ಗೆ ಸೂಚನೆ ನೀಡಲಾಗುತ್ತದೆ ಎಂದರು.

ಸದಸ್ಯ ಕೆ.ಎಲ್.ಜಗದೀಶ್ ಮಾತನಾಡಿ, ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಮ್ಯಾನ್ ಹೋಲ್‌ಗಳು ಒಡೆದು ರಸ್ತೆಯಲ್ಲೇ ಕೊಳಚೆ ನೀರು ಹರಿಯುವುದರಿಂದ ಸಂಚಾರಕ್ಕೆ ತೊಂದರೆ ಯಾಗಿದ್ದು, ಅದನ್ನು ದುರಸ್ತಿಗೊಳಿಸುವಂತೆ ಮನವಿ ಮಾಡಿದರು.

ಸದಸ್ಯರಾದ ಸದಸ್ಯೆ ವೀಣಾ, ತೋಂಟದಾರ್ಯ, ಶಿವುನಾಯಕ್, ಶಾರದ, ಶಂಕರ್ ಸ್ವಾಮಿ, ವಹೀದಾ ಬಾನು, ಸೌಮ್ಯ, ಅಪ್ರೋಜ್‌ಉನ್ನೀಸಾ, ಶಂಕರ್, ಮುಖ್ಯಾಧಿಕಾರಿ ಡಾ.ಜಯಣ್ಣ, ಕಂದಾಯಾಧಿಕಾರಿ ರಮೇಶ್, ವ್ಯವಸ್ಥಾಪಕಿ ಸುಧಾರಾಣಿ ಮತ್ತು ಕಚೇರಿಯ ವಿವಿಧ ವಿಭಾಗಗಳ ಸಿಬ್ಬಂದಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
5ಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
5ಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಸೈರನ್ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
5ಡಿ (ಕ)	2 ಪ್ರದರ್ಶನಗಳು
ಕೆಟಿಎಂ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
5ಡಿ (ಕ)	4 ಪ್ರದರ್ಶನಗಳು
ಪ್ರಭಾ	
ಇ–ಮೇಲ್ (ಕ)	2 ಪ್ರದರ್ಶನಗಳು
ಲೇಡಿಸ್ ಬಾರ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ.
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಷಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕರ್ತವ್ಯದಲ್ಲಿದ್ದಾಗಲೇ ಹೃದಯಾಘಾತ: ಯೋಧ ಸಾವು



ನಂಜನಗೂಡು, ಫೆ.17– ಅಸ್ಸಾಂನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಯೋಧರೊಬ್ಬರು ಹೃದಯಾಘಾತದಿಂದ ಶನಿವಾರ ಬೆಳಗ್ಗೆ ಸಾವನ್ನಪ್ಪಿದ್ದಾರೆ.

ತಾಲೂಕಿನ ಹುಲ್ಲಹಳ್ಳಿ ಗ್ರಾಮದ ನಿವೃತ್ತ ಪಿಡಿಓ ವೆಂಕಟರಾಮು ಎಂಬುವರ ಪುತ್ರ ವಿ.ನವೀನ್(43) ಸಾವನ್ನಪ್ಪಿದವರು. ಇವರು ಕಳೆದ 20 ವರ್ಷಗಳಿಂದ ಬಿಎಸ್‌ಎಫ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎನ್ನಲಾಗಿದೆ. ಯೋಧ ನವೀನ್ ಅವಿವಾಹಿತರಾಗಿದ್ದು, ಅವರಿಗೆ ತಂದೆ, ಓರ್ವ ಸಹೋದರ, ಇಬ್ಬರು ಸಹೋದರಿಯರು ಇದ್ದಾರೆ.

ಯೋಧ ನವೀನ್ ಅವರ ಸಹೋದರ ದೀಪು ಮಾತನಾಡಿ, ನವೀನ್ ಅವರು ಬೆಳಗ್ಗೆ 9.30ರಲ್ಲಿ ವಿಡಿಯೋ ಕಾಲ್ ಮೂಲಕ ನನ್ನ ಮತ್ತು ನನ್ನ ತಂದೆಯೊಂದಿಗೆ ಚೆನ್ನಾಗಿಯೇ ಮಾತನಾಡಿದ್ದ. ಅಲ್ಲದೇ ಸಹೋದರಿ ಹಾಗೂ ಆಕೆಯ ಮಗನೊಂದಿಗೂ ಮಾತನಾಡಿ ಯೋಗಕ್ಷೇಮ ವಿಚಾರಿಸಿದ್ದರು. ಆದರೆ ಬೆಳಗ್ಗೆ 11 ಗಂಟೆ ವೇಳೆಗೆ ಅವರ ಸ್ನೇಹಿತರು ಕರೆ ಮಾಡಿ ನವೀನ್ ಅವರಿಗೆ ಹೃದಯಾಘಾತವಾಗಿ ಮೃತಪಟ್ಟಿದ್ದಾರೆಂದು ತಿಳಿಸಿದರು. ಆ ವಿಷಯ ಕೇಳಿದಾಕ್ಷಣ ನಮಗೆ ಬರಸಿಡಿಲು ಬಡಿದಂತಾಯಿತು. ನವೀನ್ ಇನ್ನಿಲ್ಲ ಎಂಬುದನ್ನು ನಾವು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅಳಲು ತೋಡಿಕೊಂಡರು.

ಮೃತ ಯೋಧನ ಪಾರ್ಥಿವ ಶರೀರ ಭಾನುವಾರ ರಾತ್ರಿ ನಂಜನಗೂಡಿನ ನಿವಾಸಕ್ಕೆ ಬರಲಿದ್ದು, ಸೋಮವಾರ ಬೆಳಗ್ಗೆ ನಗರದ ಪರಶುರಾಮ ದೇವಾಲಯ ಸಮೀಪದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಾಲ್ಮೀಕಿ ಸಮುದಾಯದ ಪ್ರತಿಯೊಬ್ಬರಿಗೂ ಸೌಲಭ್ಯ ಕಲ್ಪಿಸಿ

ಸಚಿವರಿಗೆ ಮುಖಂಡ ತಾಯೂರು ಪ್ರಕಾಶ್ ಒತ್ತಾಯ

ತಿ.ನರಸೀಪುರ, ಫೆ.17– ಆರ್ಥಿಕವಾಗಿ ತೀರಾ ಹಿಂದುಳಿದಿರುವ ನಾಯಕ ಸಮಾಜದ ಪ್ರತಿಯೊಬ್ಬರಿಗೂ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ದೊರೆಯುವ ಸವಲತ್ತುಗಳು ಸಿಗುವಂತಾಗಬೇಕು ಎಂದು ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಒತ್ತಾಯಿಸಿದರು.

ಬೆಂಗಳೂರಿನ ವಿಧಾನಸೌಧದಲ್ಲಿ ಯುವಜನ ಕ್ರೀಡಾ ಮತ್ತು ಪರಿಶಿಷ್ಟ ವರ್ಗಗಳ ಇಲಾಖೆ ಸಚಿವ ಬಿ.ನಾಗೇಂದ್ರ ಅವರನ್ನು ಭೇಟಿ ಮಾಡಿ ಸಂಘದ ವತಿಯಿಂದ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿ ಮಾತನಾಡಿದ ಅವರು, ವಾಲ್ಮೀಕಿ ಸಮುದಾಯ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದು, ನಿಗಮದಿಂದ ಹೆಚ್ಚಿನ ನೆರವು ಕೊಡಿಸಬೇಕು ಎಂದು ಮನವಿ ಮಾಡಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಸಮಾಜಕ್ಕೆ ದೊರೆಯ ಬಹುದಾದ ಸೌಲಭ್ಯ ಕುಂಠಿತಗೊಳ್ಳುವುದು ಬೇಡ. ಗ್ಯಾರಂಟಿ ಯೋಜನೆಗಳ ಜೊತೆಗೆ ಸಮಾಜಕ್ಕೆ ದೊರೆಯಬಹುದಾದ ಸವಲತ್ತುಗಳನ್ನು ದೊರಕಿಸಿಕೊಡಬೇಕು ಎಂದು ಮನವಿ ಮಾಡಿದರು.



ಕ್ರೀಡಾ ಸಚಿವ ಬಿ.ನಾಗೇಂದ್ರ ಅವರನ್ನು ಸನ್ಮಾನಿಸಲಾಯಿತು

ಸಚಿವ ಬಿ.ನಾಗೇಂದ್ರ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಲಾಗುವುದು. ಸಮಾಜದ ಅಭಿವೃದ್ಧಿಗೆ ಸರ್ಕಾರ ಹಾಗೂ ನಿಗಮ ಬದ್ಧವಾಗಿದ್ದು, ಅಗತ್ಯ ಮೂಲ ಸೌಕರ್ಯ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಎನ್.ಎ.ಚೌಧರಿ, ಮಹರ್ಷಿ ವಾಲ್ಮೀಕಿ ಟ್ರಸ್ಟ್ ಸದಸ್ಯ ಹೆಚ್.ಸಿ.ಲೋಕೇಶ್, ನಿವೃತ್ತ ತಹಸೀಲ್ದಾರ್ ಭೀಮಪ್ಪ ತಳವಾರ್, ರಾಜ್ಯ ಹಿರಿಯ ಉಪಾಧ್ಯಕ್ಷ ದೇವರಾಜ್ ಪಾಳೇಗಾರ್, ರಾಮ, ಲಕ್ಷ್ಮಣ, ಡಾ.ಸೋಮನಾಯಕ್, ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್, ಆಲಗೂಡು ರಂಗಸ್ವಾಮಿ ಹಾಜರಿದ್ದರು.

ಪರೀಕ್ಷೆ ಭಯ ಬಿಟ್ಟು ಓದುವುದನ್ನು ಸಂಭ್ರಮಿಸಿ

ಡಿಡಿಪಿಐ ಹೆಚ್.ಕೆ.ಪಾಂಡು ವಿದ್ಯಾರ್ಥಿಗಳಿಗೆ ಕರೆ



ಪ್ರೇರಣಾದಾಯಕ ಕಾರ್ಯಾಗಾರವನ್ನು ಬಿಇಓ ಜಿ.ಶೋಭಾ ಉದ್ಘಾಟಿಸಿದರು.

ತಿ.ನರಸೀಪುರ, ಫೆ.17– ಮನಸ್ಸಿನಲ್ಲಿರುವ ನಕಾರಾತ್ಮಕ ಭಾವನೆ ತೊರೆದು ದೃಢ ಸಂಕಲ್ಪದಿಂದ ಓದಿದರೆ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ. ಪರೀಕ್ಷೆ ಭಯ ಬಿಟ್ಟು ಓದುವುದನ್ನು ಸಂಭ್ರಮಿಸುವಂತೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಕೆ.ಪಾಂಡು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪಟ್ಟಣದ ಹಳೇ ತಿರಮಕೂಡಲಿನ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಬನ್ನೂರು ರೋಟರಿ ಸಂಸ್ಥೆ ಸಹಯೋಗದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರೇರಣಾದಾಯಕ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಗುರುಗಳ ಮಾರ್ಗದರ್ಶನದಲ್ಲಿ ಕ್ರಮಬದ್ಧವಾಗಿ ಅಧ್ಯಯನ ಮಾಡಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಸಂಭ್ರಮ, ಸಡಗರದಿಂದ ಎದುರಿಸಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿ ಪೋಷಕರಿಗೆ, ಶಾಲೆಗೆ ಹಾಗೂ ತಾಲೂಕಿಗೆ ಕೀರ್ತಿ ತನ್ನಿ ಎಂದು ಶುಭ ಹಾರೈಸಿದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಬಿಇಓ ಜಿ.ಶೋಭಾ, ಶೈಕ್ಷಣಿಕ ವರ್ಷ ಆರಂಭವಾದಾಗಿನಿಂದಲೂ ಫಲಿತಾಂಶ ಹೆಚ್ಚಳಕ್ಕೆ ಪೂರಕ ಕಾರ್ಯಕ್ರಮ ನಡೆಸಿದ್ದೇವೆ. ತಾಲೂಕು ಮಟ್ಟದಲ್ಲಿ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರ ನಡೆಸಿದ್ದು, ಎಲ್ಲಾ ವಿಷಯಗಳನ್ನೊಳಗೊಂಡ ಅಭ್ಯಾಸ ಸ್ಫೂರ್ತಿ ಪರೀಕ್ಷಾ ಸಿದ್ಧತಾ ಪುಸ್ತಕ ನೀಡಲಾಗಿದೆ. ಅದರಂತೆ ವಿದ್ಯಾರ್ಥಿಗಳ ಕಲಿಕೆಗೆ ಶ್ರಮ ವಹಿಸಿದ್ದಾರೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಪ್ರೋತ್ಸಾಹ ನೀಡಿ ಕಲಿಕೆಗೆ ಪ್ರೇರೆಪಿಸಲಾಗುತ್ತಿದೆ. ನಾವು ಹೆಚ್ಚಿನ ಶ್ರಮ ವಹಿಸಿರುವುದರಿಂದ ಈ ಬಾರಿ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು ಎಂದರು.

ಇದೇ ವೇಳೆ ರಾಮನಗರ ಸಂಪನ್ಮೂಲ ವ್ಯಕ್ತಿ ವಿ.ಎಸ್.ಪ್ರಶಾಂತ್ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನದ ಜೊತೆಗೆ ಅಧ್ಯಯನ ಶೈಲಿ, ಸುಲಭ ಅಂಕ ಗಳಿಸುವ ವಿಧಾನ ಸೇರಿದಂತೆ ವಿವಿಧ ಕೌಶಲ್ಯಗಳ ಬಗ್ಗೆ ತಿಳಿಸಿಕೊಟ್ಟರು.

ಕಾರ್ಯಾಗಾರದಲ್ಲಿ ಕ್ಷೇತ್ರ ಸಮನ್ವಯ ಸಂಪನ್ಮೂಲ ಅಧಿಕಾರಿ ನಾಗೇಶ್, ಬನ್ನೂರು ರೋಟರಿ ಅಧ್ಯಕ್ಷ ಕೃಷ್ಣೇಗೌಡ, ಪದಾಧಿಕಾರಿಗಳಾದ ಜಿ.ಪಿ.ಪ್ರಸನ್ನ, ಹನುಮಂತೇಗೌಡ, ಮಾಣಿಕ್ ಚಂದ್ ಚೌಧರಿ, ಬಿ.ಕೆ.ವೆಂಕಟೇಶ್ ಪ್ರಸಾದ್, ಬಿ.ಎಸ್.ಯೋಗೇಂದ್ರ ಮಲ್ಲೇಗೌಡ, ಮುರುಳಿ, ಕೃಷ್ಣ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮದ್ದಾನಪ್ಪ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಚಿನ್ನಸ್ವಾಮಿ, ಶಿಕ್ಷಣ ಇಲಾಖೆ ಅಧಿಕಾರಿಗಳಾದ ವಿಶ್ವನಾಥರೆಡ್ಡಿ, ಮಂಟೆಸ್ವಾಮಿ, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಪ್ರಸಾದ್, ನಾಗರಾಜು, ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಕೋಟೆಯಲ್ಲಿ ಸಂವಿಧಾನ ಜಾಗೃತಿ ಜಾಥಾಕ್ಕೆ ಅದ್ಧೂರಿ ಸ್ವಾಗತ



ಹೆಚ್.ಡಿ.ಕೋಟೆಗೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ಹೆಚ್.ಡಿ.ಕೋಟೆ, ಫೆ.17– ಪಟ್ಟಣಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ತಾಲೂಕು ಆಡಳಿತ, ಪುರಸಭೆ ವತಿಯಿಂದ ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ಪಟ್ಟಣದ ಗದ್ದಿಗೆ ವೃತ್ತಕ್ಕೆ ಆಗಮಿಸಿದ ಜಾಗೃತಿ ರಥವನ್ನು ಕಳಸಹೊತ್ತ ವಿದ್ಯಾರ್ಥಿನಿಯರು ಸ್ವಾಗತಿಸಿದರು. ಬಳಿಕ ತಹಸೀಲ್ದಾರ್ ಶ್ರೀನಿವಾಸ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ವೆಂಕಟೇಶ್, ನಂಜಪ್ಪ, ಪ್ರೇಮ್ ಸಾಗರ್, ದಸಂಸ ಸಣ್ಣಕುಮಾರ್ ಸೇರಿದಂತೆ ಹಲವು ಗಣ್ಯರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು.

ನಗಾರಿ, ತಮಟೆ, ನಾದ ಸ್ವರದೊಂದಿಗೆ ಪಟ್ಟಣದ ಹುಣಸೂರು–ಬೇಗೂರು ರಸ್ತೆ, ಸಿದ್ದಪ್ಪಾಜಿ ರಸ್ತೆ ಸೇರಿದಂತೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿದ ಜಾಗೃತಿ ಜಾಥಾ ಮೆರವಣಿಗೆ ಬಸ್ ನಿಲ್ದಾಣದ ಹಳೆ ಆಸ್ಪತ್ರೆ ಜಾಗದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದ ಬಳಿ ಅಂತ್ಯಗೊಂಡಿತು.

ಮೆರವಣಿಗೆಯಲ್ಲಿ ಜೈ ಭೀಮ್ ಆಟೋ ಚಾಲಕರು ಭಾಗವಹಿಸಿದ್ದರು. ಪಟ್ಟಣದ ಆದಿಚುಂಚನಗಿರಿ ಸಂಸ್ಥೆ ವಿದ್ಯಾರ್ಥಿಗಳು ನಗಾರಿ ಸೌಂಡ್‌ಗೆ ಕುಣಿದು ಕುಪ್ಪಳಿಸಿ ದರು. ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳ ಇಲಾಖೆ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿನಿಯರು ಮೆರವಣಿಗೆಯಲ್ಲಿ ಕಳಸ ಹೊತ್ತು ಹೆಜ್ಜೆ ಹಾಕುವ ಮೂಲಕ ಮೆರವಣಿಗೆಗೆ ಮೆರಗು ತಂದರು. ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರಾದ ಶಾಂತಮ್ಮ, ಸುಹಾಸಿನಿ, ಮುಖಂಡರಾದ ಚಾ.ನಂಜುಂಡ ಮೂರ್ತಿ ಇತರರಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ



ಹುಣಸೂರು, ಫೆ.17– ಸಾಲಬಾಧೆ ತಾಳಲಾರದೇ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಶ್ಯಾನುಬೋಗನಹಳ್ಳಿಯಲ್ಲಿ ಇತ್ತೀಚೆಗೆ ನಡೆದಿದೆ.

ಗ್ರಾಮದ ನಿವಾಸಿ ಬೋರೇಗೌಡರ ಪುತ್ರ ಮಹೇಶ್(50) ಆತ್ಮಹತ್ಯೆ ಮಾಡಿಕೊಂಡವರು. ಮೃತರಿಗೆ 3 ಎಕರೆ ಜಮೀನಿದ್ದು, ತಂಬಾಕು ಸೇರಿದಂತೆ ಇನ್ನಿತರ ಬೆಳೆ ಬೆಳೆಯುತ್ತಿದ್ದರು. ವ್ಯವಸಾಯಕ್ಕಾಗಿ ಹುಣಸೂರಿನ ಬ್ಯಾಂಕ್ ಆಫ್ ಬರೋಡಾ ಶಾಖೆಯಲ್ಲಿ 3.75 ಲಕ್ಷ ರೂ. ಹಾಗೂ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನಲ್ಲಿ 5 ಲಕ್ಷ ರೂ., ಚಿನ್ನದ ಮೇಲೆ ಸಾಲ ಪಡೆದಿದ್ದರು. ಅಲ್ಲದೇ ಸಾಕಷ್ಟು ಕೈಸಾಲ ಮಾಡಿಕೊಂಡಿದ್ದರು. ಆದರೆ ಮಳೆ ಬಾರದೆ ನಷ್ಟ ಅನುಭವಿಸಿದ್ದರು. ಇದರಿಂದ ಮನನೊಂದಿದ್ದ ಮಹೇಶ್ ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪುತ್ರ ಅಭಿಷೇಕ್ ಬಿಳಿಕೆರೆ ಠಾಣೆಗೆ ದೂರು ನೀಡಿದ್ದಾರೆ.

ಮಾದೇಗೌಡ ನಿಧನ



ಹುಣಸೂರು, ಫೆ.17– ತಾಲೂಕಿನ ಅಗರನಹಳ್ಳಿ ಸೊಸೈಟಿ ನಿರ್ದೇಶಕ ಮತ್ತು ರಾಯನಹಳ್ಳಿ ನಿವಾಸಿ ಮಾದೇಗೌಡ(57) ಶನಿವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ವೆಂಕಟಮ್ಮ



ಹುಣಸೂರು, ಫೆ.17– ತಾಲೂಕಿನ ತಿಪ್ಲೂರಿನ ಕಾಂಗ್ರೆಸ್ ಮುಖಂಡ, ಗುತ್ತಿಗೆದಾರ ಜೆಸಿಬಿ ಮಹದೇವ್ ಅವರ ಅಜ್ಜಿ ಶತಾಯುಷಿ ವೆಂಕಟಮ್ಮ(102) ಶನಿವಾರ ಬೆಳಗ್ಗೆ ನಿಧನರಾದರು. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂಜನಗೂಡು, ಸರಗೂರಲ್ಲಿ ಸವಿತಾ ಮಹರ್ಷಿ ಜಯಂತಿ





ನಂಜನಗೂಡಿನ ತಾಲೂಕು ಕಚೇರಿಯಲ್ಲಿ ಸವಿತಾ ಮಹರ್ಷಿ ಜಯಂತಿ ನಡೆಯಿತು.
ಮತ್ತೊಂದು ಚಿತ್ರದಲ್ಲಿ ಸರಗೂರಲ್ಲಿ ನಡೆದ ಶ್ರೀ ಸವಿತಾ ಮಹರ್ಷಿ ಜಯಂತಿಯಲ್ಲಿ ಶಿಕ್ಷಕ ಸಿದ್ದಲಿಂಗಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ನಂಜನಗೂಡು/ಸರಗೂರು, ಫೆ.17– ನಂಜನಗೂಡು ಮತ್ತು ಸರಗೂರಲ್ಲಿ ಸವಿತಾ ಮಹರ್ಷಿ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ನಂಜನಗೂಡು: ಸವಿತಾ ಸಮಾಜ ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿದ್ದು, ಸಮಾಜವು ಮುಖ್ಯ ವಾಹಿನಿಗೆ ಬರಬೇಕಾದರೆ ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು ಎಂದು ಸವಿತಾ ಸಮಾಜದ ಮುಖಂಡ ನಾಗೇಂದ್ರ ತಿಳಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಸವಿತಾ ಮಹರ್ಷಿ ಜಯಂತಿಯಲ್ಲಿ ಮಾತನಾಡಿದ ಅವರು, ಎಲ್ಲಾ ರಾಜಕೀಯ ಪಕ್ಷಗಳೂ ಸಹ ಸವಿತಾ ಸಮಾಜವನ್ನು ಮತ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿವೆ. ಅಲ್ಲದೇ ಸವಿತಾ ಸಮಾಜಕ್ಕೆ ಸರ್ಕಾರದ ಸೌಲಭ್ಯಗಳು ನ್ಯಾಯಯುತವಾಗಿ ದೊರಕುತ್ತಿಲ್ಲ. ಬಲಾಢ್ಯ ಸಮಾಜಗಳು ಮೀಸಲಾತಿಯಡಿ ಸೌಲಭ್ಯ ಕಸಿದುಕೊಳ್ಳುತ್ತಿವೆ. ಹೀಗಾಗಿ ಸರ್ಕಾರ ಸವಿತಾ ಸಮಾಜಕ್ಕೆ ಮೀಸಲಾತಿ ಕಲ್ಪಿಸುವ ಮೂಲಕ ಸಮಾಜಕ್ಕೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಇದಕ್ಕೂ ಮುನ್ನಾ ಶಿರಸ್ತೇದಾರ್ ಶ್ರೀನಾಥ್ ಸವಿತಾ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಸಮಾರಂಭದಲ್ಲಿ ಸವಿತಾ ಸಮಾಜದ ಮುಖಂಡರಾದ ಕೆಂಪರಾಜು, ಆನಂದ, ಮಹೇಶ್, ಶಿವಪ್ರಸಾದ್, ಬಸವಣ್ಣ, ಮಹದೇವು, ಸಂತೋಷ್, ದರ್ಶನ್, ರವಿ, ರಾಜಪ್ಪ ನಂಜುಂಡಸ್ವಾಮಿ, ನವೀನ ಇದ್ದರು.

ಸರಗೂರು: ಪಟ್ಟಣದ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ರುಕಿಯಾ ಬೇಗಂ ಅವರ ಅಧ್ಯಕ್ಷತೆಯಲ್ಲಿ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜೆಎಸ್‌ಎಸ್ ಪ್ರೌಢಶಾಲಾ ಶಿಕ್ಷಕ ಸಿದ್ದಲಿಂಗಸ್ವಾಮಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಜಗತ್ತನ್ನು ರಕ್ಷಿಸಿ ನಡೆಸುವವರೇ ಸವಿತಾ ಮಹರ್ಷಿ ಎಂಬುದು ಪುರಾಣಗಳಲ್ಲಿ ಉಲ್ಲೇಖವಾಗಿದೆ. ಸವಿತಾ ಮಹರ್ಷಿಗಳು ಶಿವನ ಕಣ್ಣಿನಿಂದ ಜನಿಸಿದವರು. ರಾಷ್ಟ್ರಕೂಟರು, ವಿಜಯನಗರ ಅರಸರು, ಕಲ್ಯಾಣಿ ಚಾಲುಕ್ಯರ ಶಾಸನಗಳಲ್ಲಿ ಸವಿತಾ ಸಮಾಜದ ಬಗ್ಗೆ ಉಲ್ಲೇಖವಿದ್ದು, ಇವರು ಮಹಾನ್ ಯುಗಪುರುಷರು ಎಂದರು.

ಸವಿತಾ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ತಹಸೀಲ್ದಾರ್ ರುಕಿಯಾ ಬೇಗಂ, ಯುವಪೀಳಿಗೆ ಸವಿತಾ ಮಹರ್ಷಿಗಳ ಆದರ್ಶ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅಭಿವೃದ್ಧಿ ಹೊಂದಬೇಕು ಎಂದರು.

ಸವಿತಾ ಸಮಾಜದ ತಾಲೂಕು ಅಧ್ಯಕ್ಷ ಬಸವರಾಜು ಮಾತನಾಡಿದರು. ಈ ವೇಳೆ ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ, ಮುಖ್ಯಾಧಿಕಾರಿ ಮಂಜುನಾಥ್, ಲಯನ್ಸ್ ಆಡಳಿತಾಧಿಕಾರಿ ದಾಸಾಚಾರ್ ಹಾಗೂ ಸರ್ವ ಸದಸ್ಯರು, ಸವಿತಾ ಸಮಾಜದ ತಾಲೂಕು ಅಧ್ಯಕ್ಷ ನರಸಿಂಹ, ಗೌರವಾಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷ ರಾಜು, ರವಿ, ಕಾರ್ಯದರ್ಶಿ ಪ್ರಭಾಕರ್, ಖಜಾಂಚಿ ಕಾಳಶೆಟ್ಟಿ, ನಿಂಗರಾಜು, ಚಂದ್ರಶೇಖರ್, ಮಾಜಿ ಅಧ್ಯಕ್ಷ ಕುಮಾರ್, ಮುಖಂಡರಾದ ಮಹೇಶ್, ಜಯರಾಮ್, ಮುರಳಿ ಇನ್ನಿತರರಿದ್ದರು.

PERSONNEL WANTED / JOB ADVERTISMENT

SSLC or PUC Pass/Fail - 50 Posts
ITI EM (Male Only) 10 Posts
Age Below 30 Years
Walk-in with Biodata,
Marks Cards, Aadhar Card
between 10:00 am and 4:30 pm
Excel-Par Electronics Private Limited
292/B, Hebbal Industrial Area, Mysore-570016
Ph: 9844157111, 9900557929

FLATS FOR SALE

RAAGA 1 Apartment
2 BHK & 3 BHK
Opp. Christ Public School, Dattagalli 3rd Stage, Mysuru.
9686573798

WANTED VOLUNTEERS

Multi Skilled People For Children Summer Camp.
Interested Volunteers Contact :
9035506790
9008727172



Kottakkal ayurveda

ವೈದ್ಯರತ್ನಂ ಪಿ.ಎಸ್. ವಾರಿಯರ್
ಆರ್ಯ ವೈದ್ಯ ಶಾಲಾ, ಕೊಟ್ಟಕ್ಕಲ್

ಶಾಖಾ ಕ್ಲಿನಿಕ್ ಮತ್ತು ಔಷಧಾಲಯ
ನಂ. 1028/2, ಪಿ.ಡಿ.ಆರ್. ಎಟ್ರಿಯಮ್, ಜಯಲಕ್ಷ್ಮಿ ವಿಲಾಸ ರಸ್ತೆ, ರಾಮಸ್ವಾಮಿ ವೃತ್ತದ ಹತ್ತಿರ, ಮೈಸೂರು–570005
ಎಲ್ಲಾ ಕಾಯಿಲೆಗಳಿಗೆ ಉಚಿತ ತಪಾಸಣೆ
ತಪಾಸಣೆ ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ಮತ್ತು ಮಧ್ಯಾಹ್ನ 3:30 ರಿಂದ ಸಂಜೆ 7.30 ರವರೆಗೆ
ಡಾ॥ ಉಲ್ಲಾಸ್ ಕೆ.ವಿ. ಬಿಎಎಮ್‌ಎಸ್
ಉಪ ಮುಖ್ಯ ವೈದ್ಯಾಧಿಕಾರಿಗಳು ಹಾಗೂ ಶಾಖಾ ವ್ಯವಸ್ಥಾಪಕರು
ಶಾಖಾ ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 8.00 ರವರೆಗೆ

ವಿಶೇಷ ಸೌಲಭ್ಯಗಳು
- ಆನ್‌ಲೈನ್ ಮೂಲಕ ಉಚಿತ ಸಮಾಲೋಚನೆ 08212331063
- ಪ್ರತಿ ತಿಂಗಳು ಪುಷ್ಯ ನಕ್ಷತ್ರ ದಿನದಂದು ಮಕ್ಕಳಿಗೆ ಸ್ವರ್ಣಬಿಂದುಪ್ರಾಶಂ ಹಾಕಲಾಗುತ್ತದೆ.
- ಬಾಣಂತಿಯರಿಗೆ ಔಷಧ ದೊರೆಯುತ್ತದೆ (ಹೆರಿಗೆ ಆದ ನಂತರ)
- ಕೋವಿಡ್ 19 ಬಂದುಹೋದ ನಂತರ ನಮ್ಮಲ್ಲಿ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಲಾಗುತ್ತದೆ.

Railway Station Road — Ramaswamy Circle — RTO Big Lever — Maharani College — Arya Vaidya Sala Kottakkal — Zilla Panchayat

ನಿಮ್ಮ ಮನೆ ಬಾಗಿಲಿಗೆ ಔಷಧ ವಿತರಣೆ ವ್ಯವಸ್ಥೆ ಇರುತ್ತದೆ.
ವಿತರಣಾ ಶುಲ್ಕ ಹಾಕಲಾಗುತ್ತದೆ
ಆನ್ ಲೈನ್ ಆರ್ಡರ್ ಮಾಡಲು 08212331063

Nakhsha BUILDERS | HOMES | COLLECTIVES

HIRING

- CIVIL PROJECT MANAGER
- ARCHITECT
- QUALITY CONTROLLER
- QUANTITY SURVEYOR

Exp: 5+ Years in Residential and Commercial Construction
JOB LOCATION: MYSURU
Contact: +91 81974 10070
Email: hr2@nakhsha.in

PROPERTY FOR SALE

Mysore To Madikeri Highway Attached 17 Guntas Commercial Converted Property For Sale at Mallinathapura Near Piriyapatna.
Contact: 9845995584

SITES FOR SALE

30x40 Sites in Vijayanagar 3rd stage, B-Block, D-Block, E-Block, in prime location.
Fully Developed at Vasanth Nagar 20x30, 36x40, 35x50, 40x75. Park facing, North East Corner / Commercial sites. 80% Bank loan available
Contact: 90608 28384

SITE FOR SALE

55X32 - 1760 Sqft.
North West Corner
SBM Bogadi
'B' Block, Rs. 95 Lakhs
9845349385, 9986380009

COFFEE ESTATE IN COORG FOR SALE

Well maintained Coffee Estate, near Napoklu for sale. Clear Title and RTC
Call : 99027 14303 / 98451 14303

ಸೈಟು ಮಾರಾಟಕ್ಕಿದೆ

36 x 50 ಪೂರ್ವ ದಿಕ್ಕು, ಶಿಕ್ಷಕರ ಬಡಾವಣೆ, ಮೈಸೂರು ನಗರಪಾಲಿಕೆ ವ್ಯಾಪ್ತಿಗೆ ಸೇರುವ ನಿವೇಶನ. ಸಂಪರ್ಕಿಸಿ:
8711880861
9449272270

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ORANGE CITY – MYSORE RESIDENTIAL PLOTS

@ Just Rs. 636/ Sqft.,
NEAR TO NEW KIADB LAND
DIMENSION 30x40, 30x50, 40x60
MADIKERI – MYSORE HIGHWAY
Contact: 9035558025

44 ಮೈಸೂರು ಮಿತ್ರ 44
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.
ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 88003 35638 / 86905 44544.
ಇ–ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

ACCREDITED WITH GRADE A+ NAAC — KARNATAKA STATE OPEN UNIVERSITY

ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/119/2023–24 ದಿನಾಂಕ: 20–01–2024



ನಿಮ್ಮ ಮನೆಯೇ 'ನಿರಂತರ' ಪಾಠ ಶಾಲೆ ಯು.ಜಿ.ಸಿ. ಮಾನ್ಯತೆ ಹೊಂದಿದ ಶಿಕ್ಷಣಕ್ರಮಗಳ ಅಧ್ಯಯನ ಅವಕಾಶವನ್ನು ಕ.ರಾ.ಮು.ವಿ. ಮೂಲಕ ಪಡೆಯಿರಿ

2023–24 ರ ಜನವರಿ ಆವೃತ್ತಿಗೆ ಪ್ರಥಮ ವರ್ಷದ ಒಡಿಎಲ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು

- ಬಿ.ಎ. • ಬಿ.ಕಾಂ.
- ಬಿ.ಲಿಬ್.ಐ.ಎಸ್‌ಸಿ.
- ಬಿ.ಬಿ.ಎ.
- ಬಿ.ಎಸ್.ಡಬ್ಲ್ಯೂ
- ಬಿ.ಇಡಿ.
- ಬಿ.ಎಸ್‌ಸಿ (ಸಂಯೋಜನೆಗಳು)
(• PCM • PMCs • BcBZ • CBZ • BcBMi • BcMiFs • CBMi • CZEs • BcZEs • BcMiEs • BcBEs • CBEs • CMiEs)
[• P-Physics • C-Chemistry • M-Mathematics • Cs-Computer Science • B-Botany • Mi-Microbiology • Bc-Biochemistry • Z-Zoology • Es-Environmental Science • Fs-Food Science & Nutrition]
- ಬಿ.ಎಸ್‌ಸಿ – ಇನ್‌ಫರ್ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
- ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:

• ಎಂ.ಎ.
• ಕನ್ನಡ • ಇಂಗ್ಲಿಷ್ • ಸಂಸ್ಕೃತ • ಉರ್ದು • ಹಿಂದಿ • ತೆಲುಗು • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ

• ಎಂ.ಎಸ್.ಡಬ್ಲ್ಯೂ

• ಎಂ.ಬಿ.ಎ. – ಆನ್‌ಲೈನ್ ಪ್ರವೇಶ ಪರೀಕ್ಷೆಮೂಲಕ
ಸ್ಪೆಷಲೈಜೇಷನ್:
• ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್ಮೇಷನ್ ಟೆಕ್ನಾಲಜಿ • ಆಸ್ಪತ್ರೆ ಮತ್ತು ಆರೋಗ್ಯ ಕಾಳಜಿ ನಿರ್ವಹಣೆ.

• ಎಂ.ಕಾಂ.
ಡ್ಯುಯೆಲ್ ಸ್ಪೆಷಲೈಜೇಷನ್:
• ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ
• ಮಾರ್ಕೆಟಿಂಗ್ ಮ್ಯಾನೆಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್

• ಎಂ.ಸಿ.ಎ.

• ಎಂ.ಲಿಬ್.ಐ.ಎಸ್‌ಸಿ.

• ಎಂ.ಎಸ್‌ಸಿ.
• ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ ಶಾಸ್ತ್ರ • ಬಯೋಕೆಮಿಸ್ಟ್ರಿ • ಬಯೋಟೆಕ್ನಾಲಜಿ • ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಮೈಕ್ರೋ ಬಯಾಲಜಿ • ಮನಃಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಫುಡ್ & ನ್ಯೂಟ್ರಿಷನ್ ಸೈನ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಸೈನ್ಸ್ • ಡಾಟಾ ಸೈನ್ಸ್

ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು–(ಪದವಿ ಆಧಾರಿತ) (ಒಂದು ವರ್ಷ)

• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ನ್ಯೂಟ್ರಿಷನ್ & ಡಯಟೆಟಿಕ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್.

ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಒಂದು ವರ್ಷ)

• ಕನ್ನಡ • ಪತ್ರಿಕೋದ್ಯಮ • ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ • ಭಾಷಾಂತರ ಅಧ್ಯಯನ

ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು (ಆರು ತಿಂಗಳು)

• ಪಂಚಾಯತ್ ರಾಜ್ • ನ್ಯೂಟ್ರಿಷನ್ & ಫುಡ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) • ಭಾಷಾಂತರ ಅಧ್ಯಯನ

ONLINE PROGRAMS • B.A. • B.Com
• M.A. ♦ Kannada ♦ Hindi ♦ Sanskrit ♦ Economics ♦ English
• M.Com • M.B.A. • M.Sc Mathematics

ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು NAAC A+ ಮಾನ್ಯತೆ ಪಡೆದಿದೆ, UGC-DEB ಪತ್ರ ಸಂಖ್ಯೆ. F.No.39-2/2023 (DEB-1) ದಿನಾಂಕ: 17–08–2023, F.No.30-30/2023 (DEBIII) ದಿನಾಂಕ: 11–09–2023, ಮತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಹೊಂದಿರುವ ಏಕೈಕ ಸಾರ್ವಜನಿಕ ವಿಶ್ವವಿದ್ಯಾಲಯವಾಗಿದ್ದು, ಉನ್ನತ ಶಿಕ್ಷಣ ಕಾರ್ಯಕ್ರಮಗಳನ್ನು ದೂರ ಶಿಕ್ಷಣ (ಒ.ಡಿ.ಎಲ್) ಪದ್ಧತಿಯಲ್ಲಿ. AICTE ಮೂಲಕ ಅನುಮೋದಿಸಿದೆ ಎಂಬಿಎ/ಎಂಸಿಎ/ಎಂಎಸ್‌ಸಿ ಡೇಟಾ ಸೈನ್ಸ್ ಪ್ರೋಗ್ರಾಂಗಳು ಅಧಿಸೂಚನೆ ಸಂಖ್ಯೆ: F.No.: ದಕ್ಷಿಣ: ಪಶ್ಚಿಮ/2023–24/ 1–43337817229, ದಿನಾಂಕ: 10.06.2023, ಅಡಿಯಲ್ಲಿ ಒದಗಿಸುತ್ತಿದೆ.

ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :

- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

ಪ್ರವೇಶಾತಿ (ಎನ್‌ರೋಲ್ಮೆಂಟ್) ಮಾಹಿತಿ ಹಾಗೂ ವಿಧಾನ

1. ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು / ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, **ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಖುದ್ದಾಗಿ ಪ್ರವೇಶಾತಿಯನ್ನು ಪಡೆಯುವುದು.** ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು **KSOU Online Admission Portal** ಗೆ ಭೇಟಿ ನೀಡಿ. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: **www.ksoumysuru.ac.in** ನ್ನು ವೀಕ್ಷಿಸುವುದು. ಪ್ರವೇಶಪೂರ್ವ ಸಮಾಲೋಚನೆಗೆ ಮಾತ್ರ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಯಾವುದೇ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.
   - ಪ್ರವೇಶ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಪಾವತಿಸತಕ್ಕದ್ದು.
   - ಅಭ್ಯರ್ಥಿಗಳು ಗುರುತಿನ ಚೀಟಿಗಳು ಹಾಗೂ ಲಭ್ಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮೈಸೂರಿನಲ್ಲಿರುವ ಕರಾಮುವಿಯ ಆಡಳಿತ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಪ.ಜಾ./ಪ.ಪ. ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶಾತಿ ಪಡೆಯಬಹುದಾಗಿದೆ. ಪ್ರವೇಶಾತಿಯು ವಿ.ವಿ.ಯ ಸ್ಕಾಲರ್‌ಷಿಪ್ ಘಟಕವು ವಿಧಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಓಬಿಸಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಿ ಪ್ರವೇಶಾತಿ ಪಡೆದು, ನಂತರ ಸ್ಟೇಟ್ ಸ್ಕಾಲರ್‌ಷಿಪ್ ಪೋರ್ಟಲ್ (SSP) ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಬಹುದು.
   - ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳು ಬೋಧನಾ ಶುಲ್ಕದಲ್ಲಿ ಶೇಕಡ 15%ರಷ್ಟು ರಿಯಾಯಿತಿಯನ್ನು ಪಡೆಯಬಹುದು.
   - ಮಿಲಿಟರಿ ಸೇವೆಯಲ್ಲಿರುವ / ಮಾಜಿ ಸೈನಿಕ ವಿದ್ಯಾರ್ಥಿಗಳು ಬೋಧನಾ ಶುಲ್ಕದಲ್ಲಿ ಶೇಕಡ 15%ರಷ್ಟು ರಿಯಾಯಿತಿಯನ್ನು ಪಡೆಯಬಹುದು.
   - ತೃತೀಯ ಲಿಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ.
   - ಕೋವಿಡ್–19 ಖಾಯಿಲೆಯಿಂದ ಮೃತಪಟ್ಟ ತಂದೆ / ತಾಯಿಯ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ.
   - ಸರ್ಕಾರವು ಆಗಿಂದ್ದಾಗ್ಗೆ ನಿಗದಿಪಡಿಸಿರುವ ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ದೃಷ್ಟಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ (ಬಿ.ಎಡ್. ಮತ್ತು ಎಂ.ಬಿ.ಎ. ಹೊರತುಪಡಿಸಿ).
   - **ಆಟೋ/ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ/ಮಕ್ಕಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ ಶೇಕಡ 25% ರಷ್ಟು ರಿಯಾಯಿತಿ ಇರುತ್ತದೆ.**
   - **ಕೆಎಸ್‌ಆರ್‌ಟಿಸಿ/ಬಿಎಂಟಿಸಿ/ಎನ್‌ಡಬ್ಲ್ಯೂಕೆಆರ್‌ಟಿಸಿ/ಕೆಕೆಆರ್‌ಟಿಸಿಯಲ್ಲಿನ ನೌಕರರುಗಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ ಶೇಕಡ 25% ರಷ್ಟು ರಿಯಾಯಿತಿ ಇರುತ್ತದೆ.**
4. ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ವಿವರಗಳು ವಿವಿಯ ಅಂತರ್‌ಜಾಲದಲ್ಲಿ ಲಭ್ಯವಿದ್ದು ಸಮಾಲೋಚನೆಗೆ ಸಂಪರ್ಕಿಸಬಹುದಾಗಿದೆ
   - ಐಟಿಐ ವಿದ್ಯಾರ್ಹತೆ ಹೊಂದಿರುವವರಿಗೆ ಅಪ್ರೆಂಟಿಸ್‌ಶಿಪ್ ಹಾಗೂ ಸ್ಟೈಫೆಂಡ್ ಅವಕಾಶಗಳಿರುತ್ತವೆ.

ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ) :** ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006, ದೂ (ಕ): 0821–2500981, ಮೊಬೈಲ್: 77950 77377/99012 23043/ 9964 274173/96114 18726/98440 10407.
2. **ಬೆಂಗಳೂರು–1 ಪ್ರಾದೇಶಿಕ ಕೇಂದ್ರ :** ಸ್ಯಾಟಲೈಟ್ ಬಸ್ ನಿಲ್ದಾಣ ಕಟ್ಟಡ, 1ನೇ ಮಹಡಿ, ಮೈಸೂರು ರಸ್ತೆ, ಬಾಪೂಜಿನಗರ, ಬೆಂಗಳೂರು–560 026. ದೂ: 080–26603664, ಮೊಬೈಲ್: 9844965515/ 9844126625.
3. **ಬೆಂಗಳೂರು–2 ಪ್ರಾದೇಶಿಕ ಕೇಂದ್ರ :** ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು–560 003. ದೂ: 080–23448811, ಮೊಬೈಲ್ : 97411 97921.
4. **ಬೆಂಗಳೂರು–3 ಪ್ರಾದೇಶಿಕ ಕೇಂದ್ರ :** ಆದಿತ್ಯ ಶಿಕ್ಷಣ ಸಂಸ್ಥೆ, ನಂ.12, ಕೋಗಿಲು ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ದೇವಸ್ಥಾನದ ಹಿಂಭಾಗ, ಮಾರುತಿನಗರ, ಯಲಹಂಕ, ಬೆಂಗಳೂರು–560 064, ಮೊಬೈಲ್: 98805 26439/90195 26439.
5. **ಬೆಂಗಳೂರು–4 ಪ್ರಾದೇಶಿಕ ಕೇಂದ್ರ:** ನಂ.121, 2ನೇ ಮಹಡಿ, ಮಡಿವಾಳ, ಮಡಿವಾಳ ಸಂಚಾರಿ ಪೊಲೀಸ್ ಸ್ಟೇಷನ್ ಹಿಂಭಾಗ, ಹ್ಯಾಪಿಯೆಸ್ಟ್ ಮೈಂಡ್ ಹತ್ತಿರ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 068. ಮೊಬೈಲ್ : 8618821417/98445 56968.
6. **ಬೆಂಗಳೂರು–5 ಪ್ರಾದೇಶಿಕ ಕೇಂದ್ರ:** ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರಂ, ಬೆಂಗಳೂರು–560 036. ಮೊಬೈಲ್: 87227 88788.
7. **ಬೆಂಗಳೂರು–6 ಪ್ರಾದೇಶಿಕ ಕೇಂದ್ರ:** ಶ್ರೀ ಲಕ್ಷ್ಮೀ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್, ನಂ.4 ಮತ್ತು 5, ಶ್ರೀ ಗಂಧಕಾವಲ್, ಮಾಗಡಿ ಮುಖ್ಯ ರಸ್ತೆ, ಸುಂಕದಕಟ್ಟೆ, ಬೆಂಗಳೂರು–560 091. ಮೊಬೈಲ್: 94486 68880.
8. **ಬೆಳಗಾಂ ಪ್ರಾದೇಶಿಕ ಕೇಂದ್ರ :** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ ಆವರಣ, ನೆಹರು ನಗರ, ಬೆಳಗಾಂ–590 010. ಮೊಬೈಲ್: 96634 51169.
9. **ಬಳ್ಳಾರಿ ಪ್ರಾದೇಶಿಕ ಕೇಂದ್ರ :** ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583 102. ಮೊಬೈಲ್: 9035143912/7892597159.
10. **ಚಾಮರಾಜನಗರ ಪ್ರಾದೇಶಿಕ ಕೇಂದ್ರ :** ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನುಯೆಲ್ ಕ್ರಿಶ್ಚಿಯನ್ ಸ್ಕೂಲ್ ಹತ್ತಿರ, ಚಾಮರಾಜನಗರ–571342, ಮೊಬೈಲ್: 90085 40090.
11. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ :** ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577 102, ಮೊಬೈಲ್: 80887 16236.
12. **ದಾವಣಗೆರೆ ಪ್ರಾದೇಶಿಕ ಕೇಂದ್ರ :** ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು ಹಿಂಭಾಗ, ನಾಗನೂರು ರಸ್ತೆ, ದಾವಣಗೆರೆ–577 004, ಮೊಬೈಲ್: 99864 58055.
13. **ಧಾರವಾಡ ಪ್ರಾದೇಶಿಕ ಕೇಂದ್ರ :** ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಕ್ಯಾಂಪಸ್, ಕೆ.ಸಿ.ಡಿ. ರಸ್ತೆ, ಎಲ್.ಐ.ಸಿ. ಕಚೇರಿ ಎದುರು, ಧಾರವಾಡ–580008. ದೂ: 0836–2441199, ಮೊಬೈಲ್: 99168 94944.
14. **ಹಾಸನ ಪ್ರಾದೇಶಿಕ ಕೇಂದ್ರ :** ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಕೇಂದ್ರೀಯ ವಿದ್ಯಾಲಯದ ಹತ್ತಿರ, ಬಿ. ಟಿ. ಕೊಪ್ಪಲು, ಹಾಸನ–573 118, ಮೊಬೈಲ್: 81978 18807/ 94826 03060.
15. **ಕಲಬುರ್ಗಿ ಪ್ರಾದೇಶಿಕ ಕೇಂದ್ರ :** ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585 106, ಮೊಬೈಲ್: 99167 83555.
16. **ಕಾರವಾರ ಪ್ರಾದೇಶಿಕ ಕೇಂದ್ರ :** ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581 301, ಮೊಬೈಲ್: 99006 67916.
17. **ಕೋಲಾರ ಪ್ರಾದೇಶಿಕ ಕೇಂದ್ರ :** ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563 101, ಮೊಬೈಲ್: 89702 23247.
18. **ಮಂಡ್ಯ ಪ್ರಾದೇಶಿಕ ಕೇಂದ್ರ :** # ಸಿ.ಎಸ್–11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಹೊಳಲು, ಮೇಲುಕೋಟೆ ರಸ್ತೆ, ಮಂಡ್ಯ–571 401. ಮೊಬೈಲ್: 97419 90284.
19. **ಮಂಗಳೂರು ಪ್ರಾದೇಶಿಕ ಕೇಂದ್ರ :** ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, 3ನೇ ಮಹಡಿ, ಶಿರಡಿ ಸಾಯಿಬಾಬಾ ಮಂದಿರದ ಹತ್ತಿರ, ಉಡುಪಿ ಮುಖ್ಯ ರಸ್ತೆ, ಅಶೋಕನಗರ ಅಂಚೆ, ಲೇಡಿಹಿಲ್, ಮಂಗಳೂರು–575 006, ಮೊಬೈಲ್: 99450 58950 / 99721 96692.
20. **ರಾಮನಗರ ಪ್ರಾದೇಶಿಕ ಕೇಂದ್ರ :** ಶಾಂತಿನಿಕೇತನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಬಿ. ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ–562 159, ಮೊಬೈಲ್: 99644 95936.
21. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ :** ಆಲ್ಕೊಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577 201, ದೂ: 08182–250367, ಮೊಬೈಲ್: 91644 67131.
22. **ತುಮಕೂರು ಪ್ರಾದೇಶಿಕ ಕೇಂದ್ರ :** ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ಗಂಗಸಂದ್ರ ಮುಖ್ಯ ರಸ್ತೆ, ತುಮಕೂರು–572 105, ದೂ: 0816–2955580, ಮೊಬೈಲ್: 98445 06629.
23. **ಉಡುಪಿ ಪ್ರಾದೇಶಿಕ ಕೇಂದ್ರ :** ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576 101, ದೂ: 0820–2522247, ಮೊಬೈಲ್: 99725 26647.
24. **ಬೀದರ್ ಪ್ರಾದೇಶಿಕ ಕೇಂದ್ರ :** ಸರ್ಕಾರಿ ಪ್ರ.ದ. ಕಾಲೇಜು, ನೌಬಾದ್, ಬೀದರ್–585 402, ದೂ: 08482–232020, ಮೊಬೈಲ್: 99866 96487.
25. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ :** ಬಸವೇಶ್ವರ ಕಲಾ ಕಾಲೇಜು, ಬಿ.ವಿ.ಎಸ್. ಕ್ಯಾಂಪಸ್, ಬಾಗಲಕೋಟೆ, ಮೊಬೈಲ್: 70222 22241 / 88610 40975.
26. **ಮಡಿಕೇರಿ ಪ್ರಾದೇಶಿಕ ಕೇಂದ್ರ:** ಜೂನಿಯರ್ ಕಾಲೇಜು ಕ್ಯಾಂಪಸ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಇಂಡೋರ್ ಸ್ಟೇಡಿಯಂ, ಮಡಿಕೇರಿ–571 201, ಕೊಡಗು ಜಿಲ್ಲೆ, ಮೊಬೈಲ್: 80733 42310 / 91419 38803.
27. **ಕೊಳ್ಳೇಗಾಲ ಪ್ರಾದೇಶಿಕ ಕೇಂದ್ರ:** ಹರಿಚರಣ್ ಆರ್ಕೇಡ್, 2ನೇ ಮಹಡಿ, ಸೌತ್ ಎಕ್ಸ್‌ಟೆನ್ಷನ್, ಮಹದೇಶ್ವರ ಕಲ್ಯಾಣ ಮಂಟಪದ ಎದುರು, ಕೊಳ್ಳೇಗಾಲ–571 440. ಮೊಬೈಲ್: 98807 40048.
28. **ಚಿತ್ರದುರ್ಗ ಪ್ರಾದೇಶಿಕ ಕೇಂದ್ರ:** ಡಾನ್ ಬಾಸ್ಕೋ ಪದವಿ ಕಾಲೇಜು ಆವರಣ, ಬಿಸಿಎಂ ಹಾಸ್ಟೆಲ್ ಹತ್ತಿರ, ಶನಿಮಹಾತ್ಮ ದೇವಸ್ಥಾನ ರಸ್ತೆ, ಚಳ್ಳಕೆರೆ ರಸ್ತೆ, ಚಿತ್ರದುರ್ಗ–577501. ಮೊಬೈಲ್: 74066 12788.
29. **ಹಾವೇರಿ ಪ್ರಾದೇಶಿಕ ಕೇಂದ್ರ:** ಶ್ರೀ ಶಿವಲಿಂಗೇಶ್ವರ ವಿದ್ಯಾಪೀಠ, ಹುಕ್ಕೇರಿಮಠ, ಹಾವೇರಿ–581110. ಮೊಬೈಲ್: 97432 76734.
30. **ಚಿಕ್ಕಬಳ್ಳಾಪುರ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ (ಪುರಸಭೆ) ಕಾಲೇಜು, ಎಂ. ಜಿ. ರಸ್ತೆ, ಚಿಕ್ಕಬಳ್ಳಾಪುರ–562101. ಮೊಬೈಲ್: 91643 00299.
31. **ರಾಯಚೂರು ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಿಜಲಿಂಗಪ್ಪ ಕಾಲೋನಿ, ವಾಲ್ಮೀಕಿ ಸರ್ಕಲ್ ಹತ್ತಿರ, ಲಿಂಗಸೂರು ರಸ್ತೆ, ರಾಯಚೂರು–584101. ಮೊಬೈಲ್: 96866 19555.
32. **ಯಾದಗಿರಿ ಪ್ರಾದೇಶಿಕ ಕೇಂದ್ರ: ಸರ್ಕಾರಿ ಪದವಿ ಕಾಲೇಜು,** ಚಿತ್ತಾಪುರ ರಸ್ತೆ, ಯಾದಗಿರಿ–585202 ಮೊಬೈಲ್: 98800 61361.
33. **ಬಿಜಾಪುರ ಪ್ರಾದೇಶಿಕ ಕೇಂದ್ರ :** ವಿಎಸ್‌ಜಿ, ಕಲಾ ಮತ್ತು ವಾಣೀಜ್ಯ ಕಾಲೇಜು ಆವರಣ, ನಂ.680/ಇ, ಆಕಾಶವಾಣಿ ಕೇಂದ್ರದ ಎದುರು, ರಿಂಗ್ ರಸ್ತೆ, ವಿಜಯಪುರ–586 103. ಮೊಬೈಲ್: 80509 43144.
34. **ಕೊಪ್ಪಳ ಪ್ರಾದೇಶಿಕ ಕೇಂದ್ರ :** ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ, 1ನೇ ಮಹಡಿ, ಕೊಪ್ಪಳ–583 238, ಮೊಬೈಲ್: 90085 88675.
35. **ಗದಗ ಪ್ರಾದೇಶಿಕ ಕೇಂದ್ರ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ರೈತ ಭವನ, ಜನರಲ್ ಕಾರ್ಯಪ್ಪ ಸರ್ಕಲ್, ಗದಗ–582 101. ಮೊಬೈಲ್: 86189 29376.
36. **ವಿಜಯನಗರ (ಹೊಸಪೇಟೆ) ಪ್ರಾದೇಶಿಕ ಕೇಂದ್ರ :** ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ–583 276, ಮೊಬೈಲ್: 9035143912/7892597159.

ಪ್ರವೇಶಾತಿಯ ಪ್ರಾರಂಭದ ದಿನಾಂಕ: 09.01.2024
ಬಿ.ಇಡಿ. ಶಿಕ್ಷಣ ಕ್ರಮಕ್ಕೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 03.03.2024
ಬಿ.ಇಡಿ. ಸಾಮಾನ್ಯ ಪ್ರವೇಶ ಪರೀಕ್ಷೆಯ ದಿನಾಂಕ: 10.03.2024
ಪ್ರವೇಶಾತಿಯ ಅಂತಿಮ ದಿನಾಂಕ (ಇತರೆ ಶಿಕ್ಷಣ ಕ್ರಮಗಳಿಗೆ) : 31.03.2024

ತರಗತಿ ಹಾಗೂ ಪರೀಕ್ಷೆಗಳನ್ನು ಪ್ರಾದೇಶಿಕ ಕೇಂದ್ರ / ಕಲಿಕೆ ಸಹಾಯ ಕೇಂದ್ರಗಳಲ್ಲಿ ನಡೆಸಲಾಗುವುದು.

ಸಹಿ/–, ಕುಲಸಚಿವರು